# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 05 | ಆಗಸ್ಟ್ 2024 | ಬೆಂಗಳೂರು | ₹ 10/-






ದೆಹಲಿಯ ಕೆಂಪು ಕೋಟೆಯಲ್ಲಿ ಆಯೋಜಿಸಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ಭಾರತದ ಕೃಷಿ ಸಂಸ್ಥೆಯ ವಿಜ್ಞಾನಿಗಳೊಂದಿಗೆ
ಪ್ರಧಾನಿ ಶ್ರೀ ನರೇಂದ್ರ ಮೋದಿ ಸಂವಾದ




ಶಿಕಾರಿಪುರ ತಾಲ್ಲೂಕಿನಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ
ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರಿಂದ ಧ್ವಜಾರೋಹಣ



78ನೇ ಸ್ವಾತಂತ್ರ್ಯ ದಿನಾಚರಣೆಯಂದು ಬಿಜೆಪಿ ರಾಜ್ಯ ಕಾರ್ಯಾಲಯ
ಜಗನ್ನಾಥ ಭವನದಲ್ಲಿ ಗಣ್ಯರಿಂದ ಧ್ವಜಾರೋಹಣ




ಬೆಂಗಳೂರು ದಕ್ಷಿಣ - 'ನಮೋ ವಿದ್ಯಾನಿಧಿ ವಿದ್ಯಾರ್ಥಿ ವೇತನ' ಕಾರ್ಯಕ್ರಮದಲ್ಲಿ
ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್



ವಿಜಯನಗರ ಜಿಲ್ಲೆಯ ತುಂಗ-ಭದ್ರಾ ಡ್ಯಾಮ್‌ನ ಕ್ರಸ್ಟ್ ಗೇಟ್ ಕೆಟ್ಟಿರುವ ಹಿನ್ನೆಲೆಯಲ್ಲಿ
ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಜಲಾಶಯಕ್ಕೆ ಗಣ್ಯರ ಭೇಟಿ ಹಾಗೂ ಪರಿಶೀಲನೆ

# ಭಂಡತನದ ಪರಮಾವಧಿ

ಎನ್‌ಡಿಎ ಆಯೋಜಿಸಿದ್ದ ಮೈಸೂರು ಚಲೋ ಪಾದಯಾತ್ರೆ ಅದ್ಭುತ ಯಶ ಕಂಡಿದೆ. ಮೈಸೂರು ಚಲೋ ಯಾತ್ರೆ ಆಯೋಜನೆಯ ವಿಷಯ ಹೊರಬರುತ್ತಿದ್ದಂತೆ ವ್ಯಕ್ತವಾದ ಕಾಂಗ್ರೆಸ್‌ನ ಪ್ರತಿಕ್ರಿಯೆಯೇ ಅದರ ಹತಾಶ ಮನಃಸ್ಥಿತಿಯ ದ್ಯೋತಕ ಎಂದು ಸ್ಪಷ್ಟವಾಗಿ ಅನ್ನಬಹುದಾಗಿದೆ. ಬಿಜೆಪಿ ಪಾದಯಾತ್ರೆಯ ವಿರುದ್ಧವಾಗಿ ಜನಾಂದೋಲನ ಯಾತ್ರೆಯನ್ನು ಹಮ್ಮಿಕೊಂಡ ಕಾಂಗ್ರೆಸ್ ಚುನಾವಣಾ ಸಮಯದಲ್ಲಿ ಮಾಡಿದಂತೆ ಈಗ ಮತ್ತದೇ ಆಧಾರ ರಹಿತ ಆರೋಪಗಳನ್ನು ಬಿಜೆಪಿ ವಿರುದ್ಧ ಮಾಡಲು ಪ್ರಾರಂಭಿಸಿತು.

ಕಳೆದ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಶೇ 40 ಕಮಿಷನ್ ಎಂಬ ಸುಳ್ಳು ಆರೋಪವನ್ನು ಕಾಂಗ್ರೆಸ್ ಮಾಡಿತು. ಆದರೆ ತಾನೇ ಪೂರ್ಣ ಬಹುಮತ ಪಡೆದು ಅಧಿಕಾರಕ್ಕೆ ಬಂದಿದ್ದರೂ ತಾನೇ ಮಾಡಿದ ಆರೋಪವನ್ನು ಸಾಬೀತು ಮಾಡಲು ಸಾಧ್ಯವಾಗಲೇ ಇಲ್ಲ. ಈಗ ತಾನೇ ಅಧಿಕಾರದ ಗದ್ದುಗೆಯಲ್ಲಿ ಕುಳಿತಿದೆ. ಆದರೆ, ಮಾಡಿದ ಆರೋಪಗಳ ಬಗ್ಗೆ ತನಿಖೆಯನ್ನು ಮಾಡುವುದೂ ಇಲ್ಲ, ತನಗಿರುವ ಅಧಿಕಾರವನ್ನು ಉಪಯೋಗಿಸಿಕೊಂಡು ತನಿಖೆ ಮಾಡಿ ತಪ್ಪಿತಸ್ಥರನ್ನು ಪತ್ತೆ ಹಚ್ಚುವುದೂ ಇಲ್ಲ. ಆದರೆ ಸಾರ್ವಜನಿಕವಾಗಿ ಸುಳ್ಳು ಆರೋಪಗಳನ್ನು ಮಾಡುವುದನ್ನು ನಿಲ್ಲಿಸುವುದೂ ಇಲ್ಲ. ಈಗಾಗಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸುಳ್ಳು ಆರೋಪಗಳನ್ನು ಮಾಡಿ ಕೋರ್ಟ್ ಕಟಕಟೆಯಲ್ಲಿ ನಿಂತಿರುವುದರಿಂದ ಪಾಠ ಕಲಿಯದ ಕಾಂಗ್ರೆಸ್ ನಾಯಕರು ಮತ್ತದೇ ಹಳೇ ಚಾಳಿಯಲ್ಲಿಯೇ ಮುಂದುವರೆಯುತ್ತಿದ್ದಾರೆ.

ಇಷ್ಟಾಯಿತು, ಬಿಜೆಪಿ ಮಾಡುತ್ತಿರುವ ಎರಡು ಪ್ರಮುಖ ಆರೋಪಗಳಿಗೆ ಸಮರ್ಥವಾಗಿ ಸಮಜಾಯಿಷಿ ಕೊಡುವುದನ್ನು ಕಾಂಗ್ರೆಸ್ ನಾಯಕರು ಮಾಡಲೇ ಇಲ್ಲ. ಅದರಲ್ಲೂ ವಾಲ್ಮೀಕಿ ನಿಗಮದ ಹಣದ ಕ್ರಮ ವರ್ಗಾವಣೆಯನ್ನು ಸ್ವತಃ ಮುಖ್ಯಮಂತ್ರಿಗಳೇ ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಮಂತ್ರಿ ನಾಗೇಂದ್ರ ರಾಜೀನಾಮೆ ನೀಡಿ ಜೈಲು ಸೇರಿದ್ದಾರೆ. ಇಡಿ ಅವರನ್ನು ಬಂಧಿಸಿದೆ. ಆದರೆ ತನಿಖೆಗೆ ಸಹಕರಿಸದ ಕಾಂಗ್ರೆಸ್ ಸರಕಾರ ಇಡಿ ಅಧಿಕಾರಿಗಳ ಮೇಲೆಯೇ ದೂರು ದಾಖಲಿಸುವ ಕೀಳು ಮಟ್ಟಕ್ಕೆ ಇಳಿದಿರುವುದು ಕಾಂಗ್ರೆಸ್‌ನ ನೈತಿಕ ಅಧಃಪತನಕ್ಕೆ ಒಂದು ಉದಾಹರಣೆಯಷ್ಟೆ.

## ಸಂಪಾದಕೀಯ

'ಮೈಸೂರು ಚಲೋ ಪಾದಯಾತ್ರೆ' ಬಿಜೆಪಿ ಪಾಳಯದಲ್ಲಿ ಒಂದಿಷ್ಟು ಚೇತನವನ್ನು ನೀಡಿದೆ. ಅತ್ಯಂತ ಯೋಜಿತವಾಗಿ ನಡೆದ ಪಾದಯಾತ್ರೆಗೆ ಸಿಕ್ಕ ಸ್ಪಂದನೆ ಕಾಂಗ್ರೆಸ್ ವಿರುದ್ಧದ ಜನಾಕ್ರೋಶದ ಪ್ರತೀಕ. ಆದರೆ ತಮ್ಮ ಮೇಲೆ ಬಂದ ಆರೋಪಗಳನ್ನೆಲ್ಲಾ ಭಂಡತನದಿಂದ ಸಮರ್ಥಿಸಿಕೊಳ್ಳುವ ಅಥವಾ ಆರೋಪಕ್ಕೆ ಪ್ರತಿಯಾಗಿ ಎನ್‌ಡಿಎ ಮೇಲೆ ಸುಳ್ಳು ಆರೋಪಗಳನ್ನು ಮಾಡಿ ಜನತೆಯನ್ನು ದಿಕ್ಕು ತಪ್ಪಿಸುವ ಕಾಂಗ್ರೆಸ್‌ನ ನಡೆ ಖಂಡನೀಯ. ಅಧಿಕಾರದ ಗದ್ದುಗೆಯ ಮುಂದೆ ಆರೋಪಗಳೆಲ್ಲವನ್ನು ಗೌಣವಾಗಿಯೇ ಪರಿಗಣಿಸುವ ಕಾಂಗ್ರೆಸ್‌ನ್ನು ಮಣಿಸಲು ಹೋರಾಟದ ತೀವ್ರತೆಯನ್ನು ಇನ್ನು ಬಹಳಷ್ಟು ಕಾಲ ಕಾಪಾಡಿಕೊಳ್ಳಬೇಕಾಗಿರುವುದು ಬಿಜೆಪಿಯ ಹೊಣೆಗಾರಿಕೆಯಾಗಿದೆ. ಅದರಲ್ಲೂ ಅಧಿಕಾರಕ್ಕೆ ಬಂದಾಗಲೆಲ್ಲಾ ಭ್ರಷ್ಟಾಚಾರಗಳನ್ನು ಮಾಡುವುದನ್ನೇ ಚಾಳಿಯಾಗಿಸಿಕೊಂಡಿರುವ ಕಾಂಗ್ರೆಸ್ ಸರಕಾರದ ತಾರ್ಕಿಕ ಅಂತ್ಯ ಬಿಜೆಪಿಗೆ ಸವಾಲೂ ಹೌದು, ಸಾಮರ್ಥ್ಯದ ಸಾಬೀತಿಗೆ ಅವಕಾಶವೂ ಹೌದು.

ಕೇಂದ್ರ ಸರಕಾರ ಮಂಡಿಸಿದ ಬಜೆಟ್ ಬಗ್ಗೆ ವ್ಯಾಪಕವಾದ ಸದಭಿಪ್ರಾಯ ವ್ಯಕ್ತವಾಗಿದೆ. ಮಧ್ಯಮ ವರ್ಗಗಳ ಆಶೋತ್ತರಗಳಿಗೆ ಶಕ್ತಿ ತುಂಬಲು ಬಜೆಟ್ 2024 ಪ್ರೇರಣೆಯಾಗಿದೆ. ಯುವ ಜನಾಂಗಕ್ಕೆ ಅವಕಾಶಗಳ ಹಾದಿಯನ್ನು ತೆರೆಯಲಿರುವ, ದೇಶದ ಆರ್ಥಿಕ ಅಭಿವೃದ್ಧಿಗೆ ಹೊಸ ವೇಗ ನೀಡಲಿರುವ, ಕೃಷಿಯಿಂದ ಭವಿಷ್ಯದ ಸುಧಾರಣೆಗಳವರೆಗೆ ಗಮನ ಹರಿಸುವ ಬಜೆಟ್‌ನ್ನು ಮಂಡಿಸಿದ ಆರ್ಥಿಕ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅಭಿನಂದನೆಗೆ ಅರ್ಹರು.

ಮೈಸೂರು ಚಲೋ ಯಾತ್ರೆಯ ನಡುವೆಯೂ ರಾಜ್ಯ ಕಾರ್ಯಕಾರಿಣಿಯಲ್ಲಿ ಯೋಜನೆಯಾದಂತೆ ಬಹುತೇಕ ಜಿಲ್ಲೆಗಳ ಜಿಲ್ಲಾ ಕಾರ್ಯಕಾರಿಣಿಗಳು ಹಾಗೂ ಕಾರ್ಗಿಲ್ ವಿಜಯೋತ್ಸವ ಕಾರ್ಯಗಳು ಯಶಸ್ವಿಯಾಗಿ ಸಂಪನ್ನಗೊಂಡಿದೆ. ಬೂತ್ ಚಲೋ ಅಭಿಯಾನ ಪ್ರಾರಂಭವಾಗಬೇಕಿದೆ. ಸಂಘಟನೆಯ ನಿರಂತರ ಚಟುವಟಿಕೆಗಳು ಕಾರ್ಯಕರ್ತನ ಕ್ರಿಯಾಶೀಲತೆಗೆ ಸಾಕ್ಷಿ ಎನ್ನಬಹುದು. ಮೈಸೂರು ಚಲೋ ಯಾತ್ರೆ ಸಂಘಟನೆಯ ಅತಿ ದೊಡ್ಡ ಸಾಧನೆ ಎನಿಸಿದರೂ ಸಾಗಬೇಕಾದ ಹಾದಿಯೂ ಸಾಕಷ್ಟಿದೆ. ಮತ್ತಷ್ಟು ಚಟುವಟಿಕೆ, ಮತ್ತಷ್ಟು ಕ್ರಿಯಾಶೀಲತೆಗಳು ಸಂಘಟನೆಯ ಶಕ್ತಿ ಗಟ್ಟಿಯಾಗಿಸುತ್ತದೆ. ದುರಾಡಳಿತದ ಕಾಂಗ್ರೆಸ್ ಸರಕಾರವನ್ನು ಕಿತ್ತೊಗೆಯುವ ಕಾರ್ಯಕ್ಕೆ ಮತ್ತಷ್ಟು ವೇಗ ನೀಡುತ್ತದೆ. ಆ ನಿಟ್ಟಿನಲ್ಲಿ ಧೃಡವಾದ ಹೆಜ್ಜೆಗಳನ್ನಿಡೋಣ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253

**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961

## ಸುಭಾಷಿತ



**ನಿಮಗಾಗಿ ಏನನ್ನೂ ಬಯಸಬೇಡಿ,**
**ಎಲ್ಲವನ್ನೂ ಇತರರಿಗೆ ಮಾಡಿ,**
**ಭಗವಂತನಲ್ಲೇ ಇರುವುದು,**
**ಅವನಲ್ಲೇ ಬಾಳುವುದು,**
**ಚಲಿಸುವುದು ಎಂದರೆ ಇದೇ...**

**– ಸ್ವಾಮಿ ವಿವೇಕಾನಂದ**



**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ



06 ಮೈಸೂರು ಚಲೋ ಪಾದಯಾತ್ರೆ



12 78ನೇ ಸ್ವಾತಂತ್ರ್ಯ ದಿನಾಚರಣೆ

- **ದೀವಟಿಗೆ :** ಶಿವರಾಮ ಹರಿ ರಾಜಗುರು ..................... 05
- ಕೇಂದ್ರ ಬಜೆಟ್ 2024 ..................... 14
- ಜಿಲ್ಲಾ ಕಾರ್ಯಕಾರಿಣಿಗಳು ..................... 19
- ರಾಜ್ಯ ಕಾಂಗ್ರೆಸ್ ಸರ್ಕಾರದ ಪ್ರಮಾದ ..................... 22
- ಜನಾಂಗ ದ್ರೋಹಿ ಹೆಚ್.ಸಿ. ಮಹದೇವಪ್ಪ, ಪ್ರಿಯಾಂಕ ಖರ್ಗೆ..................... 24
- 25ನೇ ಕಾರ್ಗಿಲ್ ವಿಜಯೋತ್ಸವ..................... 29
- **ಸ್ಮರಣೆ – ಪ್ರೇರಣೆ :** ದಿ. ಮಾನನೀಯ ನ. ಕೃಷ್ಣಪ್ಪ ..................... 31
- **ಮನ್ ಕಿ ಬಾತ್** – ಖಾದಿ ಬೇಡಿಕೆ ಶೇ 400 ರಷ್ಟು ಹೆಚ್ಚಳ ..................... 34



**ಸಮಸ್ತ ನಾಡಿನ ಜನತೆಗೆ**
**ಗೌರಿ – ಗಣೇಶ**
**ಹಬ್ಬದ**
**ಹಾರ್ದಿಕ ಶುಭಾಶಯಗಳು**

ಹರೀಶ್ ಆತ್ರೇಯ
ಕಾರ್ಯಕರ್ತರು



# ಶಿವರಾಮ ಹರಿ ರಾಜಗುರು

## (24 ಆಗಸ್ಟ್ 1908 – 23 ಮಾರ್ಚ್ 1931)

## ರಾಜಕೀಯ ನೇತಾರ, ಸಮರಸತೆಯ ಹರಿಕಾರ

ಶಿವರಾಮ ಹರಿ ರಾಜಗುರು ಆಗಸ್ಟ್ 24, 1908 ರಂದು ಮಹಾರಾಷ್ಟ್ರದ ಪುಣೆ ಬಳಿಯ ಖೇಡ್ ಎಂಬ ಸಣ್ಣ ಹಳ್ಳಿಯಲ್ಲಿ ಜನಿಸಿದರು. ಚಿಕ್ಕಂದಿನಿಂದಲೇ ತಮ್ಮ ದೇಶದ ಬಗ್ಗೆ ಅತೀವವಾದ ಭಕ್ತಿ ಮತ್ತು ಪ್ರೀತಿಯನ್ನು ಹೊಂದಿದ್ದ ಬಾಲಕ ರಾಜಗುರು ಭಾರತವನ್ನು ಬ್ರಿಟಿಷ್ ಆಳ್ವಿಕೆಯಿಂದ ಮುಕ್ತವಾಗಿ ನೋಡುವ ಬಯಕೆಯನ್ನು ಹೊಂದಿದ್ದ ದೇಶಪ್ರೇಮಿ.

ಯುವಕರಲ್ಲಿ ಕ್ರಾಂತಿಕಾರಿ ವಿಚಾರಗಳು ವೇಗವನ್ನು ಪಡೆಯುತ್ತಿದ್ದ ಸಂದರ್ಭದಲ್ಲಿ ಅವರು ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್‌ಗೆ ಸೇರಿದ ನಂತರ ಅವರ ಭಾರತೀಯ ಸ್ವಾತಂತ್ರ್ಯ ಹೋರಾಟದ ಪ್ರಯಾಣವು ಪ್ರಾರಂಭವಾಯಿತು. ಬ್ರಿಟಿಷ್ ಆಳ್ವಿಕೆಯನ್ನು ಉರುಳಿಸಲು ಪ್ರಯತ್ನಿಸಿದ ಕ್ರಾಂತಿಕಾರಿ ಸಂಘಟನೆಯಲ್ಲಿ ಅವರು ಭಗತ್ ಸಿಂಗ್ ಮತ್ತು ಸುಖದೇವ್ ಥಾಪರ್ ಅವರನ್ನು ಭೇಟಿಯಾದರು. ಈ ಮೂವರು ಒಂದೇ ದೇಹದಂತೆ ಕಾರ್ಯ ನಿರ್ವಹಿಸುವ ಜೋಡಿಗಳಾಗಿ ಬೆಳೆದರು. ಸೌಂಡರ್ಸ್‌ನ ಐತಿಹಾಸಿಕ ಹತ್ಯೆ ಬ್ರಿಟಿಷರ ವಿರುದ್ಧ ಧಿಕ್ಕರಿಸುವ ಅತ್ಯಂತ ಮಹತ್ವದ ಕೃತ್ಯವೆಂದರೆ ಜಾನ್ ಸೌಂಡರ್ಸ್ ಎಂಬ ಬ್ರಿಟಿಷ್ ಪೊಲೀಸ್ ಅಧಿಕಾರಿಯ ಹತ್ಯೆ.

ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರಿಂದ ಉಂಟಾದ ಗಾಯಗಳಿಗೆ ಬಲಿಯಾದ ಭಾರತೀಯ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ನಾಯಕ ಲಾಲಾ ಲಜಪತ್ ರಾಯ್ ಅವರ ಸಾವಿಗೆ ಪ್ರತೀಕಾರವಾಗಿ ಈ ಕೃತ್ಯವನ್ನು ಮಾಡಲಾಯ್ತು. ಡಿಸೆಂಬರ್ 17, 1928 ರಂದು, ರಾಜಗುರುರವರು ಭಗತ್ ಸಿಂಗ್ ಮತ್ತು ಸುಖದೇವ್ ಅವರೊಂದಿಗೆ ಲಾಲಾ ಲಜಪತ್ ರಾಯ್ ಅವರ ಮರಣದ ಸೇಡು ತೀರಿಸಿಕೊಳ್ಳುವ ಯೋಜನೆಯಲ್ಲಿ ಸೇರಿಕೊಂಡರು. ರಾಜಗುರು ಪಾತ್ರವು ನಿರ್ಣಾಯಕವಾಗಿತ್ತು; ಅವರು ಮಿಷನ್‌ನ ಯಶಸ್ಸನ್ನು ಖಾತ್ರಿಪಡಿಸಿದ ಶಾರ್ಪ್‌ಶೂಟರ್ ಆಗಿದ್ದರು. ಈ ಧೈರ್ಯಶಾಲಿ ಕಾರ್ಯವು ಬ್ರಿಟಿಷರಿಗೆ ತಮ್ಮ ಪತನದ ಸಂದೇಶವನ್ನು ಕಳುಹಿಸಿತು ಮತ್ತು ಭಾರತೀಯ ಕ್ರಾಂತಿಕಾರಿ ಚಳುವಳಿಗೆ ಶಕ್ತಿ ತುಂಬಿತು ಎಂದರೆ ಅತಿಶಯೋಕ್ತಿಯಲ್ಲ.

ಈ ಯುವ ದೇಶಭಕ್ತರು ತಮ್ಮ ತಾಯ್ನಾಡಿಗಾಗಿ ಹೋರಾಡಲು ಯಾವ ಬಲಿದಾನಕ್ಕೂ ಸಿದ್ಧರಿರುವ ಮನಸ್ಥಿತಿಯನ್ನು ತೋರಿಸಿದರು. ಬಂಧನ ಮತ್ತು ವಿಚಾರಣೆ ಆದರೂ ಮೂವರ ಕೃತ್ಯಗಳು ಶಿಕ್ಷೆಗೆ ಗುರಿಯಾಗಲಿಲ್ಲ. ರಾಜಗುರು, ಭಗತ್ ಸಿಂಗ್ ಮತ್ತು ಸುಖದೇವ್ ಅವರನ್ನು ಬಂಧಿಸಲಾಯಿತು ಮತ್ತು ಹೆಚ್ಚು ಪ್ರಚಾರದ ವಿಚಾರಣೆಗೆ ಒಳಪಡಿಸಲಾಯಿತು. ಗಂಭೀರ ಪರಿಣಾಮಗಳನ್ನು ತಿಳಿದಿದ್ದರೂ ಸಹ, ಅವರು ತಮ್ಮ ನಂಬಿಕೆಗಳಲ್ಲಿ ದೃಢವಾಗಿ ಉಳಿದರು. ಸ್ವಾತಂತ್ರ್ಯ ಮತ್ತು ನ್ಯಾಯದ ಅವರ ಆಲೋಚನೆಗಳನ್ನು ಜನರಿಗೆ ತಲುಪಿಸಲು ವಿಚಾರಣೆಯನ್ನು ವೇದಿಕೆಯಾಗಿ ಬಳಸಿಕೊಂಡರು. ನಿಶ್ಚಿತ ಸಾವಿನ ಮುಖಾಂತರ ಅವರ ಪ್ರತಿಭಟನೆಯು ವಸಾಹತುಶಾಹಿ ದಬ್ಬಾಳಿಕೆಯ ವಿರುದ್ಧದ ಪ್ರತಿರೋಧದ ಪ್ರಬಲ ಸಂಕೇತವಾಯಿತು.

ಮಾರ್ಚ್ 23, 1931 ರಂದು, ರಾಜಗುರು, ಭಗತ್ ಸಿಂಗ್ ಮತ್ತು ಸುಖದೇವ್ ಅವರನ್ನು ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಅವರು ಅಚಲ ಧೈರ್ಯದಿಂದ ಸಾವನ್ನು ಸ್ವೀಕರಿಸಿದರು, ಅವರ ಆತ್ಮಗಳು ಮುರಿಯಲಿಲ್ಲ. ಅವರ ಹುತಾತ್ಮತೆಯು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮಹತ್ವದ ಘಟನೆಯಾಗಿದೆ. ಸ್ವಾತಂತ್ರ್ಯಕ್ಕಾಗಿ ತಮ್ಮ ಹೋರಾಟವನ್ನು ಮುಂದುವರೆಸಲು ಯುವ ಸಮುದಾಯಕ್ಕೆ ಪ್ರೇರಣೆಯನ್ನು ಕೊಟ್ಟಿದ್ದಾರೆಂದರೆ ತಪ್ಪೆನಿಸುವುದಿಲ್ಲ. ಅವರ ಧೈರ್ಯ ಮತ್ತು ಸಂಕಲ್ಪವು ಭಾರತೀಯರ ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತಿದೆ. ರಾಜಗುರು ಅವರ ಗ್ರಾಮವಾದ ಖೇಡ್ ಅನ್ನು ಅವರ ಗೌರವಾರ್ಥವಾಗಿ ರಾಜಗುರುನಗರ ಎಂದು ಮರುನಾಮಕರಣ ಮಾಡಲಾಯಿತು ಮತ್ತು ಭಾರತದಾದ್ಯಂತ ಹಲವಾರು ಶಾಲೆಗಳು, ರಸ್ತೆಗಳು ಮತ್ತು ಸಂಸ್ಥೆಗಳು ಅವರ ಹೆಸರನ್ನು ಹೊಂದಿದ್ದು, ಅವರ ಪರಂಪರೆಯು ಜೀವಂತವಾಗಿರುವುದನ್ನು ಖಚಿತಪಡಿಸುತ್ತದೆ.

ಶಿವರಾಮ ಹರಿ ರಾಜಗುರು ಅವರ ಜೀವನವು ಶೌರ್ಯ, ದೇಶಭಕ್ತಿ ಮತ್ತು ತ್ಯಾಗದ ಸಂಕೇತವಾಗಿದೆ. ಭಗತ್ ಸಿಂಗ್ ಮತ್ತು ಸುಖದೇವ್ ಜೊತೆಗೆ ಭಾರತೀಯ ಸ್ವಾತಂತ್ರ್ಯದ ಕಾರಣಕ್ಕಾಗಿ ಅವರ ಅಚಲವಾದ ಸಮರ್ಪಣೆಯು ಬ್ರಿಟಿಷ್ ಆಡಳಿತದ ವಿರುದ್ಧ ಕ್ರಾಂತಿಕಾರಿ ಚಳುವಳಿಯನ್ನು ಉತ್ತೇಜಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿತು.



# ಕಾರ್ಯಕರ್ತರ ಉತ್ಸಾಹ ನೂರ್ಮಡಿಗೊಳಿಸಿದ

# ಪಾದಯಾತ್ರೆ

## ಮೈಸೂರು ಚಲೋ




**ರತನ್ ರಮೇಶ್ ಪೂಜಾರಿ**

ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


'**ಕಾಂ**ಗ್ರೆಸ್ ಬರಲಿದೆ ಪ್ರಗತಿ ತರಲಿದೆ' ಎಂಬ ಘೋಷವಾಕ್ಯದೊಂದಿಗೆ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡುವ ಮೂಲಕ ಹಾಗೂ ಬಿಜೆಪಿ ಸರ್ಕಾರದ ವಿರುದ್ಧ ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಮಾಡಿ ಕಾಂಗ್ರೆಸ್ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬಂತು. ಅಧಿಕಾರಕ್ಕೆ ಬಂದ ಒಂದು ಕಾಲು ವರ್ಷವಾದರೂ ತಾವು ವಾಗ್ದಾನ ಮಾಡಿದ ಗ್ಯಾರಂಟಿಗಳಲ್ಲಿ ಯಾವುದನ್ನೂ ಸರಿಯಾಗಿ ಜಾರಿಗೊಳಿಸಿದ ಉದಾಹರಣೆ ಕಾಣಸಿಗುವುದಿಲ್ಲ. ಕೆಲವೊಂದು ಗ್ಯಾರಂಟಿಯನ್ನು ಕೊಟ್ಟರೂ ಇನ್ನೊಂದು ಕಡೆಯಿಂದ ಅದಕ್ಕೂ ಡಬಲ್ ಪ್ರಮಾಣದಲ್ಲಿ ಜನರಿಂದಲೇ ಕಿತ್ತುಕೊಳ್ಳುವಂತಹ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ಇನ್ನು ರಾಜ್ಯದ ಅಭಿವೃದ್ಧಿ ವಿಷಯದ ಬಗ್ಗೆ ಕೇಳಲೇಬೇಡಿ. ಕಳೆದ ಒಂದು ಕಾಲು ವರ್ಷದಲ್ಲಿ ಅಭಿವೃದ್ಧಿ ಎಂಬ ಶಬ್ದವನ್ನು ಕಾಂಗ್ರೆಸ್ ತನ್ನ ಕಡತದಿಂದಲೇ ಕಿತ್ತೆಸೆದಿದೆ. ಆದರೆ ಕಾಂಗ್ರೆಸ್ ಬರಲಿದೆ ಪ್ರಗತಿ ತರಲಿದೆ ಎನ್ನುವುದಕ್ಕೆ ಅನ್ವರ್ಥವಾಗುವಂತೆ ನಡೆದ ಒಂದೇ ಒಂದು




ವಿಚಾರವೆಂದರೆ ಅದು ಹಗರಣಗಳಲ್ಲಿ ಪ್ರಗತಿ. ವೈಎಸ್‌ಟಿ ಟ್ಯಾಕ್ಸ್‌ನೊಂದಿಗೆ ಶುರುವಾದ ಹಗರಣಗಳ ಸರಮಾಲೆ, ನಂತರ ವಾಲ್ಮೀಕಿ ನಿಗಮದ ಹಗರಣ ಪ್ರವಾಸೋದ್ಯಮ ಇಲಾಖೆ ಹಗರಣ, ಕಾರ್ಮಿಕ ಇಲಾಖೆಯ ಹಗರಣ, ವೈದ್ಯಕೀಯ ಇಲಾಖೆ ಹಗರಣ, ಹೀಗೆ ಎಗ್ಗಿಲ್ಲದೆ ಹಗರಣಗಳು ನಡೆದಿದೆ.

ಈ ಎಲ್ಲಾ ಹಗರಣಗಳನ್ನು ಮೀರಿಸುವ ಹಗರಣಗಳ ರಾಜ ಸುಮಾರು 5000 ಕೋಟಿ ರೂಪಾಯಿಯಷ್ಟು ಅಕ್ರಮದ ಹಾಗೂ ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ಸುತ್ತ ಸುತ್ತಿಕೊಂಡ ಹಗರಣವೇ ಮುಡಾ ಹಗರಣ.

**ಸದನದಲ್ಲಿ ಚರ್ಚೆಗೆ ಅವಕಾಶವಿಲ್ಲ**

ಮುಡಾ ಹಗರಣ ಬೆಳಕಿಗೆ ಬಂದ ತಕ್ಷಣವೇ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ  ಬಿ ವೈ ವಿಜಯೇಂದ್ರರವರ ನೇತೃತ್ವದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ರಾಜೀನಾಮೆಗಾಗಿ ಹಲವು ಪ್ರತಿಭಟನೆಗಳು ನಡೆದವು.

ವಿಧಾನಸಭೆಯ ಅಧಿವೇಶನದಲ್ಲಿ ವಾಲ್ಮೀಕಿ ನಿಗಮದ ಹಗರಣ, ಮೂಡ ಹಗರಣ, ಡೆಂಗ್ಯು ಮಹಾಮಾರಿ ತಡೆಯುವಲ್ಲಿ ಸರ್ಕಾರದ ವೈಫಲ್ಯ ಹೀಗೆ ವಿವಿಧ ವಿಚಾರಗಳ ಬಗ್ಗೆ ಚರ್ಚಿಸುವ ಯೋಜನೆ ಇತ್ತು. ಮುಡಾ ವಿಚಾರವಾಗಿ ವಿಧಾನಸಭಾ ಅಧಿವೇಶನದಲ್ಲಿ ಭಾರತೀಯ ಜನತಾ ಪಕ್ಷ ಹಾಗೂ ಜೆಡಿಎಸ್ ಪಕ್ಷದ ಸದಸ್ಯರು ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ್ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣ ಸ್ವಾಮಿರವರ ನೇತೃತ್ವದಲ್ಲಿ ವಿಸ್ತೃತ ಚರ್ಚೆಗೆ ಅವಕಾಶ ಕೋರಲಾಗಿತ್ತು. ಕರ್ನಾಟಕದ ಜನರ ಆಶಯವೂ ಇದೆ ಆಗಿತ್ತು. ಆದರೆ ಉತ್ತರ ಕೊಡುವುದು ಹಾಗಿರಲಿ, ಚರ್ಚೆಗೆ ಅವಕಾಶವೇ ಸಿಗಲಿಲ್ಲ. ಪ್ರಶ್ನೆಗಳಿಗೆ ಉತ್ತರಿಸದೆ ಪಲಾಯನ ತಂತ್ರವನ್ನು ಸ್ವತಃ ಶ್ರೀ ಸಿದ್ಧರಾಮಯ್ಯನವರು ಹಾಗೂ ಕಾಂಗ್ರೆಸ್ ಪಕ್ಷದ ನಾಯಕರು ಅನುಸರಿಸಿ ತಮ್ಮ ಭಂಡತನವನ್ನು ಪ್ರದರ್ಶಿಸಿದರು.

ಸರ್ಕಾರದಿಂದ ಹೋರಾಟಗಳನ್ನು ಹತ್ತಿಕ್ಕುವ ಪ್ರಯತ್ನಗಳೂ ನಡೆದವು. ಇಷ್ಟೆಲ್ಲಾ ಆದರೂ ಪಟ್ಟು ಬಿಡದೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ರಾಜೀನಾಮೆಗೆ ಆಗ್ರಹಿಸಿ ಬೆಂಗಳೂರಿನಿಂದ ಮೈಸೂರಿನ ವರೆಗೆ ಬೃಹತ್ ಹೋರಾಟವನ್ನು ಕೈಗೊಳ್ಳುವ ನಿರ್ಧಾರಕ್ಕೆ ಎನ್ ಡಿಎ ಮೈತ್ರಿಕೂಟದಿಂದ ಬರಲಾಯಿತು. ಅದುವೇ '**ಮೈಸೂರು ಚಲೋ**' ಪಾದಯಾತ್ರೆ.

**ಸಮನ್ವಯದ ಸಿದ್ಧತೆ**

ಜುಲೈ 28ರಂದು ಬೆಂಗಳೂರಿನ ಗೋಲ್ಡ್ ಫಿಂಚ್ ಹೋಟೆಲ್‌ನಲ್ಲಿ ಬಿಜೆಪಿ-ಜೆಡಿಎಸ್ ಪಕ್ಷಗಳ ಸಮನ್ವಯ ಸಭೆ ನಡೆಯಿತು. ಈ ಸಭೆಯಲ್ಲಿ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ದುರಾಡಳಿತದ ವಿರುದ್ಧ ಜನಜಾಗೃತಿ ಉಂಟುಮಾಡುವ ನಿಟ್ಟಿನಲ್ಲಿ

ಹೋರಾಟವನ್ನು ತೀವ್ರ ಸ್ವರೂಪಕ್ಕೆ ಕೊಂಡೊಯ್ಯಲು ಕೆಲವು ನಿರ್ಧಾರಗಳನ್ನು ಕೈಗೊಳ್ಳಲಾಯಿತು.



ಜುಲೈ 29ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಮೈಸೂರು ಚಲೋ ಪಾದಯಾತ್ರೆಯ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿತ್ತು. ಭ್ರಷ್ಟ ಮುಖ್ಯಮಂತ್ರಿಗಳು ಹಾಗೂ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ನಡೆಯಲಿರುವ ಬೃಹತ್ ಪಾದಯಾತ್ರೆಯ ಸಿದ್ಧತೆಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಆಗಸ್ಟ್ 2 ರಂದು ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಪತ್ರಿಕಾಗೋಷ್ಠಿ ನಡೆಸಿ ಮಾಧ್ಯಮಗಳ ಮೂಲಕ ಪಾದಯಾತ್ರೆಯ ಮಾಹಿತಿಯನ್ನು ನೀಡಿದರು.

### ಯಾತ್ರೆಗೆ ಚಾಲನೆ

ಆಗಸ್ಟ್ 3ರ ಬೆಳಿಗ್ಗೆ ರಾಜ್ಯಾಧ್ಯಕ್ಷರು ಪತ್ನಿ ಸಮೇತರಾಗಿ ನಾಡದೇವತೆ ಚಾಮುಂಡೇಶ್ವರಿಯ ದರ್ಶನ ಪಡೆದು ಮೈಸೂರು ಚಲೋ ಪಾದಯಾತ್ರೆಯ ಯಶಸ್ಸು ಹಾಗೂ ಜನರ ಒಳಿತಿಗಾಗಿ ದೇವಿಯ ಆಶೀರ್ವಾದ ಹಾಗೂ ಕೃಪಾಕಟಾಕ್ಷ ಕೋರಿದರು. ಹತ್ತು ಗಂಟೆ ಸುಮಾರಿಗೆ ಕೆಂಗೇರಿಯ ಕೆಂಪಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಪಾದಯಾತ್ರೆಗೆ ಚಾಲನೆ ಸಿಕ್ಕಿತು. ನಂತರ ಕೆಂಗೇರಿಯ ಜೆಕೆ ಕನ್ವೆನ್ಷನ್ ಹಾಲ್ ಆವರಣದಲ್ಲಿ ವಿಧ್ಯುಕ್ತವಾಗಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ನೇತೃತ್ವದ ಬೃಹತ್ ಪಾದಯಾತ್ರೆಗೆ ಚಾಲನೆ ನೀಡಲಾಯಿತು.

ಮೈಸೂರಿನ ಸಹಸ್ರಾರು ನಿವೇಶನ ವಂಚಿತ ಬಡವರು ಹಾಗೂ ಸೂರು ರಹಿತರಿಗಾಗಿ, ಪರಿಶಿಷ್ಟ ಪಂಗಡದ ಕಲ್ಯಾಣಕ್ಕೆ ಮೀಸಲಾದ ಹಣದ ರಕ್ಷಣೆಗಾಗಿ, ಭ್ರಷ್ಟ ಅಧಿಕಾರಸ್ಥರಿಗೆ ಶಿಕ್ಷೆ ಕೊಡಿಸುವುದಕ್ಕಾಗಿ, ಜನವಿರೋಧಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕಾಗಿ, ತಾರ್ಕಿಕ ಅಂತ್ಯ ಕಾಣುವವರೆಗೂ ಒಗ್ಗಟ್ಟಿನಿಂದ ಹೆಜ್ಜೆ ಹಾಕಬೇಕೆಂಬ ಸಂಕಲ್ಪ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ ವೈ ವಿಜಯೇಂದ್ರರವರು, ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಂಸದೀಯ ಮಂಡಳ ಸದಸ್ಯರಾದ ಶ್ರೀ ಬಿಎಸ್ ಯಡಿಯೂರಪ್ಪನವರು, ಜೆಡಿಎಸ್ ರಾಜ್ಯಾಧ್ಯಕ್ಷರು ಹಾಗೂ ಕೇಂದ್ರ ಸಚಿವರಾದ ಶ್ರೀ ಎಚ್ ಡಿ



ಕುಮಾರಸ್ವಾಮಿರವರು, ಕೇಂದ್ರ ಸಚಿವರಾದ ಶ್ರೀ ಪ್ರಲ್ಹಾದ ಜೋಶಿ, ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ್, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಸದಾನಂದ ಗೌಡ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಉಸ್ತುವಾರಿಗಳಾದ ಶ್ರೀ ರಾಧಾ ಮೋಹನದಾಸ ಅಗರ್ವಾಲ್, ಸಹ ಉಸ್ತುವಾರಿಗಳಾದ ಶ್ರೀ ಸುಧಾಕರ ರೆಡ್ಡಿ, ವಿಧಾನ ಪರಿಷತ್ ವಿರೋಧ ಪಕ್ಷ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ, ಡಾ. ಅಶ್ವಥ್ ನಾರಾಯಣ್, ಕೇಂದ್ರ ಸಚಿವರಾದ ಕು. ಶೋಭಾ ಕರಂದ್ಲಾಜೆ, ಶ್ರೀ ವಿ. ಸೋಮಣ್ಣ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಶ್ರೀ ಸುರೇಶ್ ಬಾಬು, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ಶ್ರೀನಿಖಿಲ್ ಕುಮಾರ ಸ್ವಾಮಿ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಸಂಸದರು, ಶಾಸಕರು, ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು. ನಂತರ ಮೊದಲ ದಿನದ ಪಾದಯಾತ್ರೆಯ ನಡಿಗೆ ಜೆಕೆ ಕನ್ವೆನ್ಷನ್ ಹಾಲ್ ನಿಂದ ಶುರುವಾಗಿ ಸುಮಾರು 16 ಕಿಲೋಮೀಟರ್ ಕ್ರಮಿಸಿ ಬಿಡದಿಯ ಮಂಜುನಾಥ ಕನ್ವೆನ್ಷನ್ ಹಾಲ್ ಹತ್ತಿರ ಯಶಸ್ವಿಯಾಗಿ ಸಮಾಪ್ತಿಗೊಂಡಿತು.

ಮೊದಲ ದಿನದ ಪಾದಯಾತ್ರೆಯಲ್ಲಿ ಕೈ ಕಾಲು ನೋವು, ಸುಸ್ತಾಗಿದ್ದರೂ ಅದನ್ನು ಮರೆತು ಎರಡನೆಯ ದಿನದ ಪಾದಯಾತ್ರೆಗೆ ಇನ್ನೂ ಹೆಚ್ಚಿನ ಉತ್ಸಾಹದಿಂದ ರಾಜ್ಯಾಧ್ಯಕ್ಷರು, ಎಲ್ಲಾ ನಾಯಕರು ಹಾಗೂ ಕಾರ್ಯಕರ್ತರು ಸಿದ್ದರಾಗಿ ಹೊರಟರು. 2ನೇ ದಿನದ ಪಾದಯಾತ್ರೆಯನ್ನು ರಾಜ್ಯಾಧ್ಯಕ್ಷರು ತಮಟೆ ಬಾರಿಸುವ ಮೂಲಕ ಚಾಲನೆ ನೀಡಿದರು. ಈ ದಿನದ ಪಾದಯಾತ್ರೆಗೆ ಬಿಜೆಪಿ ಎಸ್‌ಸಿ ಮೋರ್ಚಾ ಸಹಯೋಗ ನೀಡಿತು. ಬಿಡದಿಯ ಮಂಜುನಾಥ ಕನ್ವೆನ್ಷನ್ ಹಾಲ್ ನಿಂದ ಶುರುವಾಗಿ ರಾಮನಗರ ಜಿಲ್ಲೆಯಲ್ಲಿ 22 ಕಿಮೀ ಕ್ರಮಿಸಿ ಕೆಂಗಲ್‌ನ ಕೆವಿಕೆ ಕನ್ವೆನ್ಷನ್ ಹಾಲ್‌ನಲ್ಲಿ ಮುಕ್ತಾಯಗೊಂಡಿತು. ರಾಮನಗರದ ಪದ್ಮಾವತಿ ದೇವಸ್ಥಾನದ ಹತ್ತಿರ ಮಧ್ಯಾಹ್ನದ ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತು.

3ನೇ ದಿನದ ಪಾದಯಾತ್ರೆಗೆ ಕೆಂಗಲ್ ಹನುಮಂತಯ್ಯನವರ ಸಮಾಧಿಗೆ ಭೇಟಿ ನೀಡಿ ನಮನ ಸಲ್ಲಿಸುವ ಮೂಲಕ ಚಾಲನೆ ಸಿಕ್ಕಿತು.

ಆಗಸ್ಟ್ 5ರಂದು ಬೆಳಿಗ್ಗೆ ಕೆಂಗಲ್ ನಲ್ಲಿ ಶುರು ಮಾಡಿ 20 ಕಿಲೋ ಮೀಟರ್ ಕ್ರಮಿಸಿ ಮದ್ದೂರಿನ ನಿಡಘಟ್ಟದಲ್ಲಿ ಸಮಾಪ್ತಿಯಾಯಿತು. ದೊಡ್ಡ ಮಾಳೂರಿನ ಚೌಡೇಶ್ವರಿ ಕನ್ವೆನ್ಷನ್ ಹಾಲಿನಲ್ಲಿ ಮಧ್ಯಾಹ್ನದ ಭೋಜನದ ವ್ಯವಸ್ಥೆ ಇತ್ತು. ಬೆಳಿಗ್ಗೆ ಉಪಹಾರ, ಮಧ್ಯಾಹ್ನ ರಾತ್ರಿಯ ಭೋಜನ, ಹಾಗೂ ದಿನಾಲೂ ದಾರಿಯುವುದಕ್ಕೂ ಅಲ್ಲಲ್ಲಿ ಚಾ, ಕಾಫಿ, ಬಿಸ್ಕೆಟ್, ಸೌತೆಕಾಯಿ, ಇತರ ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು.



4ನೇ ದಿನದ ಪಾದಯಾತ್ರೆ ರಾಜ್ಯಾಧ್ಯಕ್ಷರು ಬಿಲ್ಲು ಬಾಣ ಹಿಡಿದು ಬಾಣ ಬಿಡುವ ಮೂಲಕ ಚಾಲನೆ ನೀಡಿದರು. ಸುಮಿತ್ರದೇವಿ ಕನ್ವೆನ್ಷನ್ ಹಾಲ್ ನಿಡಗಟ್ಟದಿಂದ ಶುರುವಾಗಿ 20 ಕಿಲೋಮೀಟರ್ ಕ್ರಮಿಸಿ ಮಂಡ್ಯದ ಶಶಿಕಿರಣ ಕನ್ವೆನ್ಷನ್ ಹಾಲ್‌ನಲ್ಲಿ ಮುಕ್ತಾಯಗೊಂಡಿತು. ಬಿಜೆಪಿ ಎಸ್ ಟಿ ಮೋರ್ಚಾ ಈ ದಿನದ ಪಾದಯಾತ್ರೆಗೆ ಸಹಯೋಗ ನೀಡಿತು. ಆಗಸ್ಟ್ ಏಳರಂದು ಶಶಿಕಿರಣ ಕನ್ವೆನ್ಷನ್ ಹಾಲ್ ಮಂಡ್ಯದಲ್ಲಿ ಬಾರುಕೋಲು ಬೀಸುವ ಮೂಲಕ ಶುರುವಾದರೆ 16 ಕಿಲೋಮೀಟರ್ ನಡೆದು ತೂಬಿನ ಕೆರೆಯಲ್ಲಿ ಸಮಾಪ್ತಿಗೊಂಡಿತು. ರೈತ ಮೋರ್ಚಾದ ಸಹಯೋಗದಲ್ಲಿ ಈ ದಿನದ ಪಾದಯಾತ್ರೆ ನಡೆಯಿತು.

## ಪಾದಯಾತ್ರೆಯಲ್ಲಿ ಪಾಲ್ಗೊಂಡ ರೈತ ಮೋರ್ಚಾ ಪದಾಧಿಕಾರಿಗಳು

ಕರ್ನಾಟಕ ರಾಜ್ಯದ ಆಡಳಿತ ರೂಢ ಕಾಂಗ್ರೆಸ್ ಸರ್ಕಾರದ ಸರಣಿ ಭ್ರಷ್ಟಾಚಾರಗಳ ವಿರುದ್ಧವಾಗಿ ಪಾದಯಾತ್ರೆಯ ಮುಖಾಂತರ ಜನಜಾಗೃತಿ ಮತ್ತು ಜನಾಭಿಪ್ರಾಯವನ್ನು ರೂಢಿಸುವ ಹಿತ ದೃಷ್ಟಿಯಿಂದ 'ಮೈಸೂರು ಚಲೋ ಪಾದಯಾತ್ರೆ'ಯ ಕಾರ್ಯಕ್ರಮದಲ್ಲಿ ಬಿಜೆಪಿ ರೈತ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಾಜಕುಮಾರ ಚಹರ್ ಅವರು 5ನೇ ದಿನದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಮಂಡ್ಯ ಜಿಲ್ಲೆಯ ಶಶಿಕಿರಣ್ ಕಲ್ಯಾಣ ಮಂಟಪದಲ್ಲಿ ಗೋ ಪೂಜೆಯನ್ನು ನೆರವೇರಿಸಿ ಬಿಜೆಪಿ ರೈತ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಾಜಕುಮಾರ ಚಹರ್, ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಮತ್ತು ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ್ ರವರು ನೆರವೇರಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಚಾವಟಿ



ಬೀಸುವ ಮುಖಾಂತರ ಕರ್ನಾಟಕ ರಾಜ್ಯದ ರೈತ ಪರವಾಗಿ ಕಾಂಗ್ರೆಸ್ ಸರ್ಕಾರವನ್ನು ಎಚ್ಚರಿಸಲಾಯಿತು. ರಾಜ್ಯದ ವರಿಷ್ಟರ ಸೂಚನೆಯ ಮೇರೆಗೆ ಎಂಟು ದಿನದ ಪಾದಯಾತ್ರೆಯಲ್ಲಿ ಒಂದು ದಿನದ ಪಾದಯಾತ್ರೆಯನ್ನು ರೈತ ಮೋರ್ಚಾಕ್ಕೆ ಜವಾಬ್ದಾರಿ ವಹಿಸಲಾಗಿತ್ತು. ಆ ದಿನದ ಪಾದಯಾತ್ರೆಗೆ ರಾಜ್ಯದ ಎಲ್ಲಾ 39 ಸಂಘಟನಾತ್ಮಕ ಜಿಲ್ಲೆಗಳ 314 ಮಂಡಲಗಳಿಂದ ರೈತ ಮೋರ್ಚಾದ ಪದಾಧಿಕಾರಿಗಳು ಭಾಗವಹಿಸಿ ಆ ಪಾದಯಾತ್ರೆಗೆ ಮೆರಗು ನೀಡಿದರು. ಈ ಪಾದಯಾತ್ರೆಯಲ್ಲಿ ರಾಷ್ಟ್ರೀಯ ಮತ್ತು ರಾಜ್ಯದ ಪದಾಧಿಕಾರಿಗಳು ಎತ್ತಿನ ಗಾಡಿಗಳನ್ನು ನಡೆಸುವ ಮುಖಾಂತರ ಪಾದಯಾತ್ರೆಗೆ ವಿಶೇಷ ಮೆರಗನ್ನು ನೀಡಿದರು. ಸರಿ ಸುಮಾರು ಆ ದಿನದ 19 ಕಿ.ಲೋ ಮೀಟರ್ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಮುಖಾಂತರ ರಾಜ್ಯದ ಬಿಜೆಪಿ ಪ್ರಮುಖರೊಂದಿಗೆ ಹೆಜ್ಜೆ ಹಾಕುವ ಮುಖಾಂತರ ಪಾದಯಾತ್ರೆಯನ್ನು ಯಶಸ್ವಿಗೊಳಿಸಿದರು. ಪಾದಯಾತ್ರೆಯಲ್ಲಿ ರಾಷ್ಟ್ರ ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿಗಳಾದ ಡಾ. ಶಂಭುಕುಮಾರ್, ರಾಷ್ಟ್ರೀಯ ಉಪಾಧ್ಯಕ್ಷರು ಮತ್ತು ಕರ್ನಾಟಕದ ರೈತ ಮೋರ್ಚಾದ ಉಸ್ತುವಾರಿಗಳಾದ ಶ್ರೀ ಜಯಸೂರ್ಯನ್ ಮತ್ತು ರಾಜ್ಯ ರೈತ ಮೋರ್ಚಾದ ಅಧ್ಯಕ್ಷರಾದ ಶ್ರೀ ಎ.ಎಸ್ ಪಾಟೀಲ್ ನಡಾಹಳ್ಳಿ ಅವರು ಪಾದಯಾತ್ರೆಯ ಉದ್ಘಾಟನೆಯ ದಿನದಿಂದ ಸಮಾರೋಪ ಸಮಾರಂಭದವರೆಗೆ ಪಾದಾಯಾತ್ರೆಯಲ್ಲಿ ಪಾಲ್ಗೊಂಡು ರೈತ ಮೋರ್ಚಾದ ಎಲ್ಲಾ ಹಂತದ ಪದಾಧಿಕಾರಿಗಳಿಗೆ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದರು. ರಾಜ್ಯಾದ್ಯಂತ ರೈತ ಮೋರ್ಚಾದ 3 ಸಾವಿರ ಪದಾಧಿಕಾರಿಗಳು ಆಗಮಿಸಿ ಪಕ್ಷದ ಹಿರಿಯರು ನೀಡಿದ ಸೂಚನೆಯನ್ನು ಪಾಲಿಸಿದರು.

ದಿನಾಂಕ 8 ರಂದು ರೈಟ್ ಓಂ ಕಾಫಿ ಕೆಫೆಯಿಂದ ರಾಜ್ಯಾಧ್ಯಕ್ಷರಿಂದ ಶಂಖ ಊದುವ ಮೂಲಕ ಪ್ರಾರಂಭವಾದ ಪಾದಯಾತ್ರೆ 17 ಕಿಲೋಮೀಟರ್ ಕ್ರಮಿಸಿ, ಮಂಜುನಾಥ ಕಲ್ಯಾಣ ಮಂಟಪ ಶ್ರೀರಂಗಪಟ್ಟಣ ತಲುಪಿದರೆ, ಸತತ ಏಳನೇ ದಿನದ ಪಾದಯಾತ್ರೆ ಮಹಿಳೆಯರು ಒನಕೆ ಹಿಡಿದು ಸ್ವಾಗತಿಸುವ ಮೂಲಕ ಚಾಲನೆಗೊಂಡು 10 ಕಿ.ಮೀ. ಕ್ರಮಿಸಿ ಶ್ರೀರಂಗಪಟ್ಟಣದಿಂದ ಗಮ್ಯವಾದ ಮೈಸೂರು ತಲುಪಿತು. ಮೈಸೂರಿಗೆ ತಲುಪಿದಾಗ ನಾಯಕರು ಹಾಗೂ ಕಾರ್ಯಕರ್ತರುಗಳಲ್ಲಿ ಧನ್ಯತಾಭಾವ, ಖುಷಿ, ಹಾಗೂ ಯಶಸ್ಸಿನ ಮಂದಹಾಸ ಎಲ್ಲರ ಮುಖದಲ್ಲಿ ಕಾಣಿಸುತ್ತಿತ್ತು.



## ತಾರ್ಕಿಕ ಅಂತ್ಯ ಕಾಣುವ ತನಕ ನಮ್ಮ ಹೋರಾಟ

**- ಬಿ.ವೈ.ವಿಜಯೇಂದ್ರ, ರಾಜ್ಯಾಧ್ಯಕ್ಷರು, ಬಿಜೆಪಿ**

ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಸಮಾರೋಪದಲ್ಲಿ ಮಾತನಾಡಿ ರಾಜ್ಯದ ಮೂಲೆ ಮೂಲೆಯಿಂದ ಈ ಪಾದಯಾತ್ರೆ ಆಗಮಿಸಿರುವ ಹಾಗೂ ಪಾದಯಾತ್ರೆಯನ್ನು ಯಶಸ್ವಿಗೊಳಿಸಲು ಕಾರಣಿಭೂತರಾಗಿರುವ ನಮ್ಮ ಲಕ್ಷ ಲಕ್ಷ ಕಾರ್ಯಕರ್ತರಿಗೆ ದೀರ್ಘದಂಡ ನಮಸ್ಕಾರವನ್ನು ಮಾಡುತ್ತೇನೆ ಎಂದು ಹೇಳಿದರು. ಇಂತಹ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವವರೆಗೆ ನಮ್ಮ ಪ್ರತಿಭಟನೆ, ನಮ್ಮ ಹೋರಾಟ ನಿರಂತರವಾಗಿ ಮಾಡೇ ಮಾಡ್ತೇವೆ. ಕರ್ನಾಟಕದಲ್ಲಿ ಕಳೆದ ಎರಡು ತಿಂಗಳಿಂದ ಬಿಜೆಪಿ ಜೆಡಿಎಸ್ ನಿರಂತರವಾಗಿ ಹೋರಾಟ ಮಾಡುತ್ತಿದ್ದೇವೆ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಕನ್ನಡಿಗರಿಗೆ ವಂಚನೆ ಮಾಡಿದ್ದಾರೆ ಎಂದು ಹೇಳಿದರು.

ಮಾನ್ಯ ಸಿದ್ದರಾಮಯ್ಯನವರೇ, ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರವನ್ನು ಮಾಡಿದೆ. ಸಾವಿರಾರು ಕೋಟಿಯನ್ನು ಲೂಟಿ ಮಾಡಿದೆ. ಇದನ್ನು ಒಪ್ಪಿಕೊಂಡು ಗೌರವಯುತವಾಗಿ ತಾವು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ. ಇಲ್ಲವಾದಲ್ಲಿ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಒಂದು ಪಾದಯಾತ್ರೆಗೆ ಕೇವಲ ಐದು ದಿನದ ತಯಾರಿ ಮಾಡಿದ್ದೇವೆ. ಐದು ದಿನದ ತಯಾರಿಯಲ್ಲಿಯೂ ಕೂಡ ಬಹುಶ ಈ ರಾಜ್ಯದ ಇತಿಹಾಸದಲ್ಲಿ ಇಷ್ಟು ವ್ಯವಸ್ಥಿತವಾಗಿರುವ ಪಾದಯಾತ್ರೆ ನಡೆದಿರಲಿಕ್ಕಿಲ್ಲ ಎಂದು ಹೇಳಿದರು.

ನನ್ನ ಕೊನೆಯ ಉಸಿರಿರುವ ತನಕ ಬಡವರು, ದೀನದಲಿತರು, ಕಾರ್ಮಿಕರು, ರೈತರ ಪರವಾಗಿ ಈ ನಾಡಿನ ಜನತೆಯ ಪರವಾಗಿ ನಾನು ನಿಮ್ಮ ಜೊತೆ ಇರುತ್ತೇನೆ. ನಮ್ಮ ಕಾರ್ಯಕರ್ತರ ಜೊತೆ ಇರುತ್ತೇನೆ ಎಂದು ಹೇಳಿದರು.







### ಗಮನಸೆಳೆದ ಸಮಾರೋಪ

ಆಗಸ್ಟ್ 10 ರಂದು ಬೆಳಿಗ್ಗೆ ಮೈಸೂರಿನ ಜೆಕೆ ಗ್ರೌಂಡ್‌ನಿಂದ ಪ್ರಾರಂಭವಾದ 3 ಕಿಲೋಮೀಟರ್ ಮೈಸೂರು ಚಲೋ ಪಾದಯಾತ್ರೆ ಮಹಾರಾಜ ಗ್ರೌಂಡ್ ನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನಸ್ತೋಮ ಸೇರಿದ ಬೃಹತ್ ಸಭೆಯ ಸಮಾರಂಭದೊಂದಿಗೆ ಯಶಸ್ವಿಯಾಗಿ ಸಮಾರೋಪಗೊಂಡಿತು.

ಈ ಸಂದರ್ಭದಲ್ಲಿ ಕೇಂದ್ರ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿಎಸ್ ಯಡಿಯೂರಪ್ಪ, ಜೆಡಿಎಸ್ ರಾಜ್ಯಾಧ್ಯಕ್ಷರು ಹಾಗೂ ಕೇಂದ್ರ ಸಚಿವರಾದ ಶ್ರೀ ಎಚ್ ಡಿ ಕುಮಾರಸ್ವಾಮಿ, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ, ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಸದಾನಂದ ಗೌಡ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಉಸ್ತುವಾರಿಗಳಾದ ಶ್ರೀ ರಾಧಾ ಮೋಹನದಾಸ ಅಗರವಾಲ್, ಸಹ ಉಸ್ತುವಾರಿಗಳಾದ ಶ್ರೀ ಸುಧಾಕರ್ ರೆಡ್ಡಿ, ವಿಧಾನ ಪರಿಷತ್ ವಿರೋಧ ಪಕ್ಷ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ, ಡಾ. ಅಶ್ವಥ್ ನಾರಾಯಣ್ , ಮಾಜಿ ಮಂತ್ರಿಗಳು ಹಾಗೂ ವಿಧಾನ ಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಸುರೇಶ್ ಬಾಬು, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ಶ್ರೀ ನಿಖಿಲ್ ಕುಮಾರ ಸ್ವಾಮಿ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಸಂಸದರು, ಶಾಸಕರು, ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.




ಪಾದಯಾತ್ರೆಯ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ತಾಯಂದಿರು ಪೂರ್ಣ ಕುಂಭ ಹೊತ್ತು ಆರತಿ ಮಾಡಿ ಹರಸಿದ ಅವಿಸ್ಮರಣೀಯ ಕ್ಷಣ

ರಾಷ್ಟ್ರೀಯ ಕೈ ಮಗ್ಗ ದಿನದ ಅಂಗವಾಗಿ ಕೈ ಮಗ್ಗ ನೇಯ್ದು ನೇಕಾರ ಬಂಧುಗಳಿಗೆ ಶುಭಕೋರಲಾಯಿತು




ಸೇನಾನಿಗಳಂತೆ ವಿರಮಿಸದೇ ಶ್ರಮಿಸುವ ಕಾರ್ಯಕರ್ತರೇ ಪಕ್ಷದ ಸಂಘಟನೆಯ ಸಮರ ಸೇನಾನಿಗಳು
ಮೈಸೂರು ಚಲೋ ಪಾದಯಾತ್ರೆಯಲ್ಲಿ ದಿನವಿಡೀ ಕಾಲ್ನಡಿಗೆಯಲ್ಲಿ ಸಾಗಿಬಂದ
ದಣಿದ ಕಾರ್ಯಕರ್ತರಿಗೆ ಊಟೋಪಚಾರದ ವ್ಯವಸ್ಥೆ ಹಾಗೂ ಆರೋಗ್ಯ ತಪಾಸಣೆ






ಮೈಸೂರು ಚಲೋ ಪಾದಯಾತ್ರೆಯಲ್ಲಿ ಜನಶಕ್ತಿಯ ವ್ಯಾಪಕ ಬೆಂಬಲ







78ನೇ ಸ್ವಾತಂತ್ರ್ಯ ದಿನಾಚರಣೆ

ಕೆಂಪುಕೋಟೆ ಮೇಲೆ
ಸತತ 11ನೇ ಬಾರಿ
ಧ್ವಜಾರೋಹಣ ನೆರವೇರಿಸಿದ
ಪ್ರಧಾನಿ ಮೋದಿ

# ಜಾತ್ಯತೀತ ನಾಗರಿಕ ಸಂಹಿತೆ ಜಾರಿ

- ಪ್ರಧಾನಿ ಶ್ರೀ ನರೇಂದ್ರ ಮೋದಿ

- 2047ರ ವಿಕಸಿತ ಭಾರತ 140 ಕೋಟಿ ಜನರ ಸಂಕಲ್ಪ
- ಹೊಸ ಕ್ರಿಮಿನಲ್ ಕಾನೂನುಗಳಲ್ಲಿ ಶಿಕ್ಷೆಗಿಂತ ನ್ಯಾಯಕ್ಕೆ ಆದ್ಯತೆ
- 2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಭಾರತ ಸಿದ್ಧ
- ಮುಂದಿನ 5 ವರ್ಷಗಳಲ್ಲಿ 75,000 ವೈದ್ಯಕೀಯ ಸೀಟು ಸೃಷ್ಟಿ
- ಭಾರತವನ್ನು ಬಲಪಡಿಸಲು ದೊಡ್ಡ ಸುಧಾರಣೆಗಳಿಗೆ ಬದ್ಧ
- ವಿಶ್ವದಲ್ಲಿ ಭಾರತಕ್ಕೆ ಈಗ ಸುವರ್ಣ ಸಮಯಾವಕಾಶ ಇದೆ
- ಮೆಡಿಕಲ್ ಕಾಲೇಜು ಕಿರಿಯ ವೈದ್ಯೆ ಹತ್ಯೆ ಖಂಡನೀಯ
- ಬಾಂಗ್ಲಾ ಹಿಂಸಾಚಾರ; ಹಿಂದೂಗಳ ಸುರಕ್ಷತೆಗೆ ಕ್ರಮ
- ಒಲಿಂಪಿಕ್ಸ್ ಪದಕ ವಿಜೇತರಿಂದ ಮೋದಿಗೆ ವಿಶೇಷ ಉಡುಗೊರೆ



> ನಾವು ಕಳೆದ 75 ವರ್ಷಗಳಿಂದ ಕೋಮು ನಾಗರಿಕ ಸಂಹಿತೆಯಡಿ ಬದುಕಿದ್ದೇವೆ. ಈಗ ದೇಶವು ಜಾತ್ಯತೀತ ನಾಗರಿಕ ಸಂಹಿತೆಯನ್ನು ಹೊಂದುವುದು ಅಗತ್ಯವಾಗಿದೆ. ಆಗ ಮಾತ್ರ ಧರ್ಮ ಆಧಾರಿತ ತಾರತಮ್ಯ ಕೊನೆಗೊಳ್ಳುತ್ತದೆ.
>
> **- ನರೇಂದ್ರ ಮೋದಿ ಪ್ರಧಾನಿ**

**ರಾ**ಷ್ಟ್ರ ರಾಜಧಾನಿ ದೆಹಲಿಯ ಕೆಂಪು ಕೋಟೆಯ ಆವರಣದಿಂದ 78ನೇ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದಲ್ಲಿ 'ಏಕರೂಪ ನಾಗರಿಕ ಸಂಹಿತೆ' ಜಾರಿಗೆ ಕರೆ ನೀಡಿದರು.

ಕೆಂಪುಕೋಟೆ ಮೇಲೆ ಸತತ 11ನೇ ಬಾರಿ ಧ್ವಜಾರೋಹಣ ನೆರವೇರಿಸಿದ ಪ್ರಧಾನಿ ಮೋದಿ, 98 ನಿಮಿಷಗಳ ಸುದೀರ್ಘ ಭಾಷಣ ಮಾಡಿದರು. 'ಏಕರೂಪ ನಾಗರಿಕ ಸಂಹಿತೆ'ಯನ್ನು ಜಾರಿಗೆ ತರುವುದು ಮತ್ತು 'ತಾರತಮ್ಯದ ಕೋಮು ನಾಗರಿಕ ಸಂಹಿತೆ'ಯನ್ನು ತೊಡೆದುಹಾಕುವುದು ಅತ್ಯಗತ್ಯ ಎಂದು ಪ್ರಧಾನಿ ಹೇಳಿದರು.

**ಏಕರೂಪ ನಾಗರಿಕ ಸಂಹಿತೆ:** ಏಕರೂಪ ನಾಗರಿಕ ಸಂಹಿತೆಯ ಕುರಿತು ಸುಪ್ರೀಂಕೋರ್ಟ್ ಆಗಾಗ ಚರ್ಚಿಸಿ ನಿರ್ದೇಶನಗಳನ್ನು ನೀಡಿದೆ. ಪ್ರಸ್ತುತ ನಾಗರಿಕ ಸಂಹಿತೆ ತಾರತಮ್ಯ ಮತ್ತು ಕೋಮುವಾದ ಎಂದು ಅನೇಕ ಜನರು ಭಾವಿಸುತ್ತಾರೆ. ಸಂವಿಧಾನ ರಚನೆಕಾರರ ಆಶಯಗಳನ್ನು ಪ್ರತಿಬಿಂಬಿಸುವ ಏಕರೂಪ ನಾಗರಿಕ ಸಂಹಿತೆಯ ಅನುಷ್ಠಾನವನ್ನು ಸಂವಿಧಾನ ಮತ್ತು ಸುಪ್ರೀಂಕೋರ್ಟ್ ಎರಡೂ ಬೆಂಬಲಿಸುತ್ತಿದೆ. ಆದ್ದರಿಂದ ಈ ಉದ್ದೇಶವನ್ನು ಈಡೇರಿಸುವ ಮಹತ್ವವಿದೆ. ಆಧುನಿಕ ಸಮಾಜಕ್ಕೆ ಸೂಕ್ತವಲ್ಲದ ಧರ್ಮದ ಆಧಾರದ ಮೇಲೆ ದೇಶವನ್ನು ವಿಭಜಿಸುವ ಕಾನೂನುಗಳನ್ನು ತೆಗೆದುಹಾಕಬೇಕು. ಧಾರ್ಮಿಕ ತಾರತಮ್ಯವನ್ನು ಪರಿಹರಿಸಲು 'ಸೆಕ್ಯುಲರ್ ಸಿವಿಲ್ ಕೋಡ್' ಜಾರಿಗೆ ಈ ಸಮಯವಾಗಿದೆ ಎಂದರು.

**ಒಂದು ರಾಷ್ಟ್ರ ಒಂದು ಚುನಾವಣೆ:** ಆಗಾಗ ನಡೆಯುವ ಚುನಾವಣೆಗಳು ದೇಶದ ಪ್ರಗತಿಗೆ ಅಡ್ಡಿಯಾಗುತ್ತವೆ. 'ಒಂದು ರಾಷ್ಟ್ರ, ಒಂದು ಚುನಾವಣೆ' ಗುರಿಯನ್ನು ಸಾಧಿಸಲು ಎಲ್ಲರೂ ಒಗ್ಗೂಡಬೇಕು. ದೇಶಾದ್ಯಂತ ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ರಾಜಕೀಯ ಸ್ಥಿರತೆ ಮತ್ತು ಆಡಳಿತಾತ್ಮಕ ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತದೆ. ಕೆಲವು ಬಿಜೆಪಿ ಆಡಳಿತದ ರಾಜ್ಯಗಳು ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಶ್ರಮಿಸುತ್ತಿದ್ದರೂ, ಕೇಂದ್ರವು ರಾಷ್ಟ್ರೀಯವಾಗಿ ಅದರ ಅನುಷ್ಠಾನಕ್ಕೆ ಇದುವರೆಗೆ ಯಾವುದೇ ಶಾಸನಾತ್ಮಕ ಕ್ರಮವನ್ನು ಕೈಗೊಂಡಿಲ್ಲ. ಕಳೆದ ವರ್ಷವೇ ಕಾನೂನು ಆಯೋಗ ಅದಕ್ಕಾಗಿ ಸಮಾಲೋಚನೆ ಆರಂಭಿಸಿತ್ತು.

ಭಾರತದ 140 ಕೋಟಿ ನಾಗರಿಕರು ಒಗ್ಗಟ್ಟಿನ ಸಂಕಲ್ಪದೊಂದಿಗೆ ಹೆಗಲಿಗೆ ಹೆಗಲುಕೊಟ್ಟು ನಡೆದರೆ ಸಮೃದ್ಧ ಮತ್ತು ಅಭಿವೃದ್ಧಿ ಹೊಂದಿದ ದೇಶದ ಗುರಿಯನ್ನು ಸಾಧಿಸಬಹುದು ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಪ್ರತಿಪಾದಿಸಿದರು.

## ಚರ್ಚೆಗೊಂದು ಸಾಲು...

### ಸವಾಲುಗಳು ನಮ್ಮ ಸಾಮರ್ಥ್ಯದ ಸಾಬೀತಿಗೆ ಒಂದು ಅವಕಾಶ




# ಬಜೆಟ್ 2024

## ಒಟ್ಟು ಬಜೆಟ್ ಮೊತ್ತ

**48,20,512** ಕೋ.ರೂ.

**ವಿತ್ತೀಯ ಕೊರತೆ ಜಿಡಿಪಿಯ 4.9%**

**ಮೂಲಸೌಕರ್ಯಕ್ಕೆ ಭರಪೂರ ಅನುದಾನ**

**11,11,111** ಕೋ.ರೂ.

## ಏಳಿಗೆಯ ನವ ಭಾರತ



**ಸತತ ಏಳನೇ ಬಜೆಟ್ ಮಂಡಿಸಿ ದಾಖಲೆ ನಿರ್ಮಿಸಿರುವ ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಒಂಬತ್ತು ವಲಯಗಳಾಗಿ ಆಯವ್ಯಯ ವಿಂಗಡಿಸಿದ್ದಾರೆ. ಕೃಷಿಯಿಂದ ಭವಿಷ್ಯದ ಸುಧಾರಣೆಗಳವರೆಗೆ ಗಮನ ಹರಿಸಿದ್ದಾರೆ.**



ಮಧ್ಯಮ ವರ್ಗಗಳ ಆಶೋತ್ತರಗಳಿಗೆ ಮತ್ತಷ್ಟು ಶಕ್ತಿ ತುಂಬಲು ಬಜೆಟ್ ಪ್ರೇರಣೆಯಾಗಲಿದ್ದು, ಯುವ ಜನಾಂಗಕ್ಕೆ ಅಭೂತಪೂರ್ವ ಅವಕಾಶಗಳ ಹಾದಿಯನ್ನು ತೆರೆಯಲಿದೆ. ಇದು ದೇಶದ ಆರ್ಥಿಕ ಅಭಿವೃದ್ಧಿಗೆ ಹೊಸ ವೇಗ ನೀಡಲಿದೆ.

**- ನರೇಂದ್ರ ಮೋದಿ, ಪ್ರಧಾನಮಂತ್ರಿಗಳು**



ಕೌಶಲ್ಯ, ಮಧ್ಯಮ ವರ್ಗ, ನಿರುದ್ಯೋಗ, ಎಂಎಸ್‌ಎಂಇ ಕ್ಷೇತ್ರಗಳಿಗೆ ಒತ್ತು ನೀಡಿರುವುದರಿಂದ ಭಾರತದ ಆರ್ಥಿಕತೆ ವೃದ್ಧಿಯಾಗಿದೆ. ದೇಶದಲ್ಲಿ ಪ್ರಸ್ತುತ ಹಣದುಬ್ಬರ ನಿಯಂತ್ರಣದಲ್ಲಿದೆ. ಇದೇ ರೀತಿ ಮುಂದಿನ ಐದು ವರ್ಷಗಳಲ್ಲಿಯೂ ನಿಯಂತ್ರಣದಲ್ಲಿ ಇರುತ್ತದೆ.

**- ನಿರ್ಮಲಾ ಸೀತಾರಾಮನ್, ಕೇಂದ್ರ ವಿತ್ತ ಸಚಿವೆ**



ಈ ಬಾರಿಯ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರಕ್ಕೆ 6.21 ಲಕ್ಷ ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಸಶಸ್ತ್ರ ಪಡೆಗಳ ಸಾಮರ್ಥ್ಯವನ್ನು ಮತ್ತಷ್ಟು ಬಲಗೊಳ್ಳಲಿದೆ. ಬಾರ್ಡರ್ ರಸ್ತೆಗಳ ಅಭಿವೃದ್ಧಿಗೆ ಕಳೆದ ಶೇ. 30 ರಷ್ಟು ಅನುದಾನ ಹೆಚ್ಚಳ ಮಾಡಿ 6500 ಕೋಟಿ ರೂ. ಮೀಸಲಿಟ್ಟಿರುವುದು ಸಂತಸ ತಂದಿದೆ. ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಸ್ಟಾರ್ಟಪ್, ಎಂಎಸ್‌ಎಂಇ ಹಾಗೂ ನವೋದ್ಯಮಿಗಳು ಉತ್ತೇಜನ ನೀಡಿರುವುದು ಶ್ಲಾಘನೀಯ.

**- ರಾಜ್‌ನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವರು**

**ಕೃಷಿಯಲ್ಲಿ ಉತ್ಪಾದಕತೆ ಮತ್ತು ಸ್ಥಿತಿಸ್ಥಾಪಕತ್ವ :** ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ **1.52** ಲಕ್ಷ ಕೋ.ರೂ. ಅನುದಾನ. 32 ಬೆಳೆಗಳಲ್ಲಿ ಅಧಿಕ ಇಳುವರಿ ಬರುವ ತಳಿಗಳ ಅಭಿವೃದ್ಧಿ. ಎರಡು ವರ್ಷಗಳಲ್ಲಿ ಒಂದು ಕೋಟಿ ರೈತರನ್ನು ನೈಸರ್ಗಿಕ ಕೃಷಿಗೆ ಅಳವಡಿಸುವುದು.

**ಉದ್ಯೋಗ, ಕೌಶಲ್ಯ :** ಶಿಕ್ಷಣ, ಉದ್ಯೋಗ ಮತ್ತು ಕೌಶಲ್ಯಕ್ಕಾಗಿ **1.48** ಲಕ್ಷ ಕೋ.ರೂ. ಅನುದಾನ. ಇಪಿಎಫ್‌ಒಗೆ ಹೊಂದಿಕೊಂಡಂತೆ ಉದ್ಯೋಗ ಸಂಬಂಧಿತ ಪ್ರೋತ್ಸಾಹಕ್ಕಾಗಿ ಮೂರು ಯೋಜನೆ ಜಾರಿ. ಮೊದಲ ಬಾರಿಯ ಉದ್ಯೋಗಿಗಳಿಗೆ ಇಂಟರ್ನ್‌ಶಿಪ್ ಮತ್ತು ಶಿಷ್ಯವೇತನ ನೀಡುವ ಗುರಿ.

**ಸಾಮಾಜಿಕ ನ್ಯಾಯ :** ರೈತರು, ಯುವಕರು, ಮಹಿಳೆಯರು ಮತ್ತು ಬಡವರ ಸರ್ವತೋಮುಖ, ಸರ್ವವ್ಯಾಪಿ ಮತ್ತು ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಲಸ. ರಾಷ್ಟ್ರೀಯ ಜೀವನೋಪಾಯ ಮಿಷನ್, ಸ್ಟ್ಯಾಂಡ್ ಅಪ್ ಇಂಡಿಯಾ ಮೂಲಕ ಆರ್ಥಿಕ ಚಟುವಟಿಕೆಗಳನ್ನು ಬೆಂಬಲಿಸುವ ಯೋಜನೆಗಳ ಅನುಷ್ಠಾನ ಹೆಚ್ಚಳ.

**ಉತ್ಪಾದನೆ, ಸೇವೆಗಳು :** ತರುಣ್ ವಿಭಾಗದಲ್ಲಿ ಈ ಹಿಂದೆ ಸಾಲ ಪಡೆದು ಯಶಸ್ವಿಯಾಗಿ ಮರುಪಾವತಿ ಮಾಡಿರುವವರಿಗೆ ಮುದ್ರಾ ಸಾಲ ಪ್ರಮಾಣ 10 ಲಕ್ಷ ರೂ.ಗಳಿಂದ **20** ಲಕ್ಷ ರೂ.ಗಳಿಗೆ ಏರಿಕೆ. ಎಂಎಸ್‌ಎಂಇಗಳಿಗೆ ಸುಲಭವಾಗಿ ಸಾಲ ಸಿಗುವಂತೆ ಮಾಡುವುದು. 500 ಉನ್ನತ ಕಂಪನಿಗಳಲ್ಲಿ ಯುವಕರಿಗೆ ಇಂಟರ್ನ್‌ಶಿಪ್.

**ನಗರಾಭಿವೃದ್ಧಿ :** 30 ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಹೊಂದಿರುವ 14 ನಗರಗಳಲ್ಲಿ ಸಾರಿಗೆ ಆಧಾರಿತ ಅಭಿವೃದ್ಧಿ. ಪಿಎಂ ಆವಾಸ್ ಯೋಜನೆ ಅಡಿಯಲ್ಲಿ **1** ಕೋಟಿ ನಗರ ಬಡ ಮತ್ತು ಮಧ್ಯಮ ಕುಟುಂಬಗಳ ವಸತಿ ಅಗತ್ಯಗಳ ಪೂರೈಸಲು **10** ಲಕ್ಷ ಕೋಟಿ ರೂ. ಅನುದಾನ. 100 ಆಯ್ದ ನಗರಗಳಲ್ಲಿ ವಾರಕ್ಕೊಮ್ಮೆ ಬೀದಿ ಆಹಾರ ಕೇಂದ್ರಗಳ ಸ್ಥಾಪನೆ.

**ಇಂಧನ ಭದ್ರತೆ :** ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಿದಂತೆ **1** ಕೋಟಿ ಕುಟುಂಬಗಳಿಗೆ ಪಿಎಂ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆ. ಈಗಾಗಲೇ **1.28** ಕೋಟಿ ನೋಂದಣಿ. **14** ಲಕ್ಷ ಅರ್ಜಿಗಳ ಸ್ವೀಕಾರ. ಸಣ್ಣ ಮತ್ತು ಮಾಡ್ಯುಲರ್ ಪರಮಾಣು ರಿಯಾಕ್ಟರ್‌ಗಳ ಸಂಶೋಧನೆ ಮತ್ತು ಅಭಿವೃದ್ಧಿ. ಸಾಂಪ್ರದಾಯಿಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಬೆಂಬಲ.

**ಮೂಲಸೌಕರ್ಯ:** ಮುಂದಿನ 5 ವರ್ಷಗಳಲ್ಲಿ ಮೂಲ ಸೌಕರ್ಯಕ್ಕಾಗಿ **11,11,111** ಕೋ.ರೂ.ಗಳ ಅನುದಾನ. ರಾಜ್ಯಗಳೂ ಮೂಲಸೌಕರ್ಯ ಯೋಜನೆ ಕೈಗೆತ್ತಿಕೊಳ್ಳುವ ಸಲುವಾಗಿ **1.5** ಲಕ್ಷ ಕೋಟಿ ರೂ ಸಾಲ. ವಿವಿಧ ರಾಜ್ಯಗಳಲ್ಲಿ ಪ್ರವಾಹ ತಗ್ಗಿಸುವ ಸಲುವಾಗಿ ಯೋಜನೆಗಳು.

**ನಾವೀನ್ಯತೆ, ಸಂಶೋಧನೆ :** ಮುಂದಿನ 10 ವರ್ಷಗಳಲ್ಲಿ ಬಾಹ್ಯಾಕಾಶ ಆರ್ಥಿಕತೆಯನ್ನು 5 ಪಟ್ಟು ವಿಸ್ತರಿಸುವ ಗುರಿ. **1,000** ಕೋ.ರೂ ಬಂಡವಾಳ ನಿಧಿ ಸ್ಥಾಪನೆ. ಅನುಸಂಧಾನ್ ರಾಷ್ಟ್ರೀಯ ಸಂಶೋಧನಾ ನಿಧಿ ಕಾರ್ಯಗತ.

**ಮುಂದಿನ ಪೀಳಿಗೆಯ ಸುಧಾರಣೆಗಳು :** ಮುಂದಿನ ಪೀಳಿಗೆಗಾಗಿ ಮತ್ತಷ್ಟು ಅಭಿವೃದ್ಧಿ ಕಾರ್ಯ ನಡೆಸಲು ಗುರಿ. ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆಯ ಉತ್ತೇಜನಕ್ಕಾಗಿ ಮತ್ತು ಸುಧಾರಣೆಗಳ ತ್ವರಿತ ಅನುಷ್ಠಾನಕ್ಕಾಗಿ ರಾಜ್ಯಗಳನ್ನು ಉತ್ತೇಜಿಸಲು 50 ವರ್ಷಗಳ ಬಡ್ಡಿರಹಿತ ಸಾಲ ನೀಡಲು ಒಪ್ಪಿಗೆ. ಗ್ರಾಮೀಣ ಭಾಗದ ಭೂಮಿಯ ಡಿಜಿಟಲೀಕರಣ ಮತ್ತು ಆಧಾರ್‌ಗೆ ಜೋಡಣೆ. ನಗರದಲ್ಲಿಯೂ ಜಿಐಎಸ್ ಮ್ಯಾಪಿಂಗ್‌ನೊಂದಿಗೆ ನಿವೇಶನಗಳ ಡಿಜಿಟಲೀಕರಣ.



## ಹೊಸ ತೆರಿಗೆ ಪದ್ಧತಿ


| | |
|---|---|
| 0-3 ಲಕ್ಷ ರೂ | ಶೇ 0 |
| 3-7 ಲಕ್ಷ ರೂ | ಶೇ 6 |
| 7-10 ಲಕ್ಷ ರೂ | ಶೇ 10 |
| 10-12 ಲಕ್ಷ ರೂ | ಶೇ 15 |
| 12-15 ಲಕ್ಷ ರೂ | ಶೇ 20 |
| 15 ಲಕ್ಷ ರೂ. ಮೇಲ್ಪಟ್ಟು | ಶೇ 30 |

### ಯಾವುದು ತುಟ್ಟಿ?

ಮರು ಬಳಕೆ ಆಗದ ಎಲ್ಲಾ ರೀತಿಯ ಪ್ಲಾಸ್ಟಿಕ್ ವಸ್ತುಗಳು, ಉದ್ಯಾನ ಛತ್ರಿಗಳು, ವಿವಿಧ ರೀತಿಯ ಬಟ್ಟೆ, ವಸ್ತ್ರಗಳು, ಪ್ರಯೋಗಾಲಯ ರಾಸಾಯನಿಕಗಳು, ಎಲ್ಲಾ ರೀತಿಯ, ವಿದ್ಯುತ್ ಉಪಕರಣಗಳು, ಮೊಬೈಲ್ ಟವರ್ ಬಿಡಿ ಭಾಗಗಳು

### ಯಾವುದು ಅಗ್ಗ?

ಚಿನ್ನ, ಬೆಳ್ಳಿ, ಪ್ಲಾಟಿನಂ, ತಾಮ್ರ, ಬೆಲೆಬಾಳುವ ಲೋಹದ ನಾಣ್ಯಗಳು, 20 ಅಮೂಲ್ಯ ಖನಿಜಗಳು, 3 ಕ್ಯಾನ್ಸರ್ ಔಷಧಗಳು, ವೈದ್ಯಕೀಯ ಉಪಕರಣಗಳು, ಆಮದಾದ ಮೊಬೈಲ್ ಫೋನ್, ಮೊಬೈಲ್ ಫೋನ್ ಚಾರ್ಜರ್ / ಅಡಾಪ್ಟರ್, ಮೊಬೈಲ್ ಫೋನ್ ಬಿಡಿ ಭಾಗಗಳು, ಸೋಲಾರ್ ಪ್ಯಾನಲ್‌ಗಳು, ಶಿಯಾ ಬೀಜಗಳು, ಮೀನಿನ ಲಿಪಿಡ್ ಎಣ್ಣೆ, ಕಚ್ಚಾ ಮೀನಿನ ಎಣ್ಣೆ, ನೈಸರ್ಗಿಕ ಗ್ರಾಫೈಟ್, ಎಲ್ಲಾ ರೀತಿಯ ನೈಸರ್ಗಿಕ ಮರಳು, ಸ್ಪಟಿಕ ಶಿಲೆ.



## ಉದ್ಯೋಗಕ್ಕೆ ಕೌಶಲ ರಹದಾರಿ

**ದೇಶದಲ್ಲಿನ ನಿರುದ್ಯೋಗ ಸಮಸ್ಯೆ ನಿವಾರಿಸಲು ಉದ್ಯೋಗ ಮತ್ತು ಕೌಶಲ್ಯಕ್ಕಾಗಿ ಪ್ರಧಾನಮಂತ್ರಿಗಳ 5 ಯೋಜನೆ ಪ್ರಕಟ. ಮುಂದಿನ 5 ವರ್ಷಗಳಲ್ಲಿ 4.1 ಕೋಟಿ ಯುವಕರಿಗೆ ಉದ್ಯೋಗ ಮತ್ತು ಕೌಶಲ್ಯ ಕಲ್ಪಿಸುವ ಗುರಿ**

1 **ಯೋಜನೆ ಎ :** ಮೊದಲ ಬಾರಿಯ ಉದ್ಯೋಗಿಗಳಿಗೆ ಇಪಿಎಫ್‌ಒನಲ್ಲಿ ನೋಂದಾಯಿಸಿದಂತೆ 3 ಕಂತುಗಳಲ್ಲಿ 15 ಸಾವಿರ ರೂ.ವರೆಗೆ ಒಂದು ತಿಂಗಳ ವೇತನ.

2 **ಯೋಜನೆ ಬಿ :** ಉತ್ಪಾದನೆಯಲ್ಲಿ ಉದ್ಯೋಗ ಸೃಷ್ಟಿ ಮಾಡುವ ಈ ಯೋಜನೆಯಲ್ಲಿ ಯುವಕನೊಬ್ಬ ಉದ್ಯೋಗಕ್ಕೆ ಸೇರಿದ ಮೊದಲ ನಾಲ್ಕು ವರ್ಷ ಅವರ ಇಪಿಎಫ್‌ಒ ಕೊಡುಗೆಗೆ ಸಂಬಂಧಿಸಿದಂತೆ ಉದ್ಯೋಗಿ ಮತ್ತು ಉದ್ಯೋಗದಾತರಿಗೆ ನೇರವಾಗಿ ನಿರ್ದಿಷ್ಟ ಪ್ರಮಾಣದ ಪ್ರೋತ್ಸಾಹ.

3 **ಯೋಜನೆ ಸಿ :** ಉದ್ಯೋಗದಾತರಿಗೆ ಅನುಕೂಲ. ಅಂದರೆ ಪ್ರತಿ ಹೆಚ್ಚುವರಿ ಉದ್ಯೋಗಿಗೆ ಉದ್ಯೋಗದಾತರ ಇಪಿಎಫ್‌ಒ ಕೊಡುಗೆಗಾಗಿ ಸರ್ಕಾರ 2 ವರ್ಷಗಳ ಕಾಲ ಮಾಸಿಕ 3 ಸಾವಿರ ರೂ.ಗಳ ವರೆಗೆ ಮರುಪಾವತಿ.

4 **ಕೌಶಲ್ಯಕ್ಕಾಗಿ ಹೊಸ ಕೇಂದ್ರ ಆಧಾರಿತ ಯೋಜನೆ :** 5 ವರ್ಷಗಳ ಅವಧಿಯಲ್ಲಿ 20 ಲಕ್ಷ ಯುವಕರಿಗೆ ಕೌಶಲ್ಯ. 1 ಸಾವಿರ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವುದು.

5 **1 ಕೋಟಿ ಇಂಟರ್ನ್‌ಶಿಪ್ :** ಮುಂದಿನ ಐದು ವರ್ಷಗಳಲ್ಲಿ ಒಂದು ಕೋಟಿ ಯುವಕರಿಗೆ 500 ಉನ್ನತ ಕಂಪನಿಗಳಲ್ಲಿ ಇಂಟರ್ನ್‌ಶಿಪ್.



## ಆರೋಗ್ಯಕ್ಕೆ 91 ಸಾವಿರ ಕೋ.ರೂ.

- ಕೇಂದ್ರ ಆರೋಗ್ಯ ಸಚಿವಾಲಯಕ್ಕೆ 2024-2025ರ ಬಜೆಟ್‌ನಲ್ಲಿ 90,958.63 ಕೋ.ರೂ. ಮೀಸಲು. 2023-24ರ ಪರಿಷ್ಕೃತ ಅಂದಾಜಿನ 80,517.62 ಕೋ.ರೂ.ಗಿಂತ ಶೇ.12.96ರಷ್ಟು ಹೆಚ್ಚಳ.
- ಆರೋಗ್ಯಸೇವೆ, ಔಷಧಗಳು ಮತ್ತು ಔಷಧ ಉಪಕರಣಗಳ ಉತ್ಪಾದನೆಗೆ ಹಲವು ಯೋಜನೆ.
- ವೈದ್ಯಕೀಯ ಎಕ್ಸ್-ರೇ ಯಂತ್ರಗಳಲ್ಲಿ ಬಳಸಲು ಎಕ್ಸ್- ರೇ ಟ್ಯೂಬ್‌ಗಳು ಮತ್ತು ಫ್ಲಾಟ್ ಪ್ಯಾನಲ್ ಡಿಟೆಕ್ಟರ್‌ಗಳ ಮೇಲಿನ ಬಿಸಿಡಿ (ಬೇಸಿಕ್ ಕಸ್ಟಮ್ಸ್ ಡ್ಯೂಟಿ) ಬದಲಾವಣೆಗಳನ್ನು ಹಂತ ಹಂತದ ಉತ್ಪಾದನಾ ಕಾರ್ಯಕ್ರಮದಲ್ಲಿ ಪ್ರಸ್ತಾಪ.
- ಆಯುಷ್ ಸಚಿವಾಲಯಕ್ಕೆ ಬಜೆಟ್ ಹಂಚಿಕೆಯನ್ನು 3,000 ಕೋ.ರೂ. ಗಳಿಂದ 3,712.49 ಕೋ.ರೂ. ಗೆ ಹೆಚ್ಚಳ. 90,958.63 ಕೋ.ರೂ.ಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 87,656.90 ಕೋ.ರೂ., ಆರೋಗ್ಯ ಸಂಶೋಧನಾ ಇಲಾಖೆಗೆ 3,301.73 ಕೋಟಿ ರೂ.
- ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ 36,000 ಕೋಟಿ ರೂ. ಮತ್ತು ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಗೆ (ಪಿಎಂ-ಜೆಎವೈ) 7,300 ಕೋ.ರೂ.
- ಟೆಲಿಮೆಂಟಲ್ ಯೋಜನೆ: ರಾಷ್ಟ್ರೀಯ ಟೆಲಿ ಮೆಂಟಲ್ ಹೆಲ್ತ್ ಕಾರ್ಯಕ್ರಮಕ್ಕೆ 90 ಕೋಟಿ ರೂ.ಗೆ

## ಯುಪಿಎಸ್‌ಸಿಗೆ 425 ಕೋ.ರೂ. ಮೀಸಲು

- ಕೇಂದ್ರೀಯ ಲೋಕಸೇವಾ ಆಯೋಗಕ್ಕೆ 425 ಕೋ.ರೂ.
- ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷಾ ವೆಚ್ಚಕ್ಕಾಗಿ 216 ಕೋ.ರೂ.
- ಅಧ್ಯಕ್ಷರು, ಸದಸ್ಯರ ವೇತನ - ಭತ್ಯೆಗಳಿಗೆ 208.99 ಕೋ.ರೂ.
- ಭ್ರಷ್ಟಾಚಾರ ನಿಗ್ರಹ ಲೋಕಪಾಲ್‌ಗೆ 33.32 ಕೋಟಿ ರೂ.
- ಕೇಂದ್ರ ಜಾಗೃತ ಆಯೋಗಕ್ಕೆ (ಸಿವಿಸಿ) 51.31 ಕೋಟಿ ರೂ.

## ಮೂರು ಕ್ಯಾನ್ಸರ್ ಔಷಧಕ್ಕೆ ವಿನಾಯಿತಿ

ಕ್ಯಾನ್ಸರ್ ಚಿಕಿತ್ಸೆಗೆ ತಗುಲುವ ದುಬಾರಿ ವೆಚ್ಚದ ಭಾರ ಇಳಿಸಲು ಮೂರು ಕ್ಯಾನ್ಸರ್ ಔಷಧಿಗಳಿಗೆ ಕಸ್ಟಮ್ ಸುಂಕದಿಂದ ಸಂಪೂರ್ಣವಾಗಿ ವಿನಾಯಿತಿ ನೀಡಲು ಹಾಗೂ ಈ ಔಷಧಗಳ ಮೇಲಿನ ಕಸ್ಟಮ್ ಸುಂಕವನ್ನು ಶೇಕಡಾ 10 ರಿಂದ ಶೂನ್ಯಕ್ಕೆ ಕಡಿತಗೊಳಿಸಲು ಸರ್ಕಾರ ಪ್ರಸಾಪ.

## ಸಂಶೋಧನೆ ಅಭಿವೃದ್ಧಿಗೆ ನಿಧಿ

- ವಿಶ್ವವಿದ್ಯಾ ನಿಲಯಗಳು, ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು ಮತ್ತು ಆರ್ ಆ್ಯಂಡ್ ಡಿ ಪ್ರಯೋಗಾಲ ಯಗಳಲ್ಲಿ ಮೂಲ ಸಂಶೋಧನೆ ಮತ್ತು ಮೂಲಮಾದರಿ ಅಭಿವೃದ್ಧಿಯನ್ನು ಬೆಂಬಲಿಸಲು ಅನುಸಂಧಾನ ರಾಷ್ಟ್ರೀಯ ಸಂಶೋಧನಾ ನಿಧಿ ಸ್ಥಾಪನೆ ಪ್ರಸ್ತಾಪ.
- ಖಾಸಗಿ ವಲಯದ ಆಧಾರಿತ ಸಂಶೋಧನೆ ಮತ್ತು ಆವಿಷ್ಕಾರವನ್ನು ವಾಣಿಜ್ಯ ಮಟ್ಟದಲ್ಲಿ ಉತ್ತೇಜಿಸುವ ಕಾರ್ಯವಿಧಾನವನ್ನು 1 ಲಕ್ಷ ಕೋಟಿ ರೂ. ಗಳ ಹಣಕಾಸು ಪೂಲ್‌ನೊಂದಿಗೆ ಸ್ಥಾಪಿಸಲು ಪ್ರಸ್ತಾಪ.
- ಮುಂದಿನ 10 ವರ್ಷಗಳಲ್ಲಿ ಬಾಹ್ಯಾಕಾಶ ಆರ್ಥಿಕತೆಯನ್ನು ಐದು ಪಟ್ಟು ವಿಸ್ತರಿಸಲು 1,000 ಕೋಟಿ ರೂ. ಗಳ ಸಾಹಸೋದ್ಯಮ ಬಂಡವಾಳ ನಿಧಿ ಸ್ಥಾಪಿಸಲು ಪ್ರಸ್ತಾಪ.



## ಭದ್ರತೆ, ಗಡಿ ಕಾವಲುಗಳಿಗೆ ಒತ್ತು

- ಗೃಹ ವ್ಯವಹಾರಗಳ ಸಚಿವಾಲಯಕ್ಕೆ 2,19,643 ಕೋ.ರೂ.
- ಆಂತರಿಕ ಭದ್ರತೆ, ಗಡಿ ಕಾವಲು ಮತ್ತು ಪ್ರಮುಖ ಸ್ಥಾಪನೆಗಳ ಭದ್ರತೆಗೆ ಜವಾಬ್ದಾರಿಗಳಿಗಾಗಿ ಕೇಂದ್ರ ಪೊಲೀಸ್ ಪಡೆಗಳಾದ ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಸಿಐಎಸ್‌ಎಫ್‌ಗೆ 1,43,275 ಕೋ.ರೂ.
- ಜಮ್ಮು-ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೆ 42,277 ಕೋ. ರೂ.,
- ಅಂಡಮಾನ್ - ನಿಕೋಬಾರ್ ದ್ವೀಪಗಳಿಗೆ 5,985 ಕೋ.ರೂ.
- ಚಂಡೀಗಢಕ್ಕೆ 5,862 ಕೋ.ರೂ. ಲಡಾಖ್‌ಗೆ 5,958 ಕೋ. ರೂ.
- ಕೇಂದ್ರ ಸಚಿವ ಸಂಪುಟದ ವೆಚ್ಚಕ್ಕಾಗಿ 1,248 ಕೋ. ರೂ.
- ವಿಪತ್ತು ನಿರ್ವಹಣೆ, ಪರಿಹಾರ ಮತ್ತು ಪುನರ್ವಸತಿ ಮತ್ತು ಇತರ ರಾಜ್ಯ ಸರ್ಕಾರಗಳಿಗೆ 6,458 ಕೋ.ರೂ.

## ಹೆಣ್ಣು ಮಕ್ಕಳಿಗೆ ಸ್ಟೆಮ್ ಕೋರ್ಸ್

- ಉನ್ನತ ಶಿಕ್ಷಣ ಸಂಸ್ಥೆಗಳ ಹೆಚ್ಚಳ, ಸ್ಟೆಮ್ (ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ) ಕೋರ್ಸ್‌ಗಳಲ್ಲಿ ಹೆಣ್ಣುಮಕ್ಕಳಿಗಾಗಿ ಹೆಚ್ಚಿನ ಅವಕಾಶ.
- ಯುಜಿಸಿ ಅನುದಾನವನ್ನು ಹಿಂದಿನ ವರ್ಷದ 6,409 ಕೋಟಿ ರೂ.ಗಳಿದ್ದುದನ್ನು 2500 ಕೋಟಿ ರೂ.ಗಳಿಗೆ ಪರಿಷ್ಕರಣೆ.
- ಕೇಂದ್ರ ವಿಶ್ವವಿದ್ಯಾಲಯಗಳಿಗೆ 15,928ಕೋ.ರೂ. ಅನುದಾನ.

## ಇಪಿಎಫ್‌ಒ ಮೂಲಕ ಉದ್ಯೋಗ ಪ್ರೋತ್ಸಾಹ

- ಸಂಘಟಿತ ವಲಯದಲ್ಲಿ ಹೊಸದಾಗಿ ಪ್ರವೇಶಿಸುವವರಿಗೆ ಇಪಿಎಫ್‌ಒ (ನಿವೃತ್ತಿ ನಿಧಿ ಸಂಸ್ಥೆ) ಮೂಲಕ ಉದ್ಯೋಗ ಹೆಚ್ಚಿಸಲು ನಿರ್ಧಾರ.
- ಉದ್ಯೋಗ ಸಂಬಂಧಿತ ಪ್ರೋತ್ಸಾಹಕ್ಕಾಗಿ (ಜಾಬ್ ಲಿಂಕ್ಡ್ ಇನ್ಸೆಂಟಿವ್) ಮೂರು ಯೋಜನೆಗಳನ್ನು ಜಾರಿಗೆ ನಿರ್ಧಾರ, 1.07 ಲಕ್ಷ ಕೋಟಿ ರೂ. ಮೀಸಲು.
- ಸ್ಕೀಮ್-ಎ ಮೂಲಕ ಉದ್ಯೋಗಿಗಳಿಗೆ ಹೊಸದಾಗಿ ನೇಮಕವಾಗುವ ಎಲ್ಲಾ ಉದ್ಯೋಗಿಗಳಿಗೆ ಗರಿಷ್ಠ 15 ಸಾವಿರ ರೂ.ವರೆಗೆ 3 ಕಂತುಗಳಲ್ಲಿ ತಿಂಗಳ ವೇತನದ ನೇರ ಲಾಭ ವರ್ಗಾವಣೆಯ ಪ್ರಸ್ತಾಪ.
- ಹೆಚ್ಚುವರಿ ಹಣ ಪಡೆಯಲು 1 ಲಕ್ಷ ರೂ. ವೇತನದ ಮಿತಿ. ಈ ಯೋಜನೆಯ ಫಲಾನುಭವಿಗಳು 2.10 ಕೋಟಿ ಯುವಕರು ಎಂದು ಅಂದಾಜು.



## ಮೂಲ ಸೌಕರ್ಯ ನಿರ್ಮಾಣ ಮತ್ತು ಸುಧಾರಣೆ

- ಮೂಲಸೌಕರ್ಯಗಳ ನಿರ್ಮಾಣ ಮತ್ತು ಸುಧಾರಣಾ ಬಂಡವಾಳ ವೆಚ್ಚಕ್ಕಾಗಿ 11,11,111 ಕೋ.ರೂ.
- ಮೂಲಸೌಕರ್ಯಕ್ಕಾಗಿ ಬೆಂಬಲ ನೀಡಲು ರಾಜ್ಯಗಳನ್ನು ಉತ್ತೇಜಿಸಲು, ದೀರ್ಘಾವಧಿಯ ಬಡ್ಡಿ ರಹಿತ ಸಾಲಕ್ಕಾಗಿ 1.5 ಲಕ್ಷ ಕೋ.ರೂ.
- ಜನಸಂಖ್ಯೆ ಹೆಚ್ಚಳದ ದೃಷ್ಟಿಯಿಂದ ಅರ್ಹತೆ ಪಡೆದಿರುವ 25ಸಾವಿರ ಗ್ರಾಮೀಣ ಜನವಸತಿಗಳಿಗೆ ಸರ್ವಋತು ಸಂಪರ್ಕಕ್ಕಾಗಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ 4ನೇ ಹಂತ ಆರಂಭ.

## ಶಿಷ್ಯ ವೇತನ - ಉದ್ಯೋಗ

- ಶಿಕ್ಷಣ ಸಚಿವಾಲಯಕ್ಕೆ 1,20,627.87 ಕೋಟಿ ರೂ. ಅನುದಾನ.
- ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಗೆ ಬಡ್ಡಿ ರಿಯಾಯಿತಿಯೊಂದಿಗೆ ಹಣಕಾಸು ನೆರವು.
- ಮುಂದಿನ ಐದು ವರ್ಷಗಳಲ್ಲಿ ಟಾಪ್ 500 ಕಂಪನಿಗಳಲ್ಲಿ ಒಂದು ಕೋಟಿ ಯುವಕರಿಗೆ ಇಂಟರ್ನ್‌ಶಿಪ್ ಅವಕಾಶ.
- ಇಂಟರ್ನ್‌ಶಿಪ್ ಮಾಡುವ ಯುವಜನರಿಗೆ 5 ಸಾವಿರ ರೂ.ಗಳ ಸ್ಟೈಪೆಂಡ್ ಮತ್ತು ಒಂದು ಬಾರಿಯ ನೆರವಿನಲ್ಲಿ 6 ಸಾವಿರ ರೂ.(ಇಂಟರ್ನ್ಶಿಪ್ ಅವಧಿ 12 ತಿಂಗಳು).
- ದೇಶೀಯ ವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಹಣಕಾಸು ಬೆಂಬಲವಾಗಿ 10 ಲಕ್ಷ ರೂ.ಗಳವರೆಗೆ ಸಾಲ.
- 1000 ಐಟಿಐ ಮೇಲ್ದರ್ಜೆಗೆ: ಕೈಗಾರಿಕೆಗಳ ಅಗತ್ಯಗಳಿಗೆ ಅನುಗುಣವಾಗಿ ಉದ್ಯೋಗಾರ್ಥಿಗಳನ್ನು ಕೌಶಲಯುಕ್ತರನ್ನಾಗಿಸುವ ನಿಟ್ಟಿನಲ್ಲಿ 1,000 ಐಟಿಐಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು.
- ಉದ್ಯೋಗದ ಮೊದಲ 4 ವರ್ಷಗಳಲ್ಲಿ ಉತ್ಪಾದನಾ ವಲಯದ ಉದ್ಯೋಗಿಗಳಿಗೆ ಮತ್ತು ಉದ್ಯೋಗದಾತರಿಗೆ ಪ್ರೋತ್ಸಾಹ. 30 ಲಕ್ಷ ಯುವಕರು ಮತ್ತು ಉದ್ಯೋಗದಾತರಿಗೆ ಅನುಕೂಲ.
- **ಉದ್ಯೋಗದಾತರಿಗೆ ಬೆಂಬಲ:** ತಿಂಗಳಿಗೆ 1 ಲಕ್ಷದವರೆಗೆ ಸಂಬಳದೊಂದಿಗೆ ಎಲ್ಲಾ ವಲಯಗಳಲ್ಲಿ ಹೆಚ್ಚುವರಿ ಉದ್ಯೋಗಕ್ಕಾಗಿ, ಇಪಿಎಫ್‌ಒ ಶುಲ್ಕಗಳನ್ನು ಸರಿದೂಗಿಸಲು ಸರ್ಕಾರವು 2 ವರ್ಷಗಳವರೆಗೆ ತಿಂಗಳಿಗೆ ರೂ 3,000. ಇದರಿಂದ 50 ಲಕ್ಷ ಹೆಚ್ಚುವರಿ ಉದ್ಯೋಗಗಳ ಸೃಷ್ಟಿಗೆ ಉತ್ತೇಜನ.

## ಎಂಎಸ್‌ಎಂಇ ಕ್ಷೇತ್ರಕ್ಕೆ ಬೂಸ್ಟ್!

MSME

- ಮುದ್ರಾ ಯೋಜನೆಯಲ್ಲಿ ನೀಡಲಾಗುವ ಸಾಲ ಮಿತಿಯನ್ನು 10ಲಕ್ಷ ರೂ.ಗಳಿಂದ 20ಲಕ್ಷ.ರೂ.ಗಳಿಗೆ ಹೆಚ್ಚಳ.
- ಸಣ್ಣ, ಅತಿಸಣ್ಣ, ಮಧ್ಯಮ ವರ್ಗದ ಕೈಗಾರಿಕೆಗಳಿಗೆ ಶಕ್ತಿ ತುಂಬಲು ಎಸ್‌ಐಡಿಬಿಐ ಮುಂದಿನ 3ವರ್ಷಗಳಲ್ಲಿ ಹೊಸ ಶಾಖೆಗಳ ಲೋಕಾರ್ಪಣೆ ಸೇರಿದಂತೆ ಅನೇಕ ಉಪಕ್ರಮಗಳ ಪ್ರಕಟ.

## ದಿವ್ಯಾಂಗರ ಸಬಲೀಕರಣ

- ದಿವ್ಯಾಂಗರ ಸಬಲೀಕರಣಕ್ಕಾಗಿ 1,225.27 ಕೋ.ರೂ.
- ದಿವ್ಯಾಂಗರ ನೆರವು ಮತ್ತು ಸಾಧನಗಳ ಖರೀದಿ/ಅಳವಡಿಕೆಗಾಗಿ 315 ಕೋ.ರೂ.
- ಪಂ. ದೀನದಯಾಳ್ ಅಂಗವಿಕಲರ ಪುನರ್ವಸತಿ ಯೋಜನೆಗೆ 165 ಕೋ.ರೂ.
- ದಿವ್ಯಾಂಗರ ಕಾಯಿದೆಯ ಅನುಷ್ಠಾನದ ಯೋಜನೆಗೆ 135 ಕೋ.ರೂ.
- ದಿವ್ಯಾಂಗ ವಿದ್ಯಾರ್ಥಿಗಳಿಗೆ 142.68 ಕೋ.ರೂ.
- ದಿವ್ಯಾಂಗರ ಕ್ರೀಡಾ ಕೇಂದ್ರಕ್ಕೆ 25 ಕೋ.ರೂ.
- ದಿವ್ಯಾಂಗ ರಾಷ್ಟ್ರೀಯ ಸಂಸ್ಥೆಗಳಿಗೆ 370 ಕೋಟಿ ರೂ. ಮೀಸಲು.

## ಕೋಟಿ ಬಡವರಿಗೆ ಸೂರು

- ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಸಬ್ಸಿಡಿ ಹಾಗೂ ಕಡಿಮೆ ಬಡ್ಡಿದರದಲ್ಲಿ, ಮುಂದಿನ 5 ವರ್ಷಗಳ ಅವಧಿಯಲ್ಲಿ 1 ಕೋಟಿ ಮನೆಗಳ ನಿರ್ಮಾಣದ ಗುರಿ, 2.2 ಲಕ್ಷ ಕೋ.ರೂ. ಮೀಸಲು.
- ಕೈಗಾರಿಕಾ ಕಾರ್ಮಿಕರಿಗೆ ವಸತಿ ನಿಲಯದ ಮಾದರಿಯ ಬಾಡಿಗೆ ಮನೆಗಳ ವ್ಯವಸ್ಥೆ ಮಾಡಲು ಮುಂದಿನ 5 ವರ್ಷಗಳಲ್ಲಿ ಕ್ರಮ.

## ಮಹಿಳಾ ಸಬಲೀಕರಣಕ್ಕೆ 26 ಸಾವಿರ ಕೋ.ರೂ.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ 26,092 ಕೋಟಿ ರೂ. ಮೀಸಲು.
- ಉದ್ಯೋಗಿ ಮಹಿಳಾ ವಸತಿ ನಿಲಯಗಳ ಸ್ಥಾಪನೆ.
- ಮಾತೃ ವಂದನಾ ಯೋಜನೆಗಳಂತಹ ಉಪ ಯೋಜನೆಗೆ 2,516 ಕೋಟಿ ರೂ. ನಿಗದಿ.
- ಅಂಗನವಾಡಿ ಮತ್ತು ಪೋಷಣ್ 2.0, ಮಿಷನ್ ವಾತ್ಸಲ್ಯ ಮತ್ತು ಮಿಷನ್ ಶಕ್ತಿ, ಪೌಷ್ಟಿಕಾಂಶ, ಮಕ್ಕಳ ರಕ್ಷಣೆ ಮತ್ತು ಮಹಿಳಾ ಸಬಲೀಕರಣ ಸುಧಾರಣೆಗೆ ಹೆಚ್ಚಿನ ಅನುದಾನ ವಿನಿಯೋಗ.

## ಟಿಡಿಎಸ್ ದರ ಪಾವತಿ ವಿಳಂಬಕ್ಕಿಲ್ಲ ದಂಡ

- ಮನೆಯ ಮಾಸಿಕ ಬಾಡಿಗೆ ಪಾವತಿಯು 50 ಸಾವಿರ ಅಥವಾ ಅದಕ್ಕಿಂತ ಹೆಚ್ಚಿದ್ದರೆ ಬಾಡಿಗೆ ಪಾವತಿಯಿಂದ ನಿಗದಿತ ದರದಲ್ಲಿ ಈಗಿನ ಶೇ.5 ಟಿಡಿಎಸ್ ದರ ಶೇ.2ಕ್ಕೆ ಇಳಿಕೆ.
- ಮ್ಯೂಚುವಲ್ ಫಂಡ್ ಅಥವಾ ಯುಟಿಐ ಮರುಖರೀದಿಯಲ್ಲಿ ಟಿಡಿಎಸ್ ಶೇ 20ರಷ್ಟು ಹಿಂಪಡೆತ.
- ಇ-ಕಾಮರ್ಸ್ ಆಪರೇಟರ್‌ಗಳಿಗೆ ಟಿಡಿಎಸ್ ಶೇಕಡಾ 1 ರಿಂದ 0.1 ಕ್ಕೆ ಇಳಿಕೆ.
- ಟಿಡಿಎಸ್ ತುಂಬುವಲ್ಲಿ ವಿಳಂಬವನ್ನು ಅಪರಾಧ ಎಂದು ಪರಿಗಣಿಸಲಾಗುವುದಿಲ್ಲ.
- ಮ್ಯೂಚುವಲ್ ಫಂಡ್ ಮೇಲಿನ ಹೂಡಿಕೆಗೆ ತೆರಿಗೆ ವಿನಾಯಿತಿ ಇಲ್ಲ.
- ಹೊಸ ತೆರಿಗೆ ಪದ್ಧತಿಯಲ್ಲಿ ಸಂಬಳ ಪಡೆಯುವ ಉದ್ಯೋಗಿ ಬದಲಾವಣೆಗಳ ಆಧಾರದ ಮೇಲೆ ಆದಾಯ ತೆರಿಗೆಯಲ್ಲಿ ರೂ 17,500 ವರೆಗೆ ಉಳಿಸಬಹುದಾದ ಅವಕಾಶ.

## ವಿದೇಶಿ ಆಸ್ತಿ-ಆದಾಯ ಮಾಹಿತಿ ನೀಡದಿದ್ದರೆ 10 ಲಕ್ಷ ರೂ. ದಂಡ

## ರೈಲು ಯೋಜನೆಗಳಿಗೆ 7500 ಕೋ.ರೂ.

## ಸಿಬ್ಬಂದಿ ಸಚಿವಾಲಯಕ್ಕೆ 309.74 ಕೋಟಿ ರೂ.

- ಭಾರತ ಮತ್ತು ವಿದೇಶದಲ್ಲಿರುವ ಸರ್ಕಾರಿ ನೌಕರರ ತರಬೇತಿಗಾಗಿ ಕೇಂದ್ರ ಸಿಬ್ಬಂದಿ ಸಚಿವಾಲಯಕ್ಕೆ 309.74 ಕೋಟಿ ರೂ. ಹಂಚಿಕೆ.
- ತರಬೇತಿ ವಿಭಾಗದ ಇನ್‌ಸ್ಟಿಟ್ಯೂಟ್ ಆಫ್ ಸೆಕ್ರೆಟರಿ ಯೇಟ್ ಟ್ರೈನಿಂಗ್ ಅಂಡ್ ಮ್ಯಾನೇಜ್ಮೆಂಟ್ (ಐಎಸ್‌ಟಿಎಂ), ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ (ಎಲ್‌ಬಿಎಸ್‌ಎನ್‌ಎಎ)ಗೆ 103.05 ಕೋಟಿ ರೂ., ತರಬೇತಿ ಯೋಜನೆಗಳಿಗೆ 120.56 ಕೋಟಿ ರೂ.
- ನಾಗರಿಕ ಸೇವೆಗಳ ಸಾಮರ್ಥ್ಯ ನಿರ್ಮಾಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ ಅಥವಾ ಮಿಷನ್ ಕರ್ಮಯೋಗಿಗೆ 86.13 ಕೋಟಿ ರೂ. ಮೀಸಲು.

## ಗ್ರಾಮೀಣಾಭಿವೃದ್ಧಿಗೆ 2.66 ಲಕ್ಷ ಕೋ.ರೂ.

- ಗ್ರಾಮೀಣ ಮೂಲಸೌಕರ್ಯ ಸೇರಿದಂತೆ ಗ್ರಾಮೀಣಾಭಿವೃದ್ಧಿಗೆ 2.66 ಲಕ್ಷ ಕೋಟಿ ರೂ. ಮೀಸಲು.
- 25,000 ಗ್ರಾಮೀಣ ವಾಸಸ್ಥಳಗಳಿಗೆ ಎಲ್ಲಾ ಹವಾಮಾನ ಸಂಪರ್ಕವನ್ನು ಒದಗಿಸಲು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ 4ನೇ ಹಂತ ಪ್ರಾರಂಭಿಸುವುದಾಗಿ ಘೋಷಣೆ.

# ಜಿಲ್ಲಾ ಕಾರ್ಯಕಾರಿಣಿಗಳು



ಅಜಿತ್ ಶೆಟ್ಟಿ ಹೆರಂಜೆ
ಸಹ ಸಂಚಾಲಕರು
ರಾಜ್ಯ ಪ್ರಕಾಶನ ಪ್ರಕೋಷ್ಠ




**ದಕ್ಷಿಣ ಕನ್ನಡ:** ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಿಣಿಯು 6-7-2024ರಂದು ಮಂಗಳೂರಿನ ಸಂಘನಿಕೇತನದಲ್ಲಿ ನಡೆಯಿತು. ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಉದ್ಘಾಟಿಸಿದರು. ಜಿಲ್ಲಾಧ್ಯಕ್ಷರಾದ ಶ್ರೀ ಸತೀಶ್ ಕುಂಪಲ ಅಧ್ಯಕ್ಷತೆ ವಹಿಸಿದ್ದರು. ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕರಾದ ಶ್ರೀ ವೇದವ್ಯಾಸ ಕಾಮತ್, ಡಾ. ವೈ. ಭರತ್ ಶೆಟ್ಟಿ, ಶ್ರೀ ರಾಜೇಶ್ ನಾಯ್ಕ , ಶ್ರೀ ಹರೀಶ್ ಪೂಂಜ, ಶ್ರೀಮತಿ ಭಾಗೀರಥಿ ಮುರುಳ್ಯ, ವಿಧಾನಪರಿಷತ್ ಸದಸ್ಯರಾದ ಶ್ರೀ ಧನಂಜಯ ಸರ್ಜಿ, ಮೇಯರ್ ಶ್ರೀ ಸುಧೀರ್ ಶೆಟ್ಟಿ, ಉಪಮೇಯರ್ ಶ್ರೀಮತಿ ಸುನೀತಾ, ವಿಭಾಗ ಪ್ರಭಾರಿ ಶ್ರೀ ಉದಯಕುಮಾರ್ ಶೆಟ್ಟಿ ಹಾಗೂ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಶಿವಮೊಗ್ಗ :** ಜಿಲ್ಲಾ ಕಾರ್ಯಕಾರಿಣಿಯು 14-07-2024ರಂದು ನಗರದ ಬಂಟರ ಭವನದಲ್ಲಿ ನಡೆಯಿತು. ಸಂಸದ ಶ್ರೀ ಬಿ.ವೈ. ರಾಘವೇಂದ್ರ, ಉದ್ಘಾಟಿಸಿದರು. ಸಭೆಯಲ್ಲಿ ಶಾಸಕ ಶ್ರೀ ಆರಗ ಜ್ಞಾನೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀ ಟಿ.ಡಿ. ಮೇಘರಾಜ್, ರಾಜ್ಯ ಉಪಾಧ್ಯಕ್ಷ ಶ್ರೀ ಹರತಾಳು ಹಾಲಪ್ಪ. ವಿಧಾನಪರಿಷತ್ ಸದಸ್ಯರಾದ ಶ್ರೀ ಡಿ.ಎಸ್.ಅರುಣ್, ಶ್ರೀ ಡಾ.ಧನಂಜಯ್ ಸರ್ಜಿ ಹಾಗೂ ಇತರ ಜಿಲ್ಲಾ ಮತ್ತು ಮಂಡಲ ಪಾದಾಧಿಕಾರಿಗಳು ಉಪಸ್ಥಿತರಿದ್ದರು.



**ಮಂಡ್ಯ :** ಬ್ರಾಹ್ಮಣರ ಸಮುದಾಯ ಭವನದಲ್ಲಿ ಮಂಡ್ಯ ಜಿಲ್ಲಾ ಕಾರ್ಯಕಾರಿಣಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರಾಜ್ಯ ಯುವ ಮೋರ್ಚಾದ ಅಧ್ಯಕರು ಹಾಗು ದೊಡ್ಡಬಳ್ಳಾಪುರದ ಶಾಸಕರಾದ ಶ್ರೀ ಧೀರಜ್ ಮುನಿರಾಜ್ ಅವರು ಮಾತನಾಡಿ ಸನಾತನ ಹಿಂದೂ ಧರ್ಮ ಹಾಗೂ ಹಿಂದುತ್ವ ಪ್ರತಿಪಾದಕರು ಭಯೋತ್ಪಾದಕರು ಎಂದಿರುವ ಶ್ರೀ ರಾಹುಲ್‌ಗಾಂಧಿ ಅವರ ಹೇಳಿಕೆ ಅಪ್ರಬುದ್ಧ, ಬಾಲಕನದ್ದು ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಡಾ. ಇಂದ್ರೇಶ್, ಮಾಜಿ ಅಧ್ಯಕ್ಷ ಶ್ರೀ ಸಿ.ಪಿ. ಉಮೇಶ್, ಮುಖಂಡರಾದ ಡಾ. ಸಿದ್ದರಾಮಯ್ಯ, ರಾಜ್ಯ ಕಾರ್ಯದರ್ಶಿ ಡಾ.ಲಕ್ಷ್ಮಿ ಅಶ್ವಿನ್‌ಗೌಡ, ಶ್ರೀ ಮುನಿರಾಜು, ಶ್ರೀ ಎಸ್.ಪಿ. ಸ್ವಾಮಿ, ಶ್ರೀ ಅಶೋಕ್ ಜಯರಾಂ, ಶ್ರೀ ಕೆ.ಎಸ್. ನಂಜುಂಡೇಗೌಡ, ಶ್ರೀ ಇಂಡುವಾಳು ಸಚ್ಚಿದಾನಂದ, ಡಾ. ಸದಾನಂದ ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಮಧುಗಿರಿ :** ನಗರದ ಸಿರಿಗಂಧ ಪ್ಯಾಲೆಸ್‌ನಲ್ಲಿ ಜಿಲ್ಲಾ ಕಾರ್ಯಕಾರಿಣಿಯನ್ನು ರಾಜ್ಯ ಬಿಜೆಪಿ ಕಾರ್ಯಕಾರಣಿ ಸದಸ್ಯ ಶ್ರೀ ಮುನಿರಾಜು ರವರು ಉದ್ಘಾಟಿಸಿದರು. ಕಾರ್ಯಕಾರಿಣಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಭೀಮನ ಕುಂಟೆ ಹನುಮಂತೇ ಗೌಡ ಲಕ್ಷ್ಮೀಪತಿ, ಜಿಲ್ಲಾ ಮಹಿಳಾ ಮೋರ್ಚದ ಅಧ್ಯಕ್ಷೆ ಶ್ರೀಮತಿ ಉಮಾ ವಿಜಯರಾಜ್, ಶ್ರೀ ಎಲ್.ಸಿ. ನಾಗರಾಜು, ಶ್ರೀ ಅನಿಲ್ ಕುಮಾರ್, ಡಾ. ವೆಂಕಟರಮಣಯ್ಯ, ಶ್ರೀಮತಿ ಸುಶೀಲಮ್ಮ, ಮಾಜಿ ಜಿಲ್ಲಾಧ್ಯಕ್ಷರಾದ ಶ್ರೀ ಮಂಜುನಾಥ್, ಜಿಲ್ಲಾ ಪ್ರಧಾನಕಾರ್ಯದರ್ಶಿಗಳಾದ ಶ್ರೀ ಆರ್.ಕೆ ಶ್ರೀನಿವಾಸ ಮೂರ್ತಿ ಯಂಜಲಗೆರೆ, ಜಿಲ್ಲಾ ಒಬಿಸಿ ಮೋರ್ಚಾದ ಅಧ್ಯಕ್ಷರಾದ ಶ್ರೀ ಮಾಗೋಡು ಪ್ರತಾಪ್, ಶಿರಾ ಗ್ರಾಮಾಂತರ ಮಂಡಲದ ಅಧ್ಯಕ್ಷರಾದ ಶ್ರೀ ಹೊನ್ನಗೊಂಡನ ಹಳ್ಳಿ ಚಿಕ್ಕಣ್ಣ, ನಗರ ಮಡಲದ ಅಧ್ಯಕ್ಷರಾದ ಶ್ರೀ ಗಿರಿಧರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೊಟ್ಟಾಡಿ ಪಿ. ರಂಗನಾಥ್ ಹಾಗೂ ಇನ್ನಿತರ ಜಿಲ್ಲಾ ಹಾಗೂ ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು

**ಉಡುಪಿ :** ಉಡುಪಿ ಜಿಲ್ಲಾ ಕಾರ್ಯಕಾರಿಣಿಯು 20-07-2024ರಂದು ನಗರದ ಶಾರದ ಇಂಟರ್‌ನ್ಯಾಷನಲ್ ಹೋಟೆಲಿನಲ್ಲಿ ನಡೆಯಿತು. ಕಾರ್ಯಕ್ರಮವನ್ನು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಶ್ರೀ ಸಿಮೆಂಟ್ ಮಂಜು ಉದ್ಘಾಟಿಸಿದರು.




ಇತ್ತೀಚೆಗೆ ನಿಧನರಾದ ಸಂಘ ಪರಿವಾರ, ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀ ಕಿಶೋರ್ ಕುಮಾರ್ ಕುಂದಾಪುರ ಅಧ್ಯಕ್ಷತೆ ವಹಿಸಿದ್ದರು. ಉಡುಪಿ ಶಾಸಕ ಶ್ರೀ ಯಶಪಾಲ್ ಎ. ಸುವರ್ಣ, ಮಾಜಿ ಶಾಸಕ ಶ್ರೀ ಲಾಲಾಜಿ ಆರ್.ಮೆಂಡನ್, ಬಿಜೆಪಿ ಮಂಗಳೂರು ವಿಭಾಗ ಪ್ರಭಾರಿ ಶ್ರೀ ಕೆ. ಉದಯ್ ಕುಮಾರ್ ಶೆಟ್ಟಿ, ಕುಂದಾಪುರ ಶಾಸಕ ಶ್ರೀ ಕಿರಣ್ ಕುಮಾರ್ ಕೊಡಿ, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಶ್ರೀ ಕುಯಿಲಾಡಿ ಸುರೇಶ್ ನಾಯಕ್ ಹಾಗೂ ಇನ್ನಿತರ ಜಿಲ್ಲಾ ಹಾಗೂ ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಕೊಪ್ಪಳ :** ಕೊಪ್ಪಳ ಜಿಲ್ಲಾ ಕಾರ್ಯಕಾರಿಣಿಯು 20-7-2024ರಂದು ಜಿಲ್ಲಾ ಕಾರ್ಯಾಲಯದಲ್ಲಿ ಜರುಗಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾಜಿ ಸಚಿವ ಶ್ರೀ ಹಾಲಪ್ಪ ಆಚಾರ್ ಆವರು ತಮ್ಮ ಆಂತರಿಕ ಕಲಹದಿಂದಲೇ ಸರಕಾರ ಬೀಳುತ್ತದೆ ಎಂದು ಹೇಳಿದರು. ಜಿಲ್ಲಾಧ್ಯಕ್ಷ ಶ್ರೀ ನವೀನಕುಮಾರ್ ಗುಳಗಣ್ಣನವರ್ ಮುಖ್ಯಸಚೇತಕ ಶ್ರೀ ದೊಡ್ಡನಗೌಡ ಪಾಟೀಲ್, ರಾಜ್ಯ ಕಾರ್ಯದರ್ಶಿ ಲಲಿತ ಶ್ರೀ ಆನಾಪೂರ, ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೀ ಕೆ.ಬಸವರಾಜ ಕ್ಯಾವಟ, ಮಾಜಿ ಸಂಸದ ಶ್ರೀ ಶಿವರಾಮೇಗೌಡ, ಮಾಜಿ ಶಾಸಕರಾದ ಶ್ರೀ ಪರಣ್ಣಮುನವಳ್ಳಿ, ಶ್ರೀ ಬಸವರಾಜ ದಡೇಸಗೂರು, ಶ್ರೀ ಜಿ. ವೀರಪ್ಪ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವು ಅರಕೇರಿ, ಶ್ರೀ ಸುನಿಲ್ ಹೆಸರೂರು, ಖಜಾಂಚಿ ಶ್ರೀ ನರಸಿಂಹರಾವ್ ಕುಲಕರ್ಣಿ, ಇನ್ನಿತರ ಜಿಲ್ಲಾ ಹಾಗೂ ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಕೊಡಗು :** ಕೊಡಗು ಜಿಲ್ಲಾ ಕಾರ್ಯಕಾರಿಣಿಯು ಮಡಿಕೇರಿಯ ಕೊಡವ ಸಮಾಜದಲ್ಲಿ 19-7-2024ರಂದು ನಡೆಯಿತು. ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡದ ಸಂಸದರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಮಾಜಿ ಶಾಸಕ ಶ್ರೀ ಕೆ.ಜಿ. ಬೋಪಯ್ಯ, ಸಂಸದ ಶ್ರೀ ಯದುವೀರ್ ಒಡೆಯರ್, ಮಾಜಿ ಶಾಸಕ ಶ್ರೀ ಅಪ್ಪಚ್ಚು ರಂಜನ್ ಹಾಗೂ ಜಿಲ್ಲಾ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಬೆಳಗಾವಿ ಗ್ರಾಮಾಂತರ :** ಬೆಳಗಾವಿ ಗ್ರಾಮಾಂತರ ಜಿಲ್ಲಾ ಕಾರ್ಯಕಾರಿಣಿಯು 19-7-2024ರಂದು ನಗರದ ರೆಡ್ಡಿ ಭವನದಲ್ಲಿ ನಡೆಯಿತು. ಕಾರ್ಯಕಾರಿಣಿಯನ್ನು ಸಂಸದರಾದ ಶ್ರೀ ಜಗದೀಶ್ ಶೆಟ್ಟರ್ ಉದಾಟಿಸಿದರು. ರಾಜ್ಯ ಬಿಜೆಪಿ ಉಪಾಧ್ಯಕ್ಷ ಶ್ರೀ ಮುರುಗೇಶ್ ನಿರಾಣಿ, ಉತ್ತರ ಕನ್ನಡದ ಸಂಸದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಶ್ರೀ ಸುಭಾಷ್ ಮತ್ತಿತರರು ಉಪಸ್ಥತರಿದ್ದರು.

**ಚಿಕ್ಕಬಳ್ಳಾಪುರ :** ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯಕಾರಿಣಿಯು 19-07-2024 ರಂದು ಚಿಕ್ಕಬಳ್ಳಾಪುರದ ಒಕ್ಕಲಿಗರ ಭವನದಲ್ಲಿ ನಡೆಯಿತು.



ಸಂಸದರಾದ ಡಾ ಸುಧಾಕರ್, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಸಿ. ಮುನಿರಾಜು, ಶ್ರೀ ತಮ್ಮೇಶ್ ಗೌಡ, ಮಾಜಿ ಶಾಸಕ ಶ್ರೀ ರಾಜಣ್ಣ ಕೋಚಿಮುಲ್, ಮಾಜಿ ಅಧ್ಯಕ್ಷ ಶ್ರೀ ಕೆ.ವಿ. ನಾಗರಾಜ್ ಇನ್ನಿತರ ಜಿಲ್ಲಾ ಪಾದಾಧಿಕಾರಿಗಳು ಭಾಗಿಯಾಗಿದ್ದರು.

**ರಾಮನಗರ :** ರಾಮನಗರ ಜಿಲ್ಲಾ ಕಾರ್ಯಕಾರಿಣಿಯು 20-7-2-24ರಂದು ನಗರದ ಮಹೇಶ್ವರ ಕನ್ವೆನ್ಷನ್ ಹಾಲಿನಲ್ಲಿ ನಡೆಯಿತು. ಕಾರ್ಯಕಾರಿಣಿಯನ್ನು ರಾಜ್ಯ ಮುಖ್ಯ ವಕ್ತಾರ ಶ್ರೀ ಅಶ್ವತ್ಥ ನಾರಾಯಣ್ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ಶ್ರೀ ಎಂ.ಎನ್. ಆನಂದಸ್ವಾಮಿ ವಹಿಸಿದ್ದರು.

**ಬೀದರ್ :** ಬೀದರ್ ಜಿಲ್ಲಾ ಕಾರ್ಯಕಾರಿಣಿಯು 20-7-2024 ರಂದು ಜಿಲ್ಲಾ ಕಾರ್ಯಾಲಯದಲ್ಲಿ ನಡೆಯಿತು. ಮಾಜಿ ಸಂಸದ ಭಗವಂತ ಖೂಬಾ, ರಾಜ್ಯ ಉಪಾಧ್ಯಕ್ಷ ಶ್ರೀ ರಾಜುಗೌಡ, ರಾಜ್ಯ ಕಾರ್ಯದರ್ಶಿ ಹಾಗೂ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್, ಶಾಸಕರಾದ ಡಾ.ಸಿದ್ದು ಪಾಟೀಲ್, ಶ್ರೀ ಶರಣುಸಲಗಾರ, ಶ್ರೀ ಎಮ್.ಜಿ.ಮೂಳೆ ಇನ್ನಿತರ ಜಿಲ್ಲಾ ಪಾದಾಧಿಕಾರಿಗಳು ಉಪಸ್ಥಿತರಿದ್ದರು.

**ಬಳ್ಳಾರಿ :** ಬಳ್ಳಾರಿ ಜಿಲ್ಲಾ ಕಾರ್ಯಕಾರಿಣಿ ದಿನಾಂಕ 20-7-2024ರಂದು ಸಂಡೂರಿನ ವಂಡರ್ ವ್ಯಾಲಿ ರೆಸಾರ್ಟಿನಲ್ಲಿ ನಡೆಯಿತು. ಕಾರ್ಯಕಾರಿಣಿಯನ್ನು ರಾಜ್ಯ ಬಿಜೆಪಿ ಅಧ್ಯಕ್ಷರಾದ ಶ್ರೀ ಬಿ ವೈ ವಿಜಯೇಂದ್ರ ಉದ್ಘಾಟಿಸಿದರು. ಚಿತ್ರದುರ್ಗ ಸಂಸದ ಶ್ರೀ ಗೋವಿಂದ ಕಾರಜೋಳ, ಮಾಜಿ ಸಂಸದ ಶ್ರೀ ದೇವೇಂದ್ರಪ್ಪ, ಎಂಎಲ್ ಸಿ ಶ್ರೀ ಎನ್.ರವಿಕುಮಾರ್, ಶ್ರೀ ನವೀನ್, ಮಾಜಿ ಶಾಸಕ



ಶ್ರೀ ಸೋಮಶೇಖರರೆಡ್ಡಿ, ರಾಜ್ಯ ಎಸ್‌ಟಿ ಮೋರ್ಚಾ ಅಧ್ಯಕ್ಷ ಶ್ರೀ ಬಂಗಾರು ಹನುಮಂತು, ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ವಿ. ಸುನಿಲ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲಾ ಕಾರ್ಯಕಾರಿಣಿಯು ಜಿಲ್ಲಾ ಕಾರ್ಯಾಲಯ ಪಾಂಚಜನ್ಯದಲ್ಲಿ ದಿನಾಂಕ 21-7-2024ರಂದು ನಡೆಯಿತು. ಕಾರ್ಯಕಾರಿಣಿಯನ್ನು ಕಾರ್ಕಳದ ಶಾಸಕರಾದ ಶ್ರೀ ವಿ. ಸುನಿಲ್ ಕುಮಾರ್ ಉದ್ಘಾಟಿಸಿದರು. ಜಿಲ್ಲಾಧ್ಯಕ್ಷ ಶ್ರೀ ದೇವರಾಜ್ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವಿಧಾನಪರಿಷತ್ ಉಪ ಸಭಾಪತಿ ಶ್ರೀ ಎಂ.ಕೆ. ಪ್ರಾಣೇಶ್, ವಿಧಾನಪರಿಷತ್ ಸದಸ್ಯ ಡಾ.ಸಿ.ಟಿ. ರವಿ, ಮಾಜಿ ಸಚಿವ ಶ್ರೀ ಡಿ.ಎನ್. ಜೀವರಾಜ್, ಮುಖಂಡರಾದ ಶ್ರೀ ಎಚ್.ಸಿ. ಕಲ್ಮರಡಪ್ಪ, ಶ್ರೀ ದೀಪಕ್ ದೊಡ್ಡಯ್ಯ, ಶ್ರೀ ದಿನೇಶ್ ದೇವವೃಂದ, ಶ್ರೀ ರವೀಂದ್ರ ಬೆಳವಾಡಿ, ಶ್ರೀ ಪುಣ್ಣಪಾಲ್ ಹಾಗೂ ಡಾ. ನರೇಂದ್ರ ಉಪಸ್ಥಿತ ರಿದ್ದರು.

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾ ಕಾರ್ಯಕಾರಿಣಿಯು 21-7-2024ರಂದು ಜಿಲ್ಲಾ ಕಾರ್ಯಾಲಯದಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನಾ ಭಾಷಣವನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷ ಶ್ರೀ ಮುರುಗೇಶ ನಿರಾಣಿ ಅವರು ಮಾಡಿದರು. ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಎ. ಎಸ್.ಪಾಟೀಲ ನಡಹಳ್ಳಿ ಮುಂತಾದವರು ಭಾಗವಹಿಸಿದ್ದರು.

**ಚಾಮರಾಜ ನಗರ :** ಚಾಮರಾಜನಗರ ಜಿಲ್ಲಾ ಕಾರ್ಯಕಾರಿಣಿಯು 22-7-2024 ರಂದು ನಗರದ ಅಂಬೇಡ್ಕರ್ ಭವನದಲ್ಲಿ ಜರುಗಿತು. ಕಾರ್ಯಕಾರಿಣಿಯನ್ನು ರಾಜ್ಯ ಕಾರ್ಯದರ್ಶಿ ಡಾ ಲಕ್ಷ್ಮೀ ಅಶ್ವಿನಿ ಗೌಡ ಉದ್ಘಾಟಿಸಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಶ್ರೀ ಎನ್. ಮಹೇಶ್, ಜಿಲ್ಲಾಧ್ಯಕ್ಷರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಮೈಸೂರು ಗ್ರಾಮಾಂತರ ಜಿಲ್ಲೆ :** ಮೈಸೂರು ಗ್ರಾಮಾಂತರ 23-7-2024ರಂದು ಮೈಸೂರು ಗ್ರಾಮಾಂತರ ಜಿಲ್ಲಾ ಕಾರ್ಯಕಾರಿಣಿ ಬೋಗಾದಿ ವೃತ್ತದಲ್ಲಿರುವ ಜೆ ಎಲ್ ಎನ್ ಕಲ್ಯಾಣ ಮಂಟಪದಲ್ಲಿ ನಡೆಯಿತು. ಕಾರ್ಯಕಾರಿಣಿಯ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಂದೀಶ್ ರೆಡ್ಡಿಯವರು ಉದ್ಘಾಟಿಸಿದರು. ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ಆರ್. ರಘು ಕೌಟಿಲ್ಯ, ಮಾಜಿ ಸಂಸದ ಶ್ರೀ ಮುನಿಸ್ವಾಮಿ, ಮಾಜಿ ಸಚಿವ ಶ್ರೀ ಸಿ.ಹೆಚ್. ವಿಜಯಶಂಕರ್, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಎಸ್. ಬಾಲರಾಜು, ಶ್ರೀ ಸಿದ್ದರಾಜು, ಬಿಜೆಪಿ ಮೈಸೂರು ವಿಭಾಗ ಪ್ರಭಾರಿ ಶ್ರೀ ವೈ.ವಿ. ರವಿಶಂಕರ್, ಮುಖಂಡರಾದ ಶ್ರೀ ಎಸ್. ಮಹದೇವಯ್ಯ, ಶ್ರೀ ಹೇಮಂತ್, ಶ್ರೀ ಕುಮಾರ್‌ಗೌಡ, ಶ್ರೀ ಪುಟ್ಟಬುದ್ದಿ, ಶ್ರೀ ಬಾಲಕೃಷ್ಣ, ಶ್ರೀ ಮಹೇಶ್ ಮಡವಾಡಿ, ಶ್ರೀ ಕಿರಣ್, ಶ್ರೀ ಜಯರಾಮೇಗೌಡ, ಶ್ರೀ ದಯಾನಂದ ಪಟೇಲ್, ಶ್ರೀ ಅನಿಲ್ ಥಾಮಸ್ ಮೊದಲಾದವರು ಹಾಗೂ ಜಿಲ್ಲಾ ಪದಾಧಿಕಾರಿಗಳು ಹಾಜರಿದ್ದರು.

**ಬೆಂಗಳೂರು ಗ್ರಾಮಾಂತರ :** ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾರ್ಯಕಾರಿಣಿಯು ವಿಜಯಪುರ ಪಟ್ಟಣದ ಬಸವೇಶ್ವರ ಪ್ಯಾಲೇಸಿನಲ್ಲಿ 27-7-2024ರಂದು ನಡೆಯಿತು. ರಾಜ್ಯ ಮಹಿಳಾ ಮೋರ್ಚಾದ ಅಧ್ಯಕ್ಷರಾದ ಕು. ಮಂಜುಳ, ರಾಜ್ಯ ಯುವ ಮೋರ್ಚಾದ ಅಧ್ಯಕ್ಷ ಶ್ರೀ ಧೀರಜ್ ಮುನಿರಾಜು, ಜಿಲ್ಲಾಧ್ಯಕ್ಷರಾದ ಶ್ರೀ ರಾಮಕೃಷ್ಣ ಹಾಗೂ ಇತರರು ಉಪಸ್ಥಿತರಿದ್ದರು.

**ಕಲಬುರಗಿ ಗ್ರಾಮಾಂತರ :** ಕಲಬುರಗಿ ಗ್ರಾಮಾಂತರ ಜಿಲ್ಲೆಯ ಕಾರ್ಯಕಾರಿಣಿಯು 28-7-2024ರಂದು ಜಿಲ್ಲಾ ಕಾರ್ಯಾಲಯದಲ್ಲಿ ಜರುಗಿತು. ಕಲಬುರಗಿ ಮಾಜಿ ಸಂಸದ ಡಾ. ಉಮೇಶ್ ಜಾದವ್, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಅಮರನಾಥ್, ಬೀದರ್‌ನ ಶಾಸಕ ಶ್ರೀ ಶೈಲೇಂದ್ರ ಬೆಲ್ದಾಳೆ, ಮಾಜಿ ಶಾಸಕ ದತ್ತಾತ್ರೇಯ ರೇವೂರ್ ಪಾಟೀಲ್, ಶ್ರೀ ಶಶೀಲ ನಮೋಶಿ, ಶ್ರೀ ಅವ್ವಣ್ಣ ಮ್ಯಾಕೇರಿ,ಪ್ರಧಾನ ಕಾರ್ಯದರ್ಶಿ ಶ್ರೀ ಉಮೇಶ ಪಾಟೀಲ್, ಶ್ರೀ ಶಿವಯೋಗಿ ನಾಗನಳ್ಳಿ ಹಾಗೂ ಇನ್ನಿತರ ಜಿಲ್ಲಾ ಪಧಾದಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಮೈಸೂರು ನಗರ :** ಮೈಸೂರು ನಗರ ಜಿಲ್ಲಾ ಕಾರ್ಯಕಾರಿಣಿಯು 28-07-2024ರಂದು ನಗರದ ನೇರಂಬಳ್ಳಿ ಸಾವಿತ್ರಮ ಸುಬ್ಬರಾವ್ ಕಲ್ಯಾಣಮಂಟಪದಲ್ಲಿ ನಡೆಯಿತು.




ಕಾರ್ಯಕ್ರಮವನ್ನು ರಾಜ್ಯ ಬಿಜೆಪಿಯ ಉಪಾಧ್ಯಕ್ಷರಾದ ಶ್ರೀಮತಿ ಮಾಳವಿಕ ಅವಿನಾಶ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ರಾಜ್ಯ ಕಾಂಗ್ರೆಸ್ ಸರ್ಕಾರದ ಪ್ರಮಾದ





## ಶಿರೂರು ಕಾರ್ಯಾಚರಣೆ ವಿಳಂಬ

ಶಿರೂರಿನ ಗುಡ್ಡ ಕುಸಿತ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಪ್ರಮಾದದಿಂದ ಕಾರ್ಯಾಚರಣೆ ವಿಳಂಬವಾಗಿದೆ, ಇನ್ನಾದರೂ ಸಮಸ್ಯೆ ಆಲಿಸಿ ತಕ್ಷಣ ಸ್ಪಂದಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ವಿ.ವೈ. ವಿಜಯೇಂದ್ರ ಅವರು ಆಗ್ರಹಿಸಿದರು. ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲೂಕಿನ ಶಿರೂರಿನ ಗುಡ್ಡ ಕುಸಿತ ಪ್ರದೇಶ ಹಾಗೂ ಹಾನಿಗೊಳಗಾದ ಉಳವರೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ 12 ಕೋ.ರೂ. ಅನುದಾನದಲ್ಲಿ ಈ ಭಾಗದಲ್ಲಿ ತಡೆಗೋಡೆ ನಿರ್ಮಿಸಿದರು. ತಡೆಗೋಡೆ ಇರುವುದರಿಂದ ದೊಡ್ಡಮಟ್ಟದ ಅಪಾಯದಿಂದ ಪಾರಾಗುವಂತಾಗಿದೆ ಎಂದು ಹೇಳಿದರು.

ಸಂತ್ರಸ್ತರಿಗೆ ಹೆಚ್ಚಿನ ಪರಿಹಾರದ ಜತೆಗೆ ಸಂಕಷ್ಟಕ್ಕೆ ಈಡಾಗಿರುವ ಬಡ ಕುಟುಂಬಗಳಿಗೆ ಶಾಶ್ವತ ಪುನರ್ವಸತಿ ಕಲ್ಪಿಸಬೇಕು. ಈ ಬಗ್ಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೊಂದಿಗೆ ಚರ್ಚಿಸಿದ್ದೇನೆ. ಘಟನೆ ಕುರಿತು ಪ್ರಧಾನಿ ಕಚೇರಿಯಿಂದಲೂ ಹೆಚ್ಚಿನ ಮಾಹಿತಿ ಪಡೆದುಕೊಂಡಿದ್ದು, ಕಾರ್ಯಾಚರಣೆಗೆ ಮಿಲಿಟರಿ ನೆರವು ಪಡೆದುಕೊಳ್ಳಲಾಗಿದೆ ಎಂದು ಹೇಳಿದರು. ಚತುಷ್ಪಥ ಹೆದ್ದಾರಿ ಗುತ್ತಿಗೆ ಪಡೆದಿರುವ ಐಆರ್‌ಬಿ ಕಂಪನಿಯ ನಿರ್ಲಕ್ಷ್ಯದಿಂದ ದುರ್ಘಟನೆ ನಡೆದಿದೆ ಎಂಬ ಮಾತು ಕೇಳಿ ಬಂದಿದೆ. ಆದರೆ, ಇದು ಆರೋಪ-ಪ್ರತ್ಯಾರೋಪ ಮಾಡುವ ಸಮಯವಲ್ಲ. ಮೊದಲು ದುರಂತದಲ್ಲಿ ತೊಂದರೆಗೆ ಸಿಲುಕಿರುವವರನ್ನು ರಕ್ಷಣೆ ಮಾಡುವುದು ಆದ್ಯ ಕರ್ತವ್ಯವಾಗಬೇಕು. ಈ ವಿಷಯವನ್ನು ಕೇಂದ್ರದ ಗಮನಕ್ಕೂ ತರಲಾಗುವುದು ಎಂದು ಅವರು ಹೇಳಿದರು.

## ಗುಡ್ಡ ಕುಸಿತ ಪ್ರದೇಶಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಎನ್‌ಡಿಎ ನಾಯಕರ ಭೇಟಿ ಸಂತ್ರಸ್ತರ ಅಹವಾಲು ಆಲಿಕೆ

### ಅವೈಜ್ಞಾನಿಕ ಕಾಮಗಾರಿ ವಿರುದ್ಧ ದೂರು

ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳ ಕರ್ತವ್ಯ ಲೋಪ, ಬೇಜವಾಬ್ದಾರಿ, ಅವೈಜ್ಞಾನಿಕ ಕಾಮಗಾರಿಯಿಂದ ರಸ್ತೆ ಹದಗೆಟ್ಟಿದೆ ಎಂದು ಕೇಂದ್ರ ಸಚಿವ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು. ತಾಲೂಕಿನ ವಿವಿಧ ಪ್ರದೇಶಗಳಲ್ಲಿ ಮಳೆಗೆ ಹಾನಿಯಾದ ರಾಷ್ಟ್ರೀಯ ಹೆದ್ದಾರಿ ಪರಿಶೀಲಿಸಿದ ನಂತರ ಅವರು ಮಾತನಾಡಿ, ಶಿರೂರಿನಲ್ಲಿ ಮಳೆ ಮುಂದುವರಿದರೆ ಇನ್ನೂ ಭೂಕುಸಿತವಾಗುತ್ತದೆ, ಸಕಲೇಶಪುರದಿಂದ ಉದ್ದಕ್ಕೂ ಭೂಕುಸಿತವಾಗುತ್ತಲೇ ಇದೆ. ಕಳಪೆ ಹಾಗೂ ಅವೈಜ್ಞಾನಿಕವಾಗಿ ಕಾಮಗಾರಿ ಮಾಡಲಾಗುತ್ತಿದೆ. ಎಲ್ಲಾ ಕಡೆ ಎತ್ತರದ ಪ್ರದೇಶ ಹಾಗೂ ಗುಡ್ಡಗಳನ್ನು 90 ಡಿಗ್ರಿಯಲ್ಲಿ ತುಂಡು ಮಾಡಿದ್ದಾರೆ. ಗುತ್ತಿಗೆದಾರರು 8 ವರ್ಷಗಳಿಂದ ನಿಗದಿತ ಅವಧಿಯಲ್ಲಿ ಕೆಲಸ ಮಾಡದೆ ಇರುವುದು ಒಂದು ಭಾಗವಾದರೆ, ಜತೆಗೆ ಅವೈಜ್ಞಾನಿಕ ಹಾಗೂ ಕಳಪೆ ಕಾಮಗಾರಿಯಾಗಿದೆ ಎಂದು ಹೇಳಿದರು. ಸುರಂಗ ಮಾರ್ಗ ನಿರ್ಮಾಣ ಸಂಬಂಧ ಇತ್ತೀಚೆಗೆ ಕೇಂದ್ರ ಭೂ ಸಾರಿಗೆ ಸಚಿವ ಶ್ರೀ ನಿತಿನ್ ಗಡ್ಕರಿ ಅವರೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದೇನೆ. ಕೇಂದ್ರ ಭೂ ಸಾರಿಗೆ ಸಚಿವ ಶ್ರೀ ನಿತಿನ್ ಗಡ್ಕರಿ ಅವರಿಗೆ ಎಲ್ಲ ಮಾಹಿತಿ ನೀಡಿ ಸ್ಥಳಕ್ಕೆ ಒಮ್ಮೆ ಭೇಟಿ ನೀಡಲು ಮನವಿ ಮಾಡುತ್ತೇನೆ ಎಂದು ಹೇಳಿದರು. ಅರಣ್ಯ ಇಲಾಖೆಯ ಕಾನೂನುಗಳು ತೊಡಕಾಗಿವೆ. ಒಂದೆಡೆ ಪಶ್ಚಿಮಘಟ್ಟದ ಪರಿಸರದ

ಮೇಲೆ ಉಂಟಾಗುವ ಅನಾಹುತ ತಪ್ಪಿಸಬಹುದು. ಅಲ್ಲದೇ ವನ್ಯಜೀವಿಗಳ ಆವಾಸಸ್ಥಾನಕ್ಕೆ ಯಾವುದೇ ತೊಂದರೆ ಆಗುವುದಿಲ್ಲ''ಎಂದು ಹೇಳಿದರು.ಯಾವ ಸರ್ಕಾರವೂ 10 ಲಕ್ಷ ರೂ. ಪರಿಹಾರ ನೀಡಲು ಸಾಧ್ಯವೇ ಇಲ್ಲ ಎಂಬ ಸಚಿವ ಶ್ರೀ ಮಂಕಾಳ ವೈದ್ಯ ಹೇಳಿಕೆಗೆ ತಿರುಗೇಟು ನೀಡಿದ ಕೇಂದ್ರ ಸಚಿವ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಸಮಯ ಸಿಕ್ಕರೆ ಅವರು ಕೊಡಗಿಗೆ ಭೇಟಿ ನೀಡಲಿ, ನನ್ನ ಕಾಲದಲ್ಲಿ 10 ಲಕ್ಷ ರೂ.ವೆಚ್ಚದಲ್ಲಿ ಮನೆ ನಿರ್ಮಿಸಿದ್ದೇವೆ, 1 ಲಕ್ಷ ರೂ. ಪರಿಹಾರ ಕೊಟ್ಟಿದ್ದೇವೆ, 50 ಸಾವಿರ ರೂ, ಸಾಮಗ್ರಿ ಖರೀದಿಸಲು ಕೊಟ್ಟಿದ್ದೇವೆ ಎಂದು ಮಾಹಿತಿ ನೀಡಿದರು.

''ಮಲೆನಾಡು ಭಾಗದಲ್ಲಿ ಭಾರಿ ಮಳೆಯಿಂದಾಗಿ ಹಲವು ಮನೆ, ರಸ್ತೆಗಳು, ಬೆಳೆಗಳಿಗೆ ಹಾನಿಯಾಗಿದ್ದು, ಮಂತ್ರಿಗಳು ಕೂಡಲೇ ಭೇಟಿ ನೀಡಿ ಸ್ಥೈರ್ಯ ತುಂಬುವ ಕೆಲಸ ಆಗಬೇಕು,'' ಎಂದು ಹೇಳಿದರು.

ಕಾಫಿ ಬೆಳೆಗಾರರ ಹಿತಕಾಯಲು ಸದಾ ಬದ್ಧನಾಗಿದ್ದೇನೆ ಎಂದು ಪ್ರತಿಪಕ್ಷ ನಾಯಕ ಶ್ರೀ ಆರ್. ಅಶೋಕ ಹೇಳಿದರು. ಶಿರಾಡಿಘಾಟ್‌ನ ದೊಡ್ಡತಪ್ಪಲೆ ಗ್ರಾಮ ಸಮೀಪ ಭೂಕುಸಿತಗೊಂಡಿರುವ ಪ್ರದೇಶಕ್ಕೆ ಭೇಟಿ ನೀಡಿದ ನಂತರ ಹಾನಿಗೊಂಡಿರುವ ಕಾಫಿ ತೋಟಗಳನ್ನು ಪರಿಶೀಲನೆ ನಡೆಸಿ ಹಾಸನ ಬೆಳೆಗಾರರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಒಂದು ತಿಂಗಳ ನಿರಂತರ ಮಳೆ ಹಾಗೂ ಗಾಳಿಯಿಂದ ಕಾಫಿ, ಮೆಣಸಿನ ಬೆಳೆ ಸಾಕಷ್ಟು ಹಾನಿಗೊಂಡಿದೆ. ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಮೂಲಕ ಬೆಳೆಗಾರರ ನೆರವಿಗೆ ಧಾವಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. ಕಳೆದ ಬಿಜೆಪಿ ಸರ್ಕಾರದಲ್ಲಿ ಕಂದಾಯ ಮಂತ್ರಿಯಾಗಿದ್ದ ವೇಳೆ ಬೆಳೆಗಾರರಿಗೆ ಅಂಟಿದ್ದ ಭೂಗಳ್ಳರ ಪಟ್ಟವನ್ನು ತೆಗೆದಿದ್ದು ನಾನು, ನಮ್ಮ ಸರ್ಕಾರದ ವೇಳೆ ಒತ್ತುವರಿ ಜಮೀನು ಗುತ್ತಿಗೆ ನೀಡುವ ಸಂಬಂಧ ಆರಂಭಿಸಿದ್ದ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಕೃಷಿ ಮಂತ್ರಿಯೊಂದಿಗೆ ಈ ಸಂಬಂಧ ಚರ್ಚಿಸಿ ಶೀಘ್ರವೇ ಜಾರಿಗೊಳಿಸುವಂತೆ ಒತ್ತಾಯಿಸಲಾಗುವುದು ಎಂದು ಹೇಳಿದರು.

# ಪ್ರಧಾನಿ ಶ್ರೀ ನರೇಂದ್ರ ಮೋದಿ ರವರಿಗೆ 10 ಕೋಟಿ ಹಿಂಬಾಲಕರು (Followers)



ಮೈಕ್ರೋಬ್ಲಾಗಿಂಗ್ ವೆಬ್‌ಸೈಟ್ ಟ್ವಿಟರ್‌ನಲ್ಲಿ (X) ಪ್ರಧಾನಿ ಶ್ರೀ ನರೇಂದ್ರ ಮೋದಿ 10 ಕೋಟಿ ಹಿಂಬಾಲಕರನ್ನು (Followers) ಹೊಂದುವ ಮೂಲಕ ಹೊಸ ಮೈಲುಗಲ್ಲು ನೆಟ್ಟಿದ್ದಾರೆ. ಈ ಸಾಧನೆ ಮಾಡಿದ ಜಗತ್ತಿನ ಮೊದಲ ನಾಯಕರಾಗಿದ್ದರೆ. ಹಿಂಬಾಲಕರ ವಿಷಯದಲ್ಲಿ ಭಾರತದ ಯಾವುದೇ ನಾಯಕರು ಪಟ್ಟಿಯಲ್ಲಿ ಪ್ರಧಾನಿ ಶ್ರೀ ಮೋದಿ ಹತ್ತಿರವೂ ಇಲ್ಲ. ಶ್ರೀ ರಾಹುಲ್ ಗಾಂಧಿ 2.64 ಕೋಟಿ, ಶ್ರೀ ಕೇಜ್ರಿವಾಲ್ 2.75 ಕೋಟಿ ಹಿಂಬಾಲಕರನ್ನು ಹೊಂದಿದ್ದಾರೆ. ಶ್ರೀ ರಾಹುಲ್ ಗಾಂಧಿ, ಶ್ರೀ ಕೇಜ್ರಿವಾಲ್, ಶ್ರೀ ಅಖಿಲೇಶ್ ಯಾದವ್, ಕು. ಮಮತಾ ಬ್ಯಾನರ್ಜಿ, ಶ್ರೀ ಪ್ರಸಾದ್ ಯಾದವ್, ಶ್ರೀ ಶರದ್ ಪವಾರ್ ಅವರ ಹಿಂಬಾಲಕರನ್ನು (Followers) ಸೇರಿಸಿದರೂ ಕೋಟಿಯಾಗುವುದಿಲ್ಲ.

### ಹೆಚ್ಚು ಫಾಲೋವರ್ಸ್‌ಹೊಂದಿರುವ ಅಗ್ರ 5 ವಿಶ್ವದ ನಾಯಕರು

| | |
|---|---|
| ಶ್ರೀ ನರೇಂದ್ರ ಮೋದಿ, ಭಾರತದ ಪ್ರಧಾನಮಂತ್ರಿ | : 10 ಕೋಟಿ |
| ಜೋ ಬೈಡೆನ್, ಅಮೆರಿಕ ಅಧ್ಯಕ್ಷ | : 3.81 ಕೋಟಿ |
| ರೆಸೆಪ್ ತಯ್ಯಿಪ್ ಎರ್ಡೊಗನ್, ಟರ್ಕಿ ಅಧ್ಯಕ್ಷ | : 2.15 ಕೋಟಿ |
| ಶೇಖ್ ಮೊಹಮ್ಮದ್, ಯುಎಇ ಅಧ್ಯಕ್ಷ | : 1.12 ಕೋಟಿ |
| ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್, ಮೆಕ್ಸಿಕೊ ಅಧ್ಯಕ್ಷ | : 1.09 ಕೋಟಿ |




# ಜನಾಂಗ ದ್ರೋಹಿ ಹೆಚ್.ಸಿ. ಮಹದೇವಪ್ಪ ಮತ್ತು ಪ್ರಿಯಾಂಕ ಖರ್ಗೆ

**ನಿಮ್ಮ ಈ ಪೊಳ್ಳು ಗ್ಯಾರಂಟಿಯಿಂದ ರಾಜ್ಯದಲ್ಲಿ ಅದೆಷ್ಟು ದಲಿತ ಕುಟುಂಬಗಳು ಸ್ವಾವಲಂಬಿಯಾಗಿದೆ ಎಂದು ಲೆಕ್ಕ ಕೊಡಿ ಎಂದು ಸದನದಲ್ಲಿ ಪ್ರಶ್ನಿಸುವಂತೆ ಬಿಜೆಪಿಯ ಶಾಸಕರು ಮತ್ತು ಪರಿಷತ್ ಸದಸ್ಯರಲ್ಲಿ ಎಸ್.ಸಿ, ಮೋರ್ಚಾದ ಪರವಾಗಿ ನನ್ನ ಮನವಿ.**



**ಪರಮಾನಂದ ಎಂ.ಎಸ್.**
ರಾಜ್ಯ ಕಾರ್ಯದರ್ಶಿ, ಎಸ್.ಸಿ. ಮೋರ್ಚಾ

ಈ ಹೆಚ್.ಸಿ. ಮಹದೇವಪ್ಪ ಮತ್ತು ಇವರನ್ನು ಬೆಂಬಲಿಸುವ ಪ್ರಿಯಾಂಕ ಖರ್ಗೆ, ಮತ್ತು ನಮ್ಮದೇ ಪಕ್ಷದ ಸರ್ಕಾರ ಇರುವಾಗ ಹಣ ದುರ್ಬಳಕೆ ಮಾಡಿಕೊಂಡ ಸಚಿವರೂ ಸೇರಿದಂತೆ ಇವರೆಲ್ಲರೂ ಜನಾಂಗ ದ್ರೋಹಿಗಳೇ... ನಯವಂಚಕರೇ... ಒಂದು SCSP/STP ಸರಿಯಾಗಿ ಸದ್ಬಳಕೆ ಮಾಡಿಕೊಂಡು ಸಮುದಾಯದ ಏಳ್ಗೆಗೆ ಶ್ರಮಿಸಲಿಲ್ಲವೆಂದಾದಲ್ಲಿ ಈ ಪ್ರಜಾಪ್ರಭುತ್ವದಲ್ಲಿಯೂ ಅವರು ಇನ್ನೊಬ್ಬರ ಕೈ ಕೆಳಗೆ ಜೀತದ ಮನಸ್ಥಿತಿಯಲ್ಲೇ ಇದ್ದಾರೆಂದೇ ಅರ್ಥ. ಹಣವನ್ನು SCSP/STPಗೆ ಕೊಟ್ಟು ತೆಗೆದುಕೊಳ್ಳುವ ನಸ್ರಾಣಿ ಆಟ ಆಡುವುದನ್ನು ಬಿಟ್ಟು ನೇರಾ ಅದನ್ನು ಗ್ಯಾರಂಟಿ ಯೋಜನೆಯ ಹಣ ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿಕೊಂಡುಬಿಟ್ಟರೆ ಈ ದುಃಸ್ಥಿತಿಯೇ ಇರುವುದಿಲ್ಲವಲ್ಲ.

ದಲಿತರ ಬಾಯಿಗೆ ಮಣ್ಣುಹಾಕಿ ಅವರ ಬದುಕಿಗೆ ಬೆಂಕಿ ಇಟ್ಟು ಈಗ ಸದನದಲ್ಲೂ ಮತ್ತು ಅವರ ವೈಯಕ್ತಿಕ ಸಾಮಾಜಿಕ ಜಾಲತಾಣಗಳಲ್ಲಿಯೂ ಆ ಹಣವನ್ನು ಗ್ಯಾರಂಟಿಯಲ್ಲಿಯೂ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೇ ಬಳಸಲಾಗಿದೆ ಎಂದು ನಾಚಿಕೆ ಬಿಟ್ಟು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಒಟ್ಟು 25,396.38 ಕೋ.ರೂ.ಗಳನ್ನು ತನ್ನ ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿರುವುದನ್ನು ಒಪ್ಪಿಕೊಂಡಿರುವ ರಾಜ್ಯ ಸರ್ಕಾರ ನಡೆಯುತ್ತಿರುವುದೇ ಈ ದಲಿತರ ಹಣದಿಂದ ಎಂದು ಸಾಬೀತಾಗಿದೆ. ನಿಮ್ಮ ಈ ಪೊಳ್ಳು ಗ್ಯಾರಂಟಿಯಿಂದ ರಾಜ್ಯದಲ್ಲಿ ಅದೆಷ್ಟು ದಲಿತ ಕುಟುಂಬಗಳು ಸ್ವಾವಲಂಬಿಯಾಗಿದೆ ಎಂದು ಲೆಕ್ಕ ಕೊಡಿ ಎಂದು ಸದನದಲ್ಲಿ ಪ್ರಶ್ನಿಸುವಂತೆ ಬಿಜೆಪಿಯ ಶಾಸಕರು ಮತ್ತು ಪರಿಷತ್ ಸದಸ್ಯರಲ್ಲಿ ಎಸ್.ಸಿ, ಮೋರ್ಚಾದ ಪರವಾಗಿ ನನ್ನ ಮನವಿ.

ಗ್ಯಾರಂಟಿ ಯೋಜನೆಗಳು ಕಲ್ಯಾಣ ಕಾರ್ಯಕ್ರಮದ ವ್ಯಾಪ್ತಿಗೆ ಬರುತ್ತದೆ. ಅಭಿವೃದ್ಧಿಗೆ ಮೀಸಲಿಟ್ಟ ಎಸ್‌ಸಿಎಸ್‌ಪಿ-ಎಸ್‌ಟಿಪಿ ಹಣವನ್ನೇಕೆ ಬಳಸುತ್ತಿದ್ದೀರಿ? ಕಲ್ಯಾಣ ಕಾರ್ಯಕ್ರಮಗಳಿಗೂ ಅಭಿವೃದ್ಧಿ ಯೋಜನೆಗಳಿಗೂ ವ್ಯತ್ಯಾಸ ಗೊತ್ತಿಲ್ಲದ್ದಷ್ಟು ಅವಿವೇಕದ ಸರ್ಕಾರವೇ? ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ನೇರವಾಗಿ ಅನುಕೂಲವಾಗುವಂತಹ ಕಾರ್ಯಕ್ರಮಗಳಿಗೆ ಮಾತ್ರ ಬಳಸಬೇಕೆಂಬ ನಿರ್ಬಂಧವಿದ್ದರೂ ಈ ಕಾಂಗ್ರೇಸ್ ಸರ್ಕಾರ ದಲಿತರನ್ನು ಕೇವಲವಾಗಿ ಪರಿಗಣಿಸಿ ನಮ್ಮ ಹಣವನ್ನು ಗ್ಯಾರಂಟಿಗೆ ಪೋಲು ಮಾಡುತ್ತಿದೆ. ಕಾಂಗ್ರೇಸ್ ಕೃಪಕಟಾಕ್ಷದಲ್ಲಿ ಇರುವ ಎಲ್ಲಾ ದಲಿತ ಸಂಘಟನೆಗಳು ಇದನ್ನು ಪ್ರಶ್ನಿಸದೇ ಅವರು ಹಾಕುವ ಬಿಸ್ಕತ್‌ಗಳಿಗಾಗಿ ಬಾಯಿ ಮುಚ್ಚಿಕೊಂಡಿವೆ.

ವಾಲ್ಮೀಕಿ ನಿಗಮದ ಹಣವು ಭ್ರಷ್ಟಾಚಾರವಾಗಿರುವ ಬಗ್ಗೆ ಸದನದಲ್ಲೇ ನಾಚಿಕೆ ಇಲ್ಲದೆ ವಿವರ ಕೊಟ್ಟು ಒಪ್ಪಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಎಂದರೆ taken for granted ರೀತಿಯಾಗಿದೆ. ಎಸ್‌ಸಿ, ಎಸ್‌ಟಿಗಳನ್ನೇ ಬಳಸಿಕೊಂಡು ಇಂದು ಅಧಿಕಾರಕ್ಕೆ ಏರಿ ಈಗ ನಮ್ಮನ್ನೇ ಶೋಷಣೆ ಮಾಡುತ್ತಿದ್ದಾರೆ. ಇವೆಲ್ಲವೂ ಗೊತ್ತಿದ್ದು ಅವರ ಪರವಾಗಿಯೇ ವಕಾಲತ್ತು ವಹಿಸುತ್ತಿರುವ ಹೆಚ್.ಸಿ. ಮಹದೇವಪ್ಪ ಮತ್ತು ಪ್ರಿಯಾಂಕ ಖರ್ಗೆ ಜನಾಂಗ ದ್ರೋಹಿಗಳಲ್ಲವೇ?

ದಲಿತ ಕೇರಿಗಳ ಯುವಕರನ್ನು ಮಾನಸಿಕವಾಗಿ ತಯಾರು ಮಾಡಿ ಅವರನ್ನು ಬದುಕಲು ಸಮಾಜದೊಳಗೆ ತರುವ ಜವಾಬ್ದಾರಿ ಸಮಾಜ ಕಲ್ಯಾಣ ಇಲಾಖೆಯ ಮೇಲಿದೆ. ಇನ್ನೂ ಎಷ್ಟೋ ವಿದ್ಯಾರ್ಥಿಗಳು ಶುಲ್ಕ ಕಟ್ಟಲಾಗದೇ ಶಾಲಾ ಕಾಲೇಜುಗಳ ಹೊರಗೇ ಅಲೆಯುತ್ತಿದ್ದಾರೆ. ಕೆಲವರಂತೂ ಸಿಗುವ ಪ್ರೋತ್ಸಾಹ ಧನಗಳಲ್ಲಿ ಮಜಾ ಮಾಡುತ್ತಾ ದನಗಳಂತೆಯೇ ಅಂಡಲೆಯುತ್ತಿದ್ದಾರೆ. ಈ ಕುರಿತು ಪರಿಶೀಲನೆ ನಡೆಯುತ್ತಿಲ್ಲ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಪ್ರಬುದ್ಧ ಯೋಜನೆ ಈ ವರ್ಷದಿಂದ ತೆಗೆದು ಹಾಕಿದ್ದೇವೆ ಎಂಬ ವಿಷಯ ಸ್ವತಃ ಸಮಾಜ ಕಲ್ಯಾಣ ಇಲಾಖೆ ಸಚಿವರು ನನಗೆ ತಿಳಿದೇ ಇಲ್ಲ ಎಂಬ ಬೇಜವಾಬ್ದಾರಿ ಉತ್ತರ ಕೊಡುತ್ತಾರೆ.

ಮಣಿವಣ್ಣನ್ ಎಂಬ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯು ಉನ್ನತ ವ್ಯಾಸಂಗ ಮಾಡುವುದಕ್ಕೆ ಯೋಜನೆಯ ಅನುದಾನ ಬಳಸುವುದು ವ್ಯರ್ಥ ಎಂಬ ಹೇಳಿಕೆಯಂತೂ ಸಿದ್ದರಾಮಯ್ಯ ಮತ್ತು ಹೆಚ್.ಸಿ. ಮಹದೇವಪ್ಪರವರ ಮಾತನ್ನು ಅವರ ಬಾಯಿಯಲ್ಲಿಯೇ ಹೇಳಿಸಿರುವುದರಲ್ಲಿ ಅನುಮಾನವೇ ಬೇಡ. ಕೊಟ್ಯಾಂತರ ಸಂಸಾರಗಳಿಗೆ ಸೂರಿಲ್ಲ... ಅವರಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮನೆಗಳನ್ನು ಬಿಟ್ಟರೆ ರಾಜ್ಯ ಸರ್ಕಾರದಿಂದ ಯಾವುದೇ ಯೋಜನೆ ರೂಪಿಸಿಲ್ಲ. ದಲಿತ ಕೇರಿಗಳಲ್ಲಿರುವ ಲಕ್ಷಾಂತರ ಕುಟುಂಬಗಳಿಗೆ ಇನ್ನೂ ಸರಿಯಾದ ಮನೆಯೇ ಇಲ್ಲ. ಅತಿವೃಷ್ಟಿಯಲ್ಲಿ ಮನೆ, ಆಡು, ಹಸು ಕಳೆದುಕೊಂಡ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಪರಿಹಾರವೂ ಇಲ್ಲಾ, ಮತ್ತೊಮ್ಮೆ ಬದುಕು ಕಟ್ಟಿಕೊಳ್ಳಲು ಆಸರೆಯೂ ಇಲ್ಲ.

ನನ್ನ ಜನಾಂಗ ಇಂದು ಅನಾಥರಾಗಿ ಬೀದಿಗೆ ಬಿದ್ದಿದ್ದಾರೆ. ಅದಕ್ಕೂ ಕೇಂದ್ರ ಸರ್ಕಾರದ ಕೊಡುಗೈಯನ್ನೆ ಕಾಯುವಂತಾಗಿದೆ ಇಂದಿನ ಪರಿಸ್ಥಿತಿ. ಇಂದು ಹಾದಿ ಬೀದಿಗಳಲ್ಲಿ ದಲಿತರ ಹಿಂದುಳಿದವರ ಕೊಲೆ, ದೌರ್ಜನ್ಯವಾಗುತ್ತಿವೆ. ವರದಿಯೊಂದರ ಪ್ರಕಾರ ಕಳೆದ ಒಂದು ವರ್ಷದಲ್ಲಿ ಅತೀ ಹೆಚ್ಚು ದಲಿತ ದೌರ್ಜನ್ಯ ಕೇಸ್‌ಗಳು ದಾಖಲಾಗಿವೆ ಆದರೆ ಅದ್ಯಾವೂ ತಾರ್ಕಿಕ ಅಂತ್ಯ ಕಾಣುತ್ತಿಲ್ಲ ಅಥವಾ ಕಾನೂನಿನ ನ್ಯಾಯ, ಪರಿಹಾರ ದೊರಕಿಲ್ಲ. ಹೆಚ್ಚಿನ ದಲಿತ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ರಸ್ತೆಗಳಲ್ಲಿ ಹಾಡು ಹಗಲೇ ದಲಿತ ಹೆಣ್ಣು ಮಕ್ಕಳ ಮಾನಹರಣ ಮಾಡುತ್ತಿದ್ದಾರೆ.

**ಹಲ್ಲೆ ನಿರಂತರ :** ಕಳೆದ ವರ್ಷ ಬೆಳಗಾವಿಯಲ್ಲಿ ಮಹಿಳೆಯೊಬ್ಬರನ್ನು ಬೆತ್ತಲೆ ಮಾಡಿ ವಿದ್ಯುತ್ ಕಂಬಕ್ಕೆ ಕಟ್ಟಿ ಥಳಿಸಿದ ಪ್ರಕರಣ ಕುರಿತು ರಾಜ್ಯ ಪೊಲೀಸರ ವಿರುದ್ಧ ಹೈಕೋರ್ಟ್ ಕೂಡ ಆಕ್ರೋಶ ವ್ಯಕ್ತಪಡಿಸಿತ್ತು. ಕನಕಪುರ ತಾಲೂಕು, ಮಳಗಾಳು ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಕುಟುಂಬದ ಮೇಲೆ ದುಷ್ಕರ್ಮಿಗಳು ಹಲ್ಲೆ ನೆಡೆಸಿ, ಅನೀಶ ಎಂಬ ಯುವಕನ ಎಡಗೈ ಕತ್ತರಿಸಿದ್ದಾರೆ, ಅಲ್ಲದೇ ಲಕ್ಷ್ಮಣ ಎಂಬ ಸರ್ಕಾರಿ ನೌಕರನನ್ನು ಹಲ್ಲೆ ಮಾಡಿ ತಲೆ ಭುಜಕ್ಕೆ ಮಚ್ಚಿನಿಂದ ಹಲ್ಲೆ ನಡೆಸಿ ಹಲವು ಮಹಿಳೆಯರ ಮೇಲೆ ಹಲ್ಲೆ ಮಾಡಿದ್ದಾರೆ. ಹೀಗಿರುವಾಗ ಇಂಥ ಅಸಮರ್ಥ ಕಾಂಗ್ರೇಸ್ ಸರ್ಕಾರದಿಂದ ದಲಿತರ ರಕ್ಷಣೆ ಸಾಧ್ಯವೇ? ರಕ್ಷಣೆ ಇರಲಿ... ಬೇಲಿಯೇ ಎದ್ದು ಹೊಲ ಮೇಯ್ದಂತೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೈಸೂರಿನ ವಿಜಯನಗರ ಎಂಬ ಪ್ರತಿಷ್ಠಿತ ಬಡಾವಣೆಯಲ್ಲಿ ತನ್ನ ಶ್ರೀಮತಿಯವರ ಹೆಸರಿನಲ್ಲಿ ಹದಿನಾಲ್ಕು ಸೈಟ್ ಗಳನ್ನು ಮೂಡದಿಂದ ಪಡೆಯಲು ನಿಂಗ ಎಂಬ ಪರಿಶಿಷ್ಟ ಜಾತಿಯ ಕುಟುಂಬಕ್ಕೆ ಮಂಕುಬೂದಿ ಎರಚಿ ಅವರ ಮಕ್ಕಳಿಗೆ ವಂಚಿಸಿ ಜಮೀನು ನುಂಗಿದ್ದಾರೆ. ಈ ಹಗರಣದಲ್ಲಿ ಮೊಸರು ತಿಂದ ಕೋತಿ ನಾನಲ್ಲಾ ಅಧಿಕಾರಿಗಳು ಮತ್ತು ಬಿಜೆಪಿ ಎಂಬ ಮೇಕೆಯನ್ನು ತೋರಿಸುತ್ತಿದ್ದಾರೆ. ಇಂಥ ಮುಖ್ಯಮಂತ್ರಿಯಿಂದ ದಲಿತರಿಗೆ ಭೂನ್ಯಾಯ ಸಿಗುವುದೇ...? ಸಾಧ್ಯವೇ ಇಲ್ಲಾ...

ಇವೆಲ್ಲಾ ಸಮಸ್ಯೆಗಳಿದ್ದರೂ ಗೂಟದ ಕಾರುಗಳಿಂದಿಳಿಯದ ಮಂತ್ರಿಗಳಿಗೆ ತಮ್ಮ ಗೇಟಿನ ಬಳಿ ಹಲ್ಲು ಕಿಸಿಯುತ್ತಾ ನಿಲ್ಲುವವರಷ್ಟೇ ಸಮುದಾಯ ಎಂದು ಭಾವಿಸಿದಂತಿದೆ. ಇಂಥವರಿಂದ ಸಮುದಾಯದ ಏಳ್ಗೆಯನ್ನು ನಿರೀಕ್ಷಿಸುದಾದರೂ ಹೇಗೆ ಸಾಧ್ಯ...? ಇಂತಹ ಸಚಿವರುಗಳಿಂದ ನನ್ನ ಸಮುದಾಯಕ್ಕೆ ಮುಕ್ತಿ ಎಂದು? ಈ ಅಮೃತ ಕಾಲದಲ್ಲೂ ರಾಜ್ಯ ಸರ್ಕಾರದಿಂದ ನನ್ನ ಸಮುದಾಯಕ್ಕೆ ವಿಷವೇ? 75 ವರ್ಷಗಳು ಕಳೆದವು ಇನ್ನು ಎಷ್ಟು ವರ್ಷಗಳು ಬೇಕು ನನ್ನ ಸಮುದಾಯ ಸಬಲವಾಗಲು?



# 25ನೇ ಕಾರ್ಗಿಲ್ ವಿಜಯೋತ್ಸವ

## ಬಿಜೆಪಿ ಯುವ ಮೋರ್ಚಾ ವತಿಯಿಂದ

## ಪಂಜಿನ ಮೆರವಣಿಗೆ ಹಾಗೂ ಯೋಧರಿಗೆ ಸನ್ಮಾನ

ಬಿಜೆಪಿ ಯುವ ಮೋರ್ಚಾ ವತಿಯಿಂದ 25ನೇ ಕಾರ್ಗಿಲ್ ವಿಜಯೋತ್ಸವ ದಿನವನ್ನು ರಾಜ್ಯಾದ್ಯಂತ ಎಲ್ಲ ಸಂಘಟನಾತ್ಮಕ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ವೀರ ಕಾರ್ಗಿಲ್ ಯೋಧರಿಗೆ ಹಾಗೂ ಪಂಜಿನ ಮೆರವಣಿಗೆಯನ್ನು ಆಯೋಜಿಸಿದ್ದು ವಿಶೇಷವಾಗಿತ್ತು.

**ಬೆಂಗಳೂರು :** 25ನೇ ಕಾರ್ಗಿಲ್ ವಿಜಯೋತ್ಸವ ದಿನದ ಅಂಗವಾಗಿ ರಾಜ್ಯ ಬಿಜೆಪಿ ಕಾರ್ಯಾಲಯದ ಆವರಣದಲ್ಲಿ ಬೆಂಗಳೂರು ಬಿಜೆಪಿ ಯುವ ಮೋರ್ಚಾ ವತಿಯಿಂದ ವೀರ ಕಾರ್ಗಿಲ್ ಯೋಧರಿಗೆ ಸನ್ಮಾನ ಹಾಗೂ ದೇಶ ಭಕ್ತಿಯ ಪಂಜಿನ ಮೆರವಣಿಗೆಯನ್ನು ಆಯೋಜಿಸಲಾಗಿತ್ತು.



ಈ ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಯುವ ಮೋರ್ಚಾ ಪ್ರಭಾರಿಗಳಾದ ಶ್ರಿ ನಂದೀಶ್ ರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೀತಂ ಗೌಡ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್, ರಾಜ್ಯ ಕಾರ್ಯದರ್ಶಿ ಶ್ರೀ ತಮ್ಮೇಶ್ ಗೌಡ, ಶ್ರೀ ಶರಣು ತಳ್ಳಿಕೆರೆ, ಯುವ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಧೀರಜ್ ಮುನಿರಾಜು, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಶ್ರೀ ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷರಾದ ಶ್ರೀ ಸಪ್ತಗಿರಿಗೌಡ, ರಾಜ್ಯ ಯುವ ಮೋರ್ಚಾ ಕಾರ್ಯದರ್ಶಿ ಶ್ರೀ ದೀಪಕ್ ಕುಮಾರ್, ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ಶ್ರೀ ಮಾಲತೇಶಗೌಡ ಸಿಗಾಸೆ, ಬಿಜೆಪಿ ರಾಜ್ಯ ಯುವ ಮೋರ್ಚಾ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಗುರುನಾಥ ಶೇರಿಕಾರ, ಬೆಂಗಳೂರು ಕೇಂದ್ರ, ಉತ್ತರ ಮತ್ತು ದಕ್ಷಿಣ ಜಿಲ್ಲೆಗಳ ಯುವ ಮೋರ್ಚಾ ಜಿಲ್ಲಾಧ್ಯಕ್ಷರು ಮತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಮೈಸೂರು ನಗರ :** 25ನೇ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ನಿವೃತ್ತ ಯೋಧರಿಗೆ



ಸನ್ಮಾನಿಸಲಾಯಿತು. ವೀರ ಯೋಧರ ನೆನಪಿಗಾಗಿ ಕಾರ್ಯಪ್ಪ ವೃತ್ತದಿಂದ ಶಿವರಾಮ ಪೇಟೆಯ ಮೂಲಕ ನೂರಾರು ಜನರೊಂದಿಗೆ ಪಂಜಿನ ಮೆರವಣಿಗೆ ಮೂಲಕ ಗೌರವ ಸಮರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಎಲ್. ನಾಗೇಂದ್ರ, ಅಲ್ಪ ಸಂಖ್ಯಾತ ಮೋರ್ಚಾದ ರಾಜ್ಯಾಧ್ಯಕ್ಷರಾದ ಡಾ. ಅನೀಲ್ ಥಾಮಸ್, ಶ್ರೀ ಗಿರಿಧರ್, ಶ್ರೀ ಜೋಗಿ ಮಂಜು, ಶ್ರೀ ರುದ್ರಮೂರ್ತಿ, ಶ್ರೀ ದಿನೇಶ್ ಗೌಡ, ಶ್ರೀ ಸಚಿನ್, ಶ್ರೀ ಲೋಹಿತ್, ಶ್ರೀ ಮಧು ಮೋಹನ್, ಶ್ರೀ ನವೀನ್‌ರಾಜ್, ಶ್ರೀ ಪ್ರಣಯ್ ಹಾಗೂ ಮಾಜಿ ಸೈನಿಕರು ಉಪಸ್ಥಿತರಿದ್ದರು.

**ತುಮಕೂರು :** ತುಮಕೂರು ಜಿಲ್ಲಾ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಬೃಹತ್ ಪಂಜಿನ ಮೆರವಣಿಗೆ ಹಾಗೂ ಜಿಲ್ಲಾ ಬಿಜೆಪಿ ಕಚೇರಿ ಕಮಲಾಕೃಪದಲ್ಲಿ ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ತುಮಕೂರು ನಗರ ಶಾಸಕರಾದ ಶ್ರೀ ಜಿ.ಬಿ. ಜ್ಯೋತಿ ಗಣೇಶ್, ಜಿಲ್ಲಾ ಜಿಲ್ಲಾಧ್ಯಕ್ಷರಾದ ಶ್ರೀ ಹೆಬ್ಬಾಕ ರವಿ, ರಾಜ್ಯ ರೈತ ಮೋರ್ಚ ಉಪಾಧ್ಯಕ್ಷರಾದ ಶ್ರೀ ಬ್ಯಾಟರಂಗೆ ಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಸಂದೀಪ್, ನಗರ ಅಧ್ಯಕ್ಷರಾದ ಶ್ರೀ ಹನುಮಂತರಾಜು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಚಿಕ್ಕೋಡಿ :** ಬಿಜೆಪಿ ಯುವ ಮೋರ್ಚಾ ಚಿಕ್ಕೋಡಿ ಜಿಲ್ಲಾ ವತಿಯಿಂದ ಕಾರ್ಗಿಲ್ ವಿಜಯ ದಿವಸ ಪ್ರಯುಕ್ತವಾಗಿ ನಗರದ ಕೆ.ಸಿ. ರೋಡ್ ಚೆನ್ನಮ್ಮ ಪುತ್ತಳಿಯಿಂದ ಬಸ್ ನಿಲ್ದಾಣದ ಹತ್ತಿರ ಇರುವ ಯೋಧರ ಹುತಾತ್ಮ ಚೌಕದವರೆಗೆ ಪಂಜಿನ ಮೆರವಣಿಗೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಸತೀಶ್ ಅಪ್ಪಾಜಿ ಗೋಳ. ಚಿಕ್ಕೋಡಿ ಯುವ ಮೋರ್ಚಾ

ಜಿಲ್ಲಾಧ್ಯಕ್ಷರಾದ ಶ್ರೀ ರಮೇಶ ಕಾಳನ್ನವರ, ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ಶ್ರೀನತು ಶಾಂಭವಿ ಅಶ್ವತ್ ಪುರ, ಶ್ರೀ ದುಂಡಪ್ಪಣ್ಣಾ ಬೆಂಡವಾಡೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಶಿವಾನಂದ ನವಿನಾಳೆ, ಅಪ್ಪಸಾಹೇಬ್ ಚೌಗಲಾ, ರೈತ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ರಾಜು ಹರಗನ್ನವರ್, ಶ್ರೀ ರಾಜು ಹರಗನ್ನವರ್, ಶ್ರೀ ಬಸವರಾಜ ಹಾಲಳ್ಳಿ, ಶ್ರೀ ಸಂತೋಷ್ ಪಾಟೀಲ, ಶ್ರೀ ವಿಕಾಸ ಪಾಟೀಲ, ಶ್ರೀ ವೀರೇಂದ್ರ ಬ್ಯಾಕೋಡೆ, ಶ್ರೀ ರಾಮನಗೌಡ ಪಾಟೀಲ ಶ್ರೀ ಸಿದ್ದು ನರಟ್ಟಿ, ಶ್ರೀ ವಿಜಯ್ ಆಕಳೆ, ಪಕ್ಷದ ನಾಯಕರು ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

**ವಿಜಯನಗರ :** 25ನೇ ಕಾರ್ಗಿಲ್ ವಿಜಯೋತ್ಸವದ ಪ್ರಯುಕ್ತ ಹಡಗಲಿ ಮಂಡಲದಲ್ಲಿ ಸೈನಿಕರು ಹಾಗೂ ಅವರ ಪತ್ನಿಯರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಯುವ ಬ್ರಿಗೇಡ್ ಶ್ರೀ ಶರಣು ಪಾಟೀಲ್ ರವರು ಕಾರ್ಗಿಲ್ ಬೆಟ್ಟ ವಶಪಡಿಸಿಕೊಂಡ ರೋಚಕತೆಯ ಬಗ್ಗೆ ಮಾತನಾಡಿದರು.



ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕರು, ಜಿಲ್ಲಾ ಪದಾಧಿಕಾರಿಗಳು, ಯುವ ಮೋರ್ಚಾದ ಸದಸ್ಯರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

**ಚಿತ್ರದುರ್ಗ :** 25 ನೇ ವರ್ಷದ ಕಾರ್ಗಿಲ್ ವಿಜಯ ರಜತ ಮಹೋತ್ಸವ ಅಂಗವಾಗಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ 50 ಜನ ನಿವೃತ್ತ ಸೈನಿಕರಿಗೆ ಸನ್ಮಾನ ಮಾಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ, ಜಿಲ್ಲಾಧ್ಯಕ್ಷರಾದ ಶ್ರೀ ಎಂ. ಮುರಳಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಪಾಲಯ್ಯ, ರೈತ ಮೋರ್ಚ ರಾಜ್ಯ ಕಾರ್ಯದರ್ಶಿಯಾದ ಶ್ರೀ ಮಲ್ಲಿಕಾರ್ಜುನ್, ಶ್ರೀ ಸಂಪತ್ ಕುಮಾರ್, ಶ್ರೀ ಚಂದ್ರಶೇಖರ್ ವಿ.ಎಸ್. ಹಳ್ಳಿ, ಶ್ರೀ ಸಿರಿಗೆರೆ ಸಂದೀಪ್, ಶ್ರೀ ಆದರ್ಶ ನಾಗರಾಜ್ ಬೆಂದ್ರೆ ಹಾಗೂ ಮಾಜಿ ಸೈನಿಕ ಅಧ್ಯಕ್ಷರಾದ ಶ್ರೀ ನಾರಾಯಣ ರೆಡ್ಡಿ ಹಾಗೂ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

**ಕಲಬುರಗಿ ನಗರ :** 25ನೇ ವರ್ಷದ ಕಾರ್ಗಿಲ್ ವಿಜಯೋತ್ಸವ ದಿನದಂದು ಬಿಜೆಪಿ ಯುವ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ಪಂಜಿನ ಮೆರವಣಿಗೆಯು ನಗರದ ಶಹಬಜಾರ್‌ನಿಂದ ಆರಂಭಗೊಂಡು ಶಹಬಜಾರ್ ನಾಕಾದಲ್ಲಿ ಸಂಪನ್ನಗೊಂಡಿತು. ಈ




ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಚಂದು ಪಾಟೀಲ್, ಮಹಾನಗರ ಪಾಲಿಕೆ ಉಪ ಮೇಯರ್ ಶ್ರೀ ಶಿವಾನಂದ ಪಿಸ್ತಿ, ಹಿರಿಯ ಮುಖಂಡರಾದ ಶ್ರೀ ಸಿದ್ದಾಜಿ ಪಾಟೀಲ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಉಮೇಶ್ ಪಾಟೀಲ್, ಶ್ರೀ ಮಹದೇವ ಬೆಳಮಗಿ, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶಿವ ಅಷ್ಠಗಿ, ಶ್ರೀ ಪ್ರೀತಮ್ ಪಾಟೀಲ್, ಮುಖಂಡರಾದ ಶ್ರೀ ದಿಗಂಬರ್, ಶ್ರೀ ಅಂಬರೀಶ್ ಭೋವಿ, ಶ್ರೀ ಸೌರಭ್ ರಂಗದಾಳ್ ಸಚಿನ್ಬನ್ನಿ, ಶ್ರೀ ನಿಜಗುಣ ಯಲಗೋಡ್ ಸೇರಿದಂತೆ ನೂರಾರು ಯುವ ಮೋರ್ಚಾ ಕಾರ್ಯಕರ್ತರು ಉಪಸ್ಥಿತರಿದ್ದರು.

**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ಬಿಜೆಪಿ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ವಿಜಯ ಜ್ಯೋತಿ ರಥಯಾತ್ರೆಗೆ ಚಾಲನೆ ನೀಡಲಾಯಿತು. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿಯೂ ಸಹ ನೂರಾರು ಜನ ಯುವಕರು ಯಾತ್ರೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಸಂತೋಷ್ ಕೋಟ್ಯಾನ್ , ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಸಂದೀಪ್ ರವಿ, ರಾಜ್ಯ ಉಪಾಧ್ಯಕ್ಷರಾದ ಶ್ರೀ ಮಾಲತೇಶಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪುಣ್ಯಪಾಲ್, ಪ್ರಮುಖರಾದ ಶ್ರೀ ದೀಪಕ್ ದೊಡ್ಡಯ್ಯ, ಶ್ರೀ ಗಜೇಂದ್ರ, ಶ್ರೀ ಶರತ್ ನಿಲುವಾಗಿಲು, ಶ್ರೀ ಸಚಿನ್, ಶ್ರೀ ಪಂಚಾಕ್ಷರಿ, ಶ್ರೀ ರಾಘವೇಂದ್ರ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕೊಡಗು :** ಮಡಿಕೇರಿ – ಕೊಡಗು ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ನಿವೃತ್ತ ಯೋಧರಿಗೆ ಗೌರವ ಸಮರ್ಪಣ ಕಾರ್ಯಕ್ರಮವನ್ನು ಜನರಲ್ ತಿಮ್ಮಯ್ಯ ಸನ್ನಿಸೈಡ್ ಮ್ಯೂಸಿಯಂನಲ್ಲಿ ಹಮ್ಮಿಕೊಳ್ಳಲಾಗಿತ್ತು.



ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ರವಿಕಾಳಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮಹೇಶ್ ಜೈನಿ,ಜಿಲ್ಲಾ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿನೋದ್, ಶ್ರೀ ಪ್ರಸಾದ್ ಚಂಗಪ್ಪ, ಮಡಿಕೇರಿ ನಗರ ಯುವ ಮೋರ್ಚಾದ ಅಧ್ಯಕ್ಷರಾದ ಶ್ರೀ ಪಾಂಡಿರ ಪೂಣಚ್ಚ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮನು, ಶ್ರೀ ವಿಘ್ನೇಶ್, ಗ್ರಾಮಾಂತರ ಮಂಡಲ ಅಧ್ಯಕ್ಷರಾದ ಶ್ರೀ ಚೇತನ್ ಬಂಗೇರ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ದರ್ಶನ್, ಶ್ರೀ ಪ್ರವೀಣ್, ಒಬಿಸಿ ಮೋರ್ಚಾದ ಅಧ್ಯಕ್ಷರಾದ ಗಜೇಂದ್ರ, ಜಿಲ್ಲಾ ವಕ್ತಾರರಾದ ಶ್ರೀ ಅರುಣ್ ಕುಮಾರ್, ಮಡಿಕೇರಿ ನಗರ ಪ್ರಧಾನ ಕಾರ್ಯದರ್ಶಿ ಶ್ರೀ ಜಗದೀಶ್, ನಗರ ಸಭೆ ಸಮಿತಿ ಅಧ್ಯಕ್ಷರಾದ ಶ್ರೀ ಸತೀಶ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಅನಿತಪೂವಯ್ಯ, ರೈತಾ ಮೋರ್ಚಾ ಅಧ್ಯಕ್ಷ ಶ್ರೀ ನಯನ್ ಕುಮಾರ್, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ರೀಮತಿ ಸೌಮ್ಯ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಸಂಗೀತ, ಶ್ರೀಮತಿ ಸಬಿತ, ಶ್ರೀಮತಿ ಸವಿತಾ ರಾಕೇಶ್ ಕೀರ್ತಿ, ಶ್ರೀಮತಿ ವೈಭವಿ ಶ್ವೇತಾ ಪ್ರಶಾಂತ್, ಜಿಲ್ಲಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ರಾಯಚೂರು :** ರಾಯಚೂರು ಜಿಲ್ಲಾ ಯುವ ಮೋರ್ಚಾದ ವತಿಯಿಂದ 108, ಸಾವಿರ ದೇವರ ಖಿಲ್ಲೇರ್ ಬೃಹನ್ಮಠ ಸಂಸ್ಥಾನದಲ್ಲಿ ವಿಜಯ್ ದೀಪ ಕಾರ್ಯಕ್ರಮವನ್ನು ಭಾರತೀಯ ನಿವೃತ್ತ ಯೋಧರ ಸಮ್ಮುಖದಲ್ಲಿ ವಿಜಯ ದೀಪವನ್ನು ಬೆಳಗಿಸಲಾಯಿತು.



ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕರ ರೆಡ್ಡಿ ,ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಎನ್. ವಿನಾಯಕ ರಾವ್, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕಾರ್ತಿಕ ರೆಡ್ಡಿ , ಜಿಲ್ಲಾ ಯುವ ಮೋರ್ಚ ಕಾರ್ಯದರ್ಶಿ ಶ್ರೀ ಲಿಂಗ ರೆಡ್ಡಿ ಹೊಸೂರು, ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

**ಉತ್ತರಕನ್ನಡ :** ನಗರದ ಪಂಡಿತ್ ದೀನದಯಾಳ ಭವನದಲ್ಲಿ ಕಾರ್ಗಿಲ್ ವಿಜಯೋತ್ಸವದ 25ನೇ ರಜತ ಮಹೋತ್ಸವದ ಅಂಗವಾಗಿ ಕಾರ್ಗಿಲ್ ವಿಜಯ ಜ್ಯೋತಿಯನ್ನು ಯುವಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಪ್ರೇಮಕುಮಾರ ನಾಯ್ಕ ರವರ ನೇತೃತ್ವದಲ್ಲಿ ಪುಟ್ಟ ಬಾಲಕಿ ಕುಮಾರಿ ಸಂಧ್ಯಾ ಗಂಗಾಮತ ರವರಿಂದ ಜ್ಯೋತಿ ಬೆಳಗಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮೀಣ ಮಂಡಲ ಅಧ್ಯಕ್ಷರಾದ ಶ್ರೀಮತಿ ಉಷಾ ಹೆಗಡೆ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಶ್ರೀರಾಮು ನಾಯ್ಕ, ಜಿಲ್ಲಾ ಸಾಮಾಜಿಕ ಜಾಲತಾಣ ಸಂಚಾಲಕರಾದ ಶ್ರೀ ರವಿಚಂದ್ರ ಶೆಟ್ಟಿ, ಶಿರಸಿ ನಗರ ಯುವಮೋರ್ಚಾ ಅಧ್ಯಕ್ಷರಾದ ಶ್ರೀ ವಿಜಯ ಶೆಟ್ಟಿ, ಯುವಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂಜಯ ಸಜ್ಜನ, ಶ್ರೀ ಅಮಿತ ಸರ್ವದೆ, ಯುವಮೋರ್ಚಾ ಪದಾಧಿಕಾರಿಗಳಾದ ಶ್ರೀ ಡಿ.ಜಿ. ನಿತಿನ್, ಓಬಿಸಿ ಮೋರ್ಚಾ ಶಿರಸಿ ನಗರ ಅಧ್ಯಕ್ಷರಾದ ಶ್ರೀ ಆನಂದ ಗಾವಂಕರ, ಮಹಿಳಾ ಪ್ರಮುಖರಾದ ಶ್ರೀಮತಿ ಶಾರದಾ ಪೂಜಾರ್ ಹಾಗೂ ಕಾಲೇಜ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಮೈಸೂರು ಗ್ರಾಮಾಂತರ:** ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ವತಿಯಿಂದ ಯೋಧರಿಗೆ ಸನ್ಮಾನ ಮಾಡುವ ಮೂಲಕ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಶ್ರೀ ಸಾಮ್ರಾಟ್ ಸುಂದರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಕಿರಣ್ ರಾಮೇಗೌಡ, ಮಂಡಲ ಯುವ ಮೋರ್ಚಾ ಅಧ್ಯಕ್ಷ ಶ್ರೀ ಸ್ವಾಮಿ, ಮಹಿಳಾ ಮೋರ್ಚ ಜಿಲ್ಲಾಧ್ಯಕ್ಷೆ ಶ್ರೀಮತಿ ನಳಿನಿ, ಯುವ ಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾದ ಶ್ರೀ ಅನೀಲ್, ಪಕ್ಷದ ಹಿರಿಯ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಹಾಸನ:** ಜಿಲ್ಲಾ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ವಿಜಯೋತ್ಸದ ಪ್ರಯುಕ್ತ ಪಂಜಿನ ಮೆರವಣಿಗೆ ಹಾಗೂ ಸಭಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ನಿವೃತ್ತ ಸೈನಿಕ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟೇಶ್, ಪ್ರಮುಖ ಭಾಷಣಕಾರರಾಗಿ ಕು. ಹಾರಿಕಾ ಮಂಜುನಾಥ್ ಆಗಮಿಸಿದ್ದರು. ಈ ಸಂದರ್ಭದಲ್ಲಿ ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂದೀಪ್ ರವಿ, ಜಿಲ್ಲಾ ಅಧ್ಯಕ್ಷರಾದ ಶ್ರೀ ಸಿದ್ದೇಶ್ ನಾಗೇಂದ್ರ, ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



**ಗದಗ :** ಜಿಲ್ಲಾ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ವಿಜಯೋತ್ಸದ ಅಂಗವಾಗಿ ನರೇಗಲ್ ಪಟ್ಟಣದ ಹಳೆ ಬಸ್ ನಿಲ್ದಾಣದಿಂದ ಹೊಸ ಬಸ್ ನಿಲ್ದಾಣದ ಹತ್ತಿರದ ಆಂಜನೇಯ ದೇವಸ್ಥಾನದ ವರಗೆ ಪಂಜಿನ ಮೆರವಣಿಗೆ ಹಾಗೂ ಮಾಜಿ ಯೋಧರಿಗೆ ಸನ್ಮಾನ ಸಭಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಶ್ರೀ ಶಶಿಧರ ಸಂಕನಗೌಡ್ರು,

ಶ್ರೀ ಉಮೇಶ ಚನ್ನು ಪಾಟೀಲ, ಶ್ರೀ ಬಸವರಾಜ್ ಕೊಟಗಿ, ಮಾಜಿ ಸೈನಿಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕೊಪ್ಪಳ :** 25ನೇ ಕಾರ್ಗಿಲ್ ವಿಜಯೋತ್ಸವದ ಪ್ರಯುಕ್ತ ನಾಲ್ಕು ಜನ ಕಾರ್ಗಿಲ್ ಯುದ್ಧದ ಸೇನಾನಿಗಳು, ಹುತಾತ್ಮ ಯೋಧರ ಧರ್ಮಪತ್ನಿಗೆ ಸನ್ಮಾನ, ಪಂಜಿನ ಮೆರವಣಿಗೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.



ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಶ್ರೀ ನವೀನ್ ಗುಳಗಣ್ಣವರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾದ ಶ್ರೀ ಮೌನೇಶ್ ದಡೆಸುಗುರು, ಪ್ರಮುಖರಾದ ಶ್ರೀ ಚಂದ್ರಶೇಖರ ಹಲಗೇರಿ, ಡಾ. ಬಸವರಾಜ ಕ್ಯಾವಟರ್, ಜಿಲ್ಲಾ ನಿವೃತ್ತ ಸೈನಿಕರ ಸಂಘದ ಅಧ್ಯಕ್ಷರು ಹಾಗೂ ಕಾರ್ಗಿಲ್ ಸೇನಾನಿ ಶ್ರೀ ವಾಸಣ್ಣ ಚಲ್ಲಾ, ಶ್ರೀ ಯಮನೂರು ಚೌಡಕಿ, ಶ್ರೀಮತಿ ಮಹಾಲಕ್ಷ್ಮಿ ಕಂದಾರಿ ಶ್ರೀಮತಿ ರತ್ನಕುಮಾರಿ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಮಧುಗಿರಿ :** ಜಿಲ್ಲಾ ಯುವ ಮೋರ್ಚಾ ವತಿಯಿಂದ ಕೊರಟಗೆರೆ ಮಂಡಲದಲ್ಲಿ 25ನೇ ವರ್ಷದ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ, ತಾಯಿ ಭಾರತಿಯ ರಕ್ಷಣೆಗಾಗಿ ಯುದ್ಧದಲ್ಲಿ ಹುತಾತ್ಮರಾದ ವೀರ ಯೋಧರ ಗೌರವಾರ್ಥವಾಗಿ ಬೃಹತ್ ಪಂಜಿನ ಮೆರವಣಿಗೆಯ ಮೂಲಕ ವೀರ ಯೋಧರಿಗೆ ಗೌರವ ಸಮರ್ಪಣೆಯೊಂದಿಗೆ ನಿವೃತ್ತ ಯೋಧರಿಗೆ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರೂ ನಿವೃತ್ತ ಐಎಎಸ್ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್, ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷಾರದ ಶ್ರೀ ಶಿವಕುಮಾರ್ ಸ್ವಾಮಿ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಎಸ್.ಆರ್. ಶ್ರೀ ಮಧು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ರುದ್ರೇಶ್, ಯುವ ಮೋರ್ಚಾ ಜಿಲ್ಲಾ ಪ್ರಭಾರಿಗಳಾದ ಶ್ರೀ ಅರುಣ್,ಜಿಲ್ಲಾ ಪದಾಧಿ ಕಾರಿಗಳಾದ ಶ್ರೀ ಪಿ.ಎಲ್. ಮೂರ್ತಿ, ಶ್ರೀ ಪವನ್ ಕುಮಾರ್, ಶ್ರೀಮತಿ ಉಮಾವಿಜಯ್ ರಾಜ್,ಮಂಡಲ ಅಧ್ಯಕ್ಷರಾದ ಶ್ರೀ ದರ್ಶನ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ದಕ್ಷಿಣ ಕನ್ನಡ :** ಬಿಜೆಪಿ ಯುವ ಮೋರ್ಚಾ ಸುಳ್ಯ ಮಂಡಲದ ವತಿಯಿಂದ ಕಾರ್ಗಿಲ್ ವಿಜಯ್ ದಿವಸ್ ಹಾಗೂ ಪ್ರವೀಣ್ ನೆಟ್ಟಾರ್ ಸ್ಮೃತಿ ದಿನ ಪ್ರಯುಕ್ತ ರಕ್ತ ದಾನ ಶಿಬಿರ ಹಾಗೂ ಸಸಿ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತು. ಜಿಲ್ಲಾಧ್ಯಕ್ಷರಾದ ಶ್ರೀ ಸತೀಶ್ ಕುಂಪಲ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾದ ಶ್ರೀ ನಂದನ್ ಮಲ್ಯ, ಮಂಡಲ ಅಧ್ಯಕ್ಷರಾದ ಶ್ರೀ ವೆಂಕಟ್ ವಳಲಂಬೆ ಹಾಗೂ ಕಾರ್ಯಕರ್ತರು ಭಾಗವಹಿಸಿದರು.



**ಕೋಲಾರ :** ಜಿಲ್ಲಾ ಬಿಜೆಪಿ ಯುವ ಮೋರ್ಚ ವತಿಯಿಂದ ನಡೆದ ಕಾರ್ಗಿಲ್ ವಿಜಯೋತ್ಸವದ ನಿಮಿತ್ತ ಪಂಜಿನ ಮೆರವಣಿಗೆ ಹಾಗೂ ನಿವೃತ ಯೋಧರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಸೋಮಶೇಖರ್, ಜಿಲ್ಲಾಧ್ಯಕ್ಷರಾದ ಡಾ. ವೇಣುಗೋಪಾಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮಹೇಶ್ ಓಂ ಶಕ್ತಿ ಚಲಪತಿ , ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ತೇಜಸ್ ಹಾಗೂ ಕಾರ್ಯಕರ್ತರು ಭಾಗವಹಿಸಿದರು.

**ಬೆಳಗಾವಿ ಮಹಾನಗರ :** ಜಿಲ್ಲಾ ಯುವ ಮೋರ್ಚಾ ವತಿಯಿಂದ ನಗರದ ಚತ್ರೆವಾಡಾ ಕಾರ್ಯಾಲಯದಲ್ಲಿ 25 ವರ್ಷದ ಕಾರ್ಗಿಲ್ ವಿಜಯೋತ್ಸವದ ಪ್ರಯುಕ್ತ ವೀರ ಯೋಧರಿಗೆ ಸನ್ಮಾನ ಸಮಾರಂಭ ಆಯೋಜಿಸಲಾಗಿತ್ತು.



ಈ ಕಾರ್ಯಕ್ರಮದಲ್ಲಿ ಯುವ ಮೋರ್ಚಾ ಬೆಳಗಾವಿ ಮಹಾನಗರ ಜಿಲ್ಲಾಧ್ಯಕ್ಷರಾದ ಶ್ರೀ ಮಹಾದೇವ ಧರೆಣ್ಣವರ, ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀಮತಿ ಗೀತಾ ಸುತಾರ್, ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಅನೀಲ್ ಬೆನಕೆ, ನಗರದ ಪ್ರಭಾರಿಗಳಾದ ಶ್ರೀ ರಮೇಶ ದೇಶಪಾಂಡೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈರಯ್ಯ ಖೋತ್, ಶ್ರೀ ರಾಜಶೇಖರ ಡೋನಿ, ಶ್ರೀ ಗಣೇಶ ದೇಸಾಯಿ, ಮಾಜಿ ಸೈನಿಕರಾದ ಸುಭೇದಾರ್ ಸಿದ್ದಾಪ್ಪ ಕುಸನಗೌಡರ್, ಸುಭೇದಾರ್ ಬಸವರಾಜ ಜಿರಳೆ,ಸುಭೇದಾರ್ ಈರಪ್ಪ ಬಾಳಿಕಟ್ಟಿ, ಸುಭೇದಾರ್ ಬಸವಂತ್ತಪ್ಪ ಕರವಿ, ಹವಾಲ್ದಾರ್ ಸಂಜಯ್ ಗೌಡ, ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಹಾವೇರಿ :** 25ನೇ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಹಿರೇಕೆರೂರ ರಟ್ಟಿಹಳ್ಳಿ ಮಂಡಲದಲ್ಲಿ ಮಾಜಿ ಸೈನಿಕರಿಗೆ ಸನ್ಮಾನ

ಹಾಗೂ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾಜಿ ಸೈನಿಕರು, ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

**ವಿಜಯಪುರ :** ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಯುವ ಮೋರ್ಚಾ ವತಿಯಿಂದ ವಿಜಯಪುರದ ಸಿದ್ದೇಶ್ವರ ದೇವಸ್ಥಾನದಿಂದ ಹುತಾತ್ಮ ಸರ್ಕಲ್ ವರೆಗೆ ಪಂಜಿನ ಮೆರವಣಿಗೆಯೊಂದಿಗೆ ಹುತಾತ್ಮ ವೃತ್ತದಲ್ಲಿ ಕಾರ್ಯಕ್ರಮ ಉದ್ಘಾಟನೆಗೊಂಡಿತ್ತು. ಈ ಕಾರ್ಯಕ್ರಮದ ಸಾನಿಧ್ಯವನ್ನು ಅರುಡ ಆಶ್ರಮದ ಪರಮಪೂಜ್ಯ ಯೋಗೇಶ್ವರ್ ಮಾತಾಜಿ ರವರು ವಹಿಸಿದ್ದರು.




ಈ ಸಂದರ್ಭದಲ್ಲಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾದ ಶ್ರೀ ಬಸವರಾಜ ಹೂಗಾರ್, ಜಿಲ್ಲಾಧ್ಯಕ್ಷರಾದ ಶ್ರೀ ಆರ್.ಎಸ್. ಪಾಟೀಲ್, ಪತ್ರಕರ್ತರಾದ ಶ್ರೀ ಮಂಜುನಾಥ್ ಜನಗೊಂಡ, ಶ್ರೀ ಜಗನ್ನಾಥ್ ಪಾಂಡ್ರೆ, ಉತ್ತರ ಕರ್ನಾಟಕದ ಪ್ರತಿಭಾನ್ವಿತ ನಟ, ನಿರ್ದೇಶಕ ಯೂಟ್ಯೂಬರ್ ನಿಂಗರಾಜ್ ಸಿಂಗಾಡಿ, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಬೀದರ್ :** ಜಿಲ್ಲೆಯ ಬಿಜೆಪಿ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ವಿಜಯೋತ್ಸವ ನಿಮಿತ್ತ ಆಯೋಜಿಸಿದ್ದ ಪಂಜಿನ ಮೆರವಣಿಗೆ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಸೋಮನಾಥ್ ಪಾಟೀಲ್, ಬೀದರ್ ನಗರ ಅಧ್ಯಕ್ಷರಾದ ಶ್ರೀ ಶಶಿಧರ್ ಹೊಸಳ್ಳಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಸಂತೋಷ ರೆಡ್ಡಿ ಅಣದೂರ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವೀರೇಶ್ ಸ್ವಾಮಿ, ಪ್ರಧಾನ ಕಾರ್ಯದರ್ಶಿಗಳು, ಪಕ್ಷದ ಹಿರಿಯರು ಮುಖಂಡರು ಹಾಗೂ ಯುವ ಮೋರ್ಚ ಕಾರ್ಯಕರ್ತರು ಉಪಸ್ಥಿತರಿದ್ದರು.

**ದೊಡ್ಡಬಳ್ಳಾಪುರ :** ಭಾರತೀಯ ಜನತಾ ಪಾರ್ಟಿ ಯುವ ಮೋರ್ಚಾ ವತಿಯಿಂದ 25ನೇ ಕಾರ್ಗಿಲ್ ವಿಜಯ್ ದಿವಸ ಪ್ರಯುಕ್ತ ಪಂಜಿನ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.



ಈ ಸಂದರ್ಭದಲ್ಲಿ ನಗರ ಅಧ್ಯಕ್ಷರಾದ ಶ್ರೀ ಮುದ್ದಪ್ಪ, ಶ್ರೀ ನಾಗೇಶ್, ತಾಲೂಕಿನ ಅಧ್ಯಕ್ಷರು ಎಲ್ಲಾ ಸ್ತರದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಬಾಂಗ್ಲಾದೇಶದಲ್ಲಿ ಹಿಂದುಗಳ ಮೇಲಿನ ಕ್ರೌರ್ಯವನ್ನು ಖಂಡಿಸಿ ಪ್ರತಿಭಟನೆ




**ಕೊಡಗು :** ಮಡಿಕೇರಿ ನಗರ ಮಂಡಲ ಬಿಜೆಪಿ ಯುವ ಮೋರ್ಚಾ ವತಿಯಿಂದ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ರವಿ ಕಾಳಪ್ಪ, ಮಾಜಿ ಶಾಸಕರಾದ ಶ್ರೀ ಕೆ.ಜಿ. ಬೋಪ್ಪಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು, ಮಂಡಲಗಳ ಅಧ್ಯಕ್ಷರು, ಮಂಡಲ ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾ ಉಪಾಧ್ಯಕ್ಷರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

**ವಿರಾಜಪೇಟೆ ಮಂಡಲ :** ಬಾಂಗ್ಲಾದೇಶದಲ್ಲಿನ ಅನಾಗರೀಕ ಮತಾಂಧ ವ್ಯಕ್ತಿಗಳ ದುಷ್ಟಕೂಟವು ಹಿಂದೂಗಳ ಮೇಲೆ ನಡೆಸುತ್ತಿರುವ ಅಮಾನವೀಯ ಹಿಂಸಾತ್ಮಕ ಅಕ್ರಮಣದ ವಿರುದ್ಧ ಇಂದು ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ವಿರಾಜಪೇಟೆ ಮಂಡಲ ಪ್ರದಾನ ಕಾರ್ಯದರ್ಶಿ ಶ್ರೀ ಮಂಜು ಗಣಪತಿ, ಮಂಡಲ ರೈತ ಮೋರ್ಚಾ ಪ್ರದಾನ ಕಾರ್ಯದರ್ಶಿ ಶ್ರೀ ವಿನು ತೋರಿರಾ, ಪೋನ್ನಂಪೇಟೆ ಶಕ್ತಿ ಕೇಂದ್ರ, ಪ್ರಮುಖರಾದ ಶ್ರೀ ನೀಲನ್ ಮುಂದಣ್ಣ ಮಧು ಮೂಕೇಳೀರ, ರಾಜ್ಯ ರೈತ ಮೋರ್ಚಾ ಸದಸ್ಯರಾದ ಶ್ರೀಮತಿ ಯಮುನಾ ಚಂಗಪ್ಪ, ಗ್ರಾಮಪಂಚಾಯಿತಿ ಸದಸ್ಯರಾದ ಶ್ರೀ ರಾಮಕೃಷ್ಣ, ವಿಜಯ್ ಹಾಗೂ ವಿವಿಧ ಹಿಂದೂ ಪರ ಸಂಘಟನೆಗಳ ಪ್ರಮುಖರು ಹಾಗೂ ಪಕ್ಷದ ಹಿರಿಯ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸ್ಮರಣೆ - ಪ್ರೇರಣೆ



## ನಿಮಿತ್ತ ಮಾತ್ರಂ ಭವ ಎನ್ನುವುದು ಕೇವಲ tagline ಆಗದೇ, ಅದರಂತೆ ಬದುಕಿ ತೋರಿದವರು

# ಮಾನನೀಯ ನ. ಕೃಷ್ಣಪ್ಪ

ಸತೀಶ ಕೌಶಿಕ ಸೋಮೇಶ್ವರ ಭಟ್


ನಿಮಿತ್ತ ಮಾತ್ರಂ ಭವ ಇದು ಸ್ವರ್ಗೀಯ ಮಾನನೀಯ ನ. ಕೃಷ್ಣಪ್ಪನವರ letter head ಮೇಲಿರುತ್ತಿದ್ದ tagline ಅಂದರೆ **'ನಾನು ನಿಮಿತ್ತ ಮಾತ್ರ, ಉಳಿದದ್ದೆಲ್ಲವೂ ಅವನಿಚ್ಛೆಯಂತೆ'** ಎಂಬುದು ಇದರ ಹಿಂದಿರುವ ಅರ್ಥ. ಈ ರೀತಿಯ ಒಳ್ಳೆಯ, ಸುಂದರವಾದ ಮೌಲಿಕ ವಿಚಾರಗಳನ್ನು homepageನಲ್ಲಿ ಹಾಕಿಕೊಳ್ಳುವುದನ್ನು ಗಮನಿಸಿಯೇ ಇದ್ದೇವೆ. ಆದರೆ ಪ್ರಶ್ನೆ ಉದ್ಭವವಾಗುವುದು ನಾವು ನಮ್ಮ email, facebook, whatsappಗಳಲ್ಲಿ ಹಾಕಿಕೊಳ್ಳುವ taglineಗಳು ನಮ್ಮ ಜೀವನಕ್ಕೆ ಎಷ್ಟು ಹತ್ತಿರವಾಗಿದೆ ಎನ್ನುವುದು. ಅನೇಕರು ಹಾಕುವ status ಮತ್ತು ಅವರ ವ್ಯಕ್ತಿತ್ವವನ್ನು ಗಮನಿಸಿದಾಗ ತಾಳೆಯಾಗುವುದು ಕಷ್ಟ. ಇಂದಿನ ದಿನಗಳಲ್ಲಂತೂ ವ್ಯಾವಹಾರಿಕವಾಗಿ ನೂರಕ್ಕೆ ನೂರರಷ್ಟು ಅನುಸರಿಸುತ್ತೇವೆ ಎನ್ನುವುದೂ ಸುಲಭದ ಮಾತಲ್ಲ. ಆದರೆ, ನಂಬಿಕೆಗೆ ತಕ್ಕಂತೆ ಬದುಕುವವರು ವಿರಳವಾದರೂ, ಕೆಲವರಾದರೂ ಇದ್ದರು, ಇಂದಿಗೂ ಇದ್ದಾರೆ ಎನ್ನುವುದು ಸಂತೋಷದ ಸಂಗತಿ.

ಹಾಗೆಯೇ ನಾನು ಕಂಡ ಮಹಾನ್ ವ್ಯಕ್ತಿ – 6 ದಶಕಗಳ ಕಾಲ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ, ಸಂಸ್ಕೃತ ಭಾರತಿ, ಗುರುಕುಲ, ಕುಟುಂಬ ಪ್ರಬೋಧನ, ದಿಶಾ ಭಾರತ್ ಮುಂತಾದ ಹತ್ತು ಹಲವು ಆಯಾಮಗಳ ಹುಟ್ಟಿಗೆ ಕಾರಣರಾದ ಸ್ವರ್ಗೀಯ ಮಾನ್ಯ ನ. ಕೃಷ್ಣಪ್ಪನವರು. ನಿಮಿತ್ತ ಮಾತ್ರಂ ಭವ ಎನ್ನುವುದು ಕೇವಲ tagline ಆಗದೇ, ಅದರಂತೆ ಬದುಕಿ ತೋರಿದವರು ಕೃಷ್ಣಪ್ಪನವರು.

ಅವರು ಕಾಲವಾದ ನಂತರ ಅವರ ಜೀವನ ಕುರಿತು ಪುಸ್ತಕವನ್ನು ಹೊರತರಬೇಕೆಂಬ ಯೋಜನೆ ಸಿದ್ಧವಾದಾಗ, ಅನೇಕರನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸುತ್ತಿದ್ದೆವು. ಹಾಗೆಯೇ ಬೆಂಗಳೂರಿನ ವಕೀಲರು ಶ್ರೀ ಹೆಚ್.ಎಸ್. ಶ್ರೀನಿವಾಸಮೂರ್ತಿಯವರನ್ನು ಭೇಟಿಯಾದ ಸಂದರ್ಭದಲ್ಲಿ ಅವರು ನೀಡಿದ ಮಾಹಿತಿಯಿಂದ ಗ್ರಂಥ ಕರ್ತೃ ಶ್ರೀ ಚಂದ್ರಶೇಖರ ಭಂಡಾರಿ ಅವರಿಗೂ ಅಚ್ಚರಿ ಕಾದಿತ್ತು. 1981ರಲ್ಲಿ ರಾಷ್ಟ್ರೋತ್ಥಾನ ಹೊರತಂದ ಭಾರತ ಭಾರತಿ ಪುಸ್ತಕಕ್ಕೆ ಲೇಖನಗಳನ್ನು ಬರೆಯಬೇಕೆಂದಾಗ, ಕೃಷ್ಣಪ್ಪನವರಿಗೂ ಕೆಲ ಪುಸ್ತಕಗಳನ್ನು ಬರೆಯುವಂತೆ ಸೂಚನೆ ಹೋಯ್ತು.

ಅದರಂತೆ ಶ್ರೀಕೃಷ್ಣನ ಕುರಿತು ಪುಸ್ತಕವನ್ನೂ ಬರೆದು, ಒಮ್ಮೆ ಪರಿಶೀಲಿಸುವಂತೆ ಶ್ರೀನಿವಾಸಮೂರ್ತಿಯವರಿಗೆ ನೀಡಿದರು. ಅದು ಮುದ್ರಣವೂ ಆಯ್ತು. ಆದರೆ ಪುಸ್ತಕ ಹೊರಬಂದಾಗ ಲೇಖಕರ ಹೆಸರು ಶ್ರೀಮೂರ್ತಿ ಎಂದು ಅಚ್ಚಾಗಿತ್ತು. ಬರೆದದ್ದು ನೀವು, ನನ್ನ ಹೆಸರೇಕೆ ಹಾಕಿದ್ದಾರೆ ಎಂದು ಶ್ರೀನಿವಾಸಮೂರ್ತಿ ಕೇಳಿದಾಗ – ನೀನೇ ಅಲ್ಲವೇನಯ್ಯ ಬರೆದಿದ್ದು ಎಂದರಂತೆ. (ಹೀಗೆಯೇ ಇನ್ನೆಷ್ಟು ಪುಸ್ತಕಗಳನ್ನು ಬರೆದಿದ್ದರೋ ತಿಳಿಯದು) ಬೇರೆಯವರ ಕೃತಿಗಳನ್ನು ತಮ್ಮ ಹೆಸರಿನಲ್ಲಿ ಮುದ್ರಿಸಿಕೊಳ್ಳುವ ಮಹಾನುಭಾವರಿರುವಾಗ ಇಂತಹ ವ್ಯಕ್ತಿಗಳ ನಡವಳಿಕೆ ವಿಚಿತ್ರವೆನಿಸುವುದಿಲ್ಲವೇ? ಆದರೆ ಇದೇ ಸತ್ಯ.

ಅದಕ್ಕೆ ಪುಷ್ಟಿ ಕೊಡುವಂತೆ ಈಗ್ಗೆ 2–3 ವರ್ಷಗಳ ಹಿಂದೆ ಮಿತ್ರ, ರಾಷ್ಟ್ರೋತ್ಥಾನ ಸಾಹಿತ್ಯಗಳ ಸಂಪಾದಕ ಶ್ರೀ ವಿಘ್ನೇಶ್ವರ ಭಟ್ ಅವರು



ಪತ್ರವೊಂದನ್ನು ಕಳಿಸಿದರು ಅದು ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಮುಖರಾಗಿದ್ದ ಸ್ವ. ಮಾ. ಜಯದೇವರಿಗೆ ಕೃಷ್ಣಪ್ಪನವರು ಬರೆದಿದ್ದ ಪತ್ರ. ಆ ಪತ್ರದಲ್ಲಿ ಮಾಡಿರುವ ವಿನಂತಿಯೆಂದರೆ ಭಾರತ ಭಾರತಿ ಪುಸ್ತಕಗಳ ಲೋಕಾರ್ಪಣೆ ಸಂದರ್ಭದಲ್ಲಿ, ಯಾವುದೇ ಕಾರಣಕ್ಕೂ ನನ್ನನ್ನು ಲೇಖಕನೆಂದು ಪರಿಚಯಿಸುವುದಾಗಲೀ, ಬರೆಯುವುದಾಗಲಿ ಮಾಡುವುದು ಬೇಡ ಎಂದು ವಿನಮ್ರವಾಗಿ ಪ್ರಾರ್ಥಿಸಿದ್ದಾರೆ.

ಅದೇ ರೀತಿ ಮತ್ತೊಂದು ಅಚ್ಚರಿಯ ಸಂಗತಿಯೆಂದರೆ ಕೃಷ್ಣಪ್ಪನವರ ಕುರಿತ ಪುಸ್ತಕ ನಿರ್ಮಾಲ್ಯದ ಗ್ರಂಥ ಕರ್ತೃ ಶ್ರೀ ಚಂದ್ರಶೇಖರ ಭಂಡಾರಿಯವರೂ ಕೃಷ್ಣಪ್ಪನವರೊಟ್ಟಿಗೆ ಸರಿಸುಮಾರು 55-56 ವರ್ಷಗಳ ಕಾಲ ಕೆಲಸ ಮಾಡಿದ್ದವರು. ಆದರೆ ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆಗಳಿಸಿರುವ ಸಂಸ್ಕೃತ ಭಾರತಿಯ ಆರಂಭಕ್ಕೆ ಕಾರಣರಾದವರು ಕೃಷ್ಣಪ್ಪನವರೇ; ಎಂಬ ವಿಚಾರ ಚಂದ್ರು ಅವರಿಗೂ ತಿಳಿಯದಿದ್ದದ್ದು! ಸ್ವ. ಮಾ. ಯಾದವರಾವ್ ಜೀ ಅವರ ಕುರಿತು ಚಂದ್ರು ಅವರೇ ರಚಿಸಿರುವ ಜನಮನ ಶಿಲ್ಪಿ ಪುಸ್ತಕದಲ್ಲಿ, ಯಾದವರಾವ್ ಜೀ ಸಂಸ್ಕೃತ ಭಾರತಿಯನ್ನು ಆರಂಭಮಾಡಿಸಿದವರು ಎಂದು ಕೃಷ್ಣಪ್ಪನವರೇ ಹೇಳಿ ಬರೆಸಿದ್ದಾರೆ, ಈಗ ಅದರ ಶ್ರೇಯವನ್ನು ಕೃಷ್ಣಪ್ಪನವರಿಗೆ ಕೊಡುವುದು ಎಷ್ಟು ಸರಿ ಎನ್ನುವ ಜಿಜ್ಞಾಸೆ ಚಂದ್ರು ಅವರದ್ದು.

ಆದರೆ ಆರಂಭದ ದಿನಗಳಲ್ಲಿ ಸಂಸ್ಕೃತ ಭಾರತಿಯ ಕಾರ್ಯಕರ್ತರಾಗಿದ್ದು, ಪ್ರಸ್ತುತ ಯಡತೊರೆಯ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಪೀಠಾಧೀಶರಾಗಿರುವ ಪೂಜ್ಯ ಶ್ರೀ ಶ್ರೀ ಶಂಕರಭಾರತಿ ಸ್ವಾಮಿಗಳು ಖಚಿತ ಪಡಿಸಿ, ಅದನ್ನು ಸಂಸ್ಕೃತ ಭಾರತಿಯ ಅಧ್ವರ್ಯು ಶ್ರೀ ಚ.ಮು. ಕೃಷ್ಣಶಾಸ್ತ್ರೀಯವರು ಅನುಮೋದಿಸಿದ ನಂತರವಷ್ಟೇ ಅದು ಕೃಷ್ಣಪ್ಪನವರದೇ ಚಿಂತನೆ ಎಂಬುದು ಚಂದ್ರು ಅವರ ಗಮನಕ್ಕೂ ಬಂದದ್ದು!

ನನ್ನ ಸ್ವಂತ ಅನುಭವವೆಂದರೆ, 2010ರಲ್ಲಿ ಕುಟುಂಬ ಪ್ರಬೋಧನ ಹೊರತಂದ ಮನೆಯೇ ಮಾಂಗಲ್ಯ ಪುಸ್ತಕಕ್ಕಾಗಿ ಶೇ. 80ರಷ್ಟು ಕೆಲಸ ಮಾಡಿದ್ದು ಕೃಷ್ಣಪ್ಪನವರು ಆದರೆ ಪುಸ್ತಕ ಮುದ್ರಣಕ್ಕೆ ಸಿದ್ಧವಾದಾಗ, ಇದರಲ್ಲಿ ನನ್ನ, ನಿನ್ನ ಇಬ್ಬರ ಹೆಸರೂ ಇರುವುದಿಲ್ಲ ಎಂದರು. ಆ ಗ್ರಂಥ ರಚನೆಯಲ್ಲಿ ನನ್ನದು ಕಿಂಚಿತ್ ಪಾತ್ರವೂ ಇರಲಿಲ್ಲ. ಆದರೆ ಕೃಷ್ಣಪ್ಪನವರ ಹೆಸರನ್ನು ಬಿಡಬೇಕೆಂದುದು ಒಪ್ಪಿಗೆಯಾಗಲಿಲ್ಲ. ಅವರೊಂದಿಗೆ ಸಲಿಗೆಯೂ ಇದ್ದುದರಿಂದ - ನಿಮ್ಮದೇ ಪುಸ್ತಕ ಇದು, ನಿಮ್ಮ ಹೆಸರು ಇರಬಾರದೆಂದರೆ ಅದು ಹೇಗೆ ಸಾಧ್ಯ ಎಂದೆ. ಅಲ್ಲಯ್ಯ ನಾನೊಬ್ಬ ಬ್ರಹ್ಮಚಾರಿ, ಸಾಂಸಾರಿಕ ಜೀವನದ ಬಗ್ಗೆ ನನಗೇನು ತಿಳಿದಿದೆ? ಯಾರಾದರೂ ಕುಟುಂಬದ ಬಗ್ಗೆ ಬರೆದಿದ್ದೀರಲ್ಲ, ನೀವೆಲ್ಲಿ ಕುಟುಂಬ ನಿರ್ವಹಣೆ ಮಾಡಿದ್ದೀರಿ, ಅದರ ಬಗ್ಗೆ ನಿಮಗೇನು ಗೊತ್ತು ಎಂದರೆ ಅವರಿಗೇನೆಂದು ಉತ್ತರಿಸಲಿ? ಎಂದು ಬಾಯಿ ಮುಚ್ಚಿಸಿದರು. ನಾನೂ ಸುಮ್ಮನಿರದೆ, ಹಾಗಾದರೆ ಕೋಟೆಮನೆ ರಾಮಚಂದ್ರ ಭಟ್ಟರೂ ಬ್ರಹ್ಮಚಾರಿಗಳು ಅವರ ಹೆಸರನ್ನೂ ತೆಗೆಯಬೇಕು ಎಂದೆ. ವಿದ್ವಾಂಸರೊಂದಿಗೆ ಸಾಧಾರಣ ವ್ಯಕ್ತಿಗಳನ್ನು ತುಲನೆ ಮಾಡ್ತಿಯಲ್ಲಪ್ಪ. ಅವರೊಬ್ಬ ವಿದ್ವಾಂಸರು.

ಈ ಸಂಗತಿಗಳು ಅನ್ವಯಿಸುವುದು ನಾನು, ನಿನ್ನಂತಹ ಸಾಧಾರಣ ವ್ಯಕ್ತಿಗಳಿಗೆ. ವಿದ್ವಾಂಸರ ಬಗ್ಗೆ ಹೀಗೆಲ್ಲ ಪ್ರಶ್ನೆ ಮಾಡುವುದು ನಮ್ಮ ಅಜ್ಞಾನವನ್ನು ತೋರಿಸುತ್ತದಷ್ಟೇ ಎಂದು ನನ್ನ ಅಜ್ಞಾನವನ್ನು ನೆನಪಿಸಿ ಸಂಪೂರ್ಣವಾಗಿ ಬಾಯಿ ಮುಚ್ಚಿಸಿದರು. ಇದು, ಕೃಷ್ಣಪ್ಪನವರ ವ್ಯಕ್ತಿತ್ವ. ಇಂತಹ ಮಾಹಾನುಭಾವರ ಸಾಂಗತ್ಯ, ನಿಷ್ಕಲ್ಮಶ ಪ್ರೀತಿ, ಸ್ನೇಹ, ಮಾರ್ಗದರ್ಶನ ಸುಮಾರು 10-15 ವರ್ಷಗಳ ಕಾಲ ನನ್ನಂತಹವನಿಗೂ ದೊರೆತದ್ದು ಜೀವನದ ಒಂದು ಸೌಭಾಗ್ಯವೇ ಸರಿ.

ಇಂದು ಕೃಷ್ಣಪ್ಪನವರ 9ನೇ ಪುಣ್ಯತಿಥಿ. 1932ನೇ ಇಸವಿಯ ಕೃಷ್ಣಾಷ್ಟಮಿಯ ದಿನದ ರೋಹಿಣಿ ನಕ್ಷತ್ರದಲ್ಲಿಯೇ ಜನಿಸಿ, ಶ್ರೀಕೃಷ್ಣನಂತೆಯೇ ಬಾಳಿ, ಬೆಳಗಿ, 2015ರ ಆಷಾಢ ಕೃಷ್ಣ ಏಕಾದಶಿಯಂದು ನಮ್ಮನ್ನಗಲಿದರು. ದೀಪ ನಂದಿದರೂ ತುಪ್ಪದ ಪರಿಮಳ ಉಳಿಯುವಂತೆ ಅನೇಕರ ಮನದಲ್ಲಿ ಶಾಶ್ವತವಾಗಿ ಉಳಿದು ಹೋದ ಪ್ರಾತಃಸ್ಮರಣೆಯ ವ್ಯಕ್ತಿ ಇವರು.

(ಫೇಸ್ ಬುಕ್ ಕೃಪೆ)

# ಮಾಸದ ಮಾಧುರ್ಯ 88ನೇ ಕಾರ್ಯಕ್ರಮ

# ಹಾಸ್ಯ ನಾಟಕ 'ಕುದುರೆ ಮೊಟ್ಟೆ'



**ಮಾ**ಸದ ಮಾಧುರ್ಯ ಕಾರ್ಯಕ್ರಮದ 88ನೇ ಸರಣಿಯಲ್ಲಿ ಜಗನ್ನಾಥ ಬಳಗದ ಸಹಯೋಗದೊಂದಿಗೆ ಯಶಸ್ವಿನಿ ಸಾಂಸ್ಕೃತಿಕ ಕಲಾ ಟ್ರಸ್ಟ್ (ರಿ), ಬೆಂಗಳೂರು ಮಹಿಳಾ ತಂಡದಿಂದ ಹಾಸ್ಯ ನಾಟಕ 'ಕುದುರೆ ಮೊಟ್ಟೆ' ಜಗನ್ನಾಥ ಭವನದ ಮಂಥನ ಸಭಾಂಗಣದಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

''ನಗುವನರಸಿ ಮನೆಗೆ ಬಂದೆ ನಿರಾಸೆಯಾಯಿತು! ಹೊರಗೆ ಬಂದೆ, ಮನೆಯೆದುರಿನ ಅಂಗಡಿಯ ಮುಂದೆ ಹಾಕಿದ್ದ ಹಾಸ್ಯ ನಾಟಕದ ಬೋರ್ಡ್ ಕಂಡೆ ನೇರ ಇಲ್ಲಿಗೆ ಬಂದೆ'' ಇದು ಇಂದಿನ ಎಲ್ಲರ ಮನೆಯ ವರ್ತಮಾನ. ಈ ಕಾರ್ಯಕ್ರಮದ ಕಲಾಭಿಮಾನಿಯ ಅನಿಸಿಕೆ. ಮಂಥನ ಸಭಾಂಗಣ ನಾಟಕ ವೀಕ್ಷಿಸಲು ಕಲಾಸಕ್ತರಿಂದ ತುಂಬಿತ್ತು. ನಾಟಕದ ಎಲ್ಲ ಪಾತ್ರಧಾರಿಗಳು ತಮಗೆ ಕೊಟ್ಟ ಪಾತ್ರಕ್ಕೆ ಜೀವ ತುಂಬಿದ್ದು ಶ್ಲಾಘನೀಯ. ದಿನನಿತ್ಯದ ನಮ್ಮ ಬದುಕಿನಲ್ಲಿ ಹಲವು ಹಾಸ್ಯ ಸನ್ನಿವೇಶಗಳನ್ನು ನಾವು ಕಾಣುತ್ತೇವೆ. ಅವುಗಳನ್ನೆಲ್ಲ ಕಲೆ ಹಾಕಿ ನುರಿತ ಕಲಾವಿದರ ಸಹಕಾರದಿಂದ ನಾಟಕ ಪ್ರದರ್ಶನ ಮಾಡಿದರೆ ಕಲಾಭಿಮಾನಿಗಳು ತಮಗೂ ಇಂಥಹ ಅನುಭವವಾಗಿದೆ ಎಂದು ಕಲಾವಿದರೊಂದಿಗೆ ಹಂಚಿಕೊಂಡು ಸಂತಸ ಪಡುವುದರಲ್ಲಿ ಎರೆಡು ಮಾತಿಲ್ಲ.

ಶ್ರೀಮತಿ ಬಿ.ಆರ್. ಕವಿತಾ ಶೆಟ್ಟಿಯವರ ನಿರ್ದೇಶನದಲ್ಲಿ ಪ್ರಯೋಗಗೊಂಡ 'ಕುದುರೆ ಮೊಟ್ಟೆ' ನಾಟಕವು ಯಶಸ್ವಿಯಾಗಿ ಸಂಪನ್ನಗೊಂಡಿತು. ಮುಖ್ಯ ಅತಿಥಿಯಾಗಿ ಬಿಜೆಪಿ ಹಾಲು ಉತ್ಪಾದಕರ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ಶ್ರೀ ಬೇಳೂರು ರಾಘವೇಂದ್ರ ಶೆಟ್ಟಿ ರವರು ಆಗಮಿಸಿದ್ದರು. ಎಲ್ಲಾ ಕಲಾವಿದರಿಗೂ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಲಾಯಿತು. ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಕಾರ್ಯಕ್ರಮದ ಸಂಯೋಜಕರಾದ ಶ್ರೀ ದತ್ತಗುರು ಹೆಗಡೆ ಹಾಗೂ ಕಾರ್ಯಾಲಯದ ಲೆಕ್ಕ ಪತ್ರ ವಿಭಾಗದ ಪ್ರಮುಖರಾದ ಶ್ರೀ ಮೂಡಲಗಿರಿ ರವರು ಉಪಸ್ಥಿತರಿದ್ದರು.




## ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳು – 2024–26

**ರಾ**ಜ್ಯ ಬಿಜೆಪಿ ಮಹಿಳಾ ಮೋರ್ಚಾದ 2024–26 ನೇ ಸಾಲಿನ ಪದಾಧಿಕಾರಿಗಳನ್ನು ನೇಮಕ ಮಾಡಿ ಆದೇಶ ಪತ್ರವನ್ನು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷರಾದ ಕು. ಸಿ. ಮಂಜುಳಾ ಅವರು ವಿತರಿಸಿದರು. ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷರಾಗಿ ಶ್ರೀಮತಿ ಚಂದಮ್ಮ ಪಾಟೀಲ್ ರೇವೂರ, ಶ್ರೀಮತಿ. ಶಾಂಭವಿ ಅಶ್ವತ್ಥ್ ಪುರ್, ಶ್ರೀಮತಿ ಕೆ.ಆರ್. ವಿಜಯಲಕ್ಷ್ಮಿ, ಕು.ಹೆಚ್.ಸಿ. ಜಯಮ್ಮ,ಡಾ.ವಿಜಯಲಕ್ಷ್ಮೀ ಬಾ. ತುಂಗಳ, ಡಾ. ಪ್ರಫುಲ್ಲ ಮಲ್ಲಾಡಿ, ಕಾರ್ಯದರ್ಶಿಗಳಾಗಿ ಶ್ರೀಮತಿ ಹೇಮ ತುಕಾರೆಡ್ಡಿ, ಡಾ. ಸೋನಾಲಿ ಸರ್ನೋಬತ್, ಕು. ಶ್ವೇತಾ ಪೂಜಾರಿ, ಶ್ರೀಮತಿ ನಿರ್ಮಲಮ್ಮ, ಕು. ಸುಗುಣ, ಕೋಶಾಧ್ಯಕ್ಷರಾಗಿ ಶ್ರೀಮತಿ ವಿಜಯಲಕ್ಷ್ಮಿ ಆನಂದ, ಕಾರ್ಯಾಲಯ ಕಾರ್ಯದರ್ಶಿಯಾಗಿ ಶ್ರೀಮತಿ ರಜನಿ ವಿ. ಪೈ, ಸಾಮಾಜಿಕ ಜಾಲತಾಣದ ಸಂಚಾಲಕರಾಗಿ ಶ್ರೀಮತಿ ಪ್ರತಿಮಾ ಸುಭಾಷ್ ಆಯ್ಕೆಯಾಗಿದ್ದಾರೆ.



# ಮನ್ ಕಿ ಬಾತ್

## ಖಾದಿ ಬೇಡಿಕೆ ಶೇ.400 ರಷ್ಟು ಹೆಚ್ಚಳ

## ಹರ್ ಘರ್ ತಿರಂಗ ಸೆಲ್ಫಿ ಕಳುಹಿಸಲು ಉತ್ತೇಜನ, ಹುಲಿ ಸಂರಕ್ಷಣೆ ಪ್ರಸ್ತಾಪ

**ಪ್ರ**ಧಾನಿ ಮೋದಿ ಅವರ ಅವರು ಈ ಬಾರಿಯ 112ನೇ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಖಾದಿ ಗ್ರಾಮೋದ್ಯೋಗ, ಕೈಮಗ್ಗ ವಸ್ತ್ರಗಳ ಬೇಡಿಕೆ ಹೆಚ್ಚುತ್ತಿರುವುದನ್ನು ಶ್ಲಾಘಿಸಿ ಖಾದಿ, ಕೈಮಗ್ಗ ಬಟ್ಟೆಗಳನ್ನು ಹೆಚ್ಚು ಖರೀದಿಸುವಂತೆ ದೇಶದ ಜನತೆಗೆ ಮೋದಿ ಕರೆ ನೀಡಿದರು. ಕಾರ್ಯಕ್ರಮದಲ್ಲಿ 'ಪರಿ' ಯೋಜನೆ, ಮಾದಕ ದ್ರವ್ಯ ನಿಗ್ರಹ, ಹುಲಿ ಸಂರಕ್ಷಣೆ, ಕೊಡಲಿ ನಿಷೇಧ ಪಂಚಾಯತ್ ಸೇರಿ ಹಲವು ವಿಚಾರಗಳನ್ನು ಪ್ರಸ್ತಾಪಿಸಿದರು. ಈ ಬಾರಿಯೂ ಹರ್ ಘರ್ ತಿರಂಗಾ ಮುಂದುವರೆಯಲಿ ಎಂದು ಹೇಳಿದರು. ಯುನೆಸ್ಕೊ ವಿಶ್ವ ಪರಂಪರೆ ತಾಣ ಪಟ್ಟಿಗೆ ಈಶಾನ್ಯ ರಾಜ್ಯಗಳ ಮೊದಲ ಪ್ರದೇಶ 700 ವರ್ಷಗಳ ಪುರಾತನ ಅಸ್ಸಾಂನ ಚರೈದೇಯು ಮೈದಾನ ಸೇರ್ಪಡೆ ಬಗ್ಗೆ ಮೋದಿ ಮಾಹಿತಿ ನೀಡಿ, ಜನತೆ ಈ ಪ್ರವಾಸಿ ತಾಣಕ್ಕೆ ಭೇಟಿ ನೀಡಿ ಎಂದು ಕರೆ ನೀಡಿದರು.

ಮಾದಕವಸ್ತು ವಿರುದ್ಧ ಹೋರಾಟಕ್ಕೆ ಕರೆ ಮಾದಕವಸ್ತುಗಳ ವಿರುದ್ಧ ಹೋರಾಡ ಬೇಕಾದ ಅಗತ್ಯ ಪ್ರಸ್ತಾಪಿಸಿದ ಪ್ರಧಾನಿ ಶ್ರೀ ಮೋದಿ, 'ಮಾನಸ್' ಕೇಂದ್ರದ ಮಾಹಿತಿ ನೀಡಿದರು '1933' ಸಂಖ್ಯೆಗೆ ಕರೆ ಮಾಡಿ ಡ್ರಗ್ಸ್ ವಿರುದ್ಧ ಹೋರಾಟದ ಕುರಿತಾದ ಮಾಹಿತಿ ಪಡೆಯಬಹುದು ಎಂದು ತಿಳಿಸಿ, ದೇಶ ಮಾದಕವಸ್ತು ಮುಕ್ತವಾಗಲು ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಹುಲಿಗಳು ಸಂಸ್ಕೃತಿಯ ಭಾಗವಾಗಿವೆ, ಹುಲಿ ಸಂರಕ್ಷಣೆ ಕಡೆ ಗಮನ ಹರಿಸಬೇಕು. ಜು.29ರಂದು ಹುಲಿ ದಿನಾಚರಣೆ ಹಾಗೂ ಅಮ್ಮನ ಹೆಸರಲ್ಲಿ ಒಂದು ಗಿಡ ಹೆಸರಲ್ಲಿ ಮಧ್ಯಪ್ರದೇಶದ ಇಂದೋರ್ ಸೇರಿ ಹಲವೆಡೆ ವಿವಿಧ ಕಾರ್ಯಕ್ರಮಗಳು ನಡೆಯುತ್ತಿರುವುದು ಖುಷಿ ತಂದಿದೆ ಎಂದು ಪ್ರಧಾನಿ ಶ್ರೀ ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ. ರಾಜಸ್ತಾನದ ರಣತಂಬೋರ್‌ನ ಜನ 'ಮರ ಕಡಿಯುವುದಿಲ್ಲ, ಕಾಡಿಗೆ ಕೊಡಲಿ ಹಿಡಿದು ಹೋಗುವುದಿಲ್ಲ' ಎಂಬ ಅಭಿಯಾನ ಆರಂಭಿಸಿದ್ದನ್ನು ಪ್ರಧಾನಿ ಶ್ರೀ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ಇದೇ ಮೊದಲ ಬಾರಿಗೆ ಖಾದಿ ಉದ್ಯಮ 1.5 ಲಕ್ಷ ಕೋ.ರೂ. ವಹಿವಾಟು ನಡೆಸಿದೆ. ಖಾದಿ ವಸ್ತ್ರಗಳಿಗೆ ಬೇಡಿಕೆ ಹೆಚ್ಚುತ್ತಿದೆ. ವಾರ್ಷಿಕ ಖಾದಿ ಮಾರಾಟದಲ್ಲಿ ಶೇ.400ರಷ್ಟು ಹೆಚ್ಚಳ ದಾಖಲಾಗಿದೆ ಎಂದು ಪ್ರಧಾನಿ ಹರ್ಷದಿಂದ ಮಾಹಿತಿ ಹಂಚಿಕೊಂಡರು. ಕೈಮಗ್ಗ ವಸ್ತುಗಳು ಭಾರತದ ಜನರ ಹೃದಯದಲ್ಲಿ ಸ್ಥಾನ ಪಡೆದುಕೊಂಡಿರುವುದು ಸಂತಸದ ವಿಚಾರ. ಖಾಸಗಿ ಕಂಪನಿಗಳು ಕೂಡ ಕೈಮಗ್ಗ ಬಟ್ಟೆಗಳಿಗೆ ಆದ್ಯತೆ ನೀಡುತ್ತಿವೆ. ಖಾದಿ ಮತ್ತು ಕೈಮಗ್ಗಕ್ಕೆ ಬೇಡಿಕೆ ಹೆಚ್ಚುತ್ತಿದ್ದಂತೆ ಈ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿ ಪ್ರಮಾಣವೂ ಹೆಚ್ಚಾಗಿದೆ. ವಿಶೇಷವಾಗಿ ಸಾಕಷ್ಟು ಹೆಣ್ಣುಮಕ್ಕಳು, ಮಹಿಳೆಯರು ಕೈಮಗ್ಗ ವಸ್ತು ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಪ್ರಧಾನಿ ವಿವರಿಸಿದರು.

ಹರಿಯಾಣದ ರೋಹ್ಟಕ್ ಜಿಲ್ಲೆಯ ಸಣ್ಣಪುಟ್ಟ ಮಳಿಗೆಗಳಲ್ಲಿ ಕೆಲಸ ಮಾಡುತ್ತಿದ್ದ 250ಕ್ಕೂ ಅಧಿಕ ಮಹಿಳೆಯರು ಉನ್ನತಿ ಸ್ವಸಹಾಯ ಸಂಘದ ಮೂಲಕ ಕೈಮಗ್ಗ ವಸ್ತ್ರ ತಯಾರಿಕೆ, ಬ್ಲಾಕ್ ಪ್ರಿಂಟಿಂಗ್, ದುಪ್ಪಟ್ಟ, ಬೆಡ್ ಶೀಟ್ ತಯಾರಿಕೆ ತರಬೇತಿ ಪಡೆದು ಬಳಿಕ ವಿವಿಧ ರೀತಿಯ ವಸ್ತ್ರಗಳ ತಯಾರಿಕೆಯಲ್ಲಿ ತೊಡಗಿದ್ದು, ಅದರಿಂದಲೇ ಇಂದು ಲಕ್ಷಾಂತರ ರೂಪಾಯಿ ಗಳಿಸುತ್ತಿದ್ದಾರೆ. ಈಗ ಕೈಮಗ್ಗ ವಸ್ತುಗಳಿಗೆ ಭಾರಿ ಬೇಡಿಕೆ ಇದೆ. ಒಡಿಶಾದ ಸಂಬಾಲ್‌ಪುರಿ ಸೀರೆ, ಮಧ್ಯಪ್ರದೇಶದ ಮಹೇಶ್ವರಿ ಸೀರೆ, ವಿದರ್ಭಾದ ಬ್ಲಾಕ್ ಪ್ರಿಂಟ್ ಸೀರೆ, ಹಿಮಾಚಲದ ಬುಟ್ಟಿಕೊ ಶಾಲು, ಜಮ್ಮು- ಕಾಶ್ಮೀರದ ಕಣಿ ಶಾಲುಗಳಿಗೂ ಬೇಡಿಕೆ ಹೆಚ್ಚಿದೆ. ಭಾರತದ ಜನತೆ ಸ್ಥಳೀಯ ಉತ್ಪನ್ನಗಳ ಬಗ್ಗೆ 'ಮೈ ಪ್ರೊಡಕ್ಟ್ ಮೈ ಪ್ರೈಡ್' ಹ್ಯಾಶ್‌ಟ್ಯಾಗ್ ಅಡಿ ಜಾಲತಾಣದಲ್ಲಿ ಮಾಹಿತಿ ಹಂಚಿಕೊಳ್ಳುವಂತೆ ಪ್ರಧಾನಿ ಕರೆ ನೀಡಿದರು. ಇದೇ ರೀತಿ 'ಪರಿ' (ಪಬ್ಲಿಕ್ ಆರ್ಟ್ ಆಫ್ ಇಂಡಿಯ) ಸಾರ್ವಜನಿಕ ಸ್ಥಳಗಳ ಸೌಂದರ್ಯ ಹೆಚ್ಚಿಸುವುದಲ್ಲದೇ ನಮ್ಮ ಸಂಸ್ಕೃತಿಯ ಖ್ಯಾತಿಯನ್ನು ಹೆಚ್ಚಿಸುತ್ತದೆ ಎಂದು ಶ್ಲಾಘಿಸಿದರು.

ಭಾರತದಿಂದ ಯುನೈಟೆಡ್ ಕಿಂಗ್‌ಡಮ್‌ನ ಬಾತ್ ವಿಶ್ವವಿದ್ಯಾಲಯದಲ್ಲಿ ಗಣಿತ ಒಲಿಂಪಿಯಾಡ್‌ನಲ್ಲಿ ಭಾಗವಹಿಸಿದ್ದ 6 ವಿದ್ಯಾರ್ಥಿಗಳ ತಂಡ 4ನೇ ಸ್ಥಾನ ಪಡೆದಿದೆ. ತಂಡ 4 ಚಿನ್ನ, ಒಂದು ಬೆಳ್ಳಿ ಪದಕ ಗೆದ್ದಿದೆ. 1989ರ ಬಳಿಕ ಭಾರತದ ಅತ್ಯುತ್ತಮ ಸಾಧನೆ ಇದಾಗಿದ್ದು, ಆದಿತ್ಯ ವೆಂಕಟ್, ಕನವ್ ತಲ್ವಾರ್, ರುಶಿಲ್ ಮಾಥುರ್, ಸಿದ್ಧಾರ್ಥ ಚೋಪ್ರಾ, ಅರ್ಜುನ್ ಗುಪ್ತಾ ಮತ್ತು ಆನಂದೊ ಭಾದುರಿ ಸಾಧನೆ ಭಾರತದ ಹೆಸರನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದೆ.

**– ಪ್ರಧಾನಿ ನರೇಂದ್ರ ಮೋದಿ**

# ಹರ್ ಘರ್ ತಿರಂಗಾ ಅಭಿಯಾನ



ಬೆಂಗಳೂರು



ಹುಬ್ಬಳ್ಳಿ - ಧಾರವಾಡ



ಉತ್ತರ ಕನ್ನಡ



ಶಿವಮೊಗ್ಗ



ಚಿಕ್ಕಮಗಳೂರು



ಮೈಸೂರು




ಗದಗ



ಹಾವೇರಿ



ಕಾಲೇ ವರ್ಷತು ಪರ್ಜನ್ಯಃ

# ರೈತನ ದೂರದೃಷ್ಟಿ - ಕಾರ್ಯಕರ್ತನ ನಿಷ್ಠೆ

**ಒ**ಮ್ಮೆ ಮೋಡಗಳೆಲ್ಲಾ ತಮ್ಮ ತಮ್ಮಲ್ಲೆ ಮಾತಾಡಿಕೊಂಡು ಇನ್ನು ಹತ್ತು ವರ್ಷ ಮಳೆಯನ್ನು ಸುರಿಸಬಾರದು ಎಂದು ನಿರ್ಧಾರ ಮಾಡಿ ಬಿಟ್ಟವು. ಈ ವಿಷಯವನ್ನು ರೈತರಿಗೂ ಸಹ ತಿಳಿಸುತ್ತಾ, ಇನ್ನು ಹತ್ತು ವರ್ಷ ನಾವು ಮಳೆ ಸುರಿಸುವುದಿಲ್ಲಾ, ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳಿ ಬಿಟ್ಟವು. ಆಗ ಹೊಲಗಳಲ್ಲಿದ್ದ ರೈತರೆಲ್ಲಾ ದನಗಳನ್ನು ಹೊಡೆದುಕೊಂಡು ಮನೆಗೆ ಬಂದು ನೇಗಿಲುಗಳನ್ನೆಲ್ಲಾ ಬದಿಗಿಟ್ಟು ಹಾಯಾಗಿ ಇದ್ದು ಬಿಟ್ಟರು.

ಆದರೆ ಒಬ್ಬ ರೈತ ಮಾತ್ರ ಹತಾಶನಾಗದೆ ಪ್ರತೀ ದಿನ ಜಮೀನಿನ ಹತ್ತಿರ ಹೋಗಿ ಏನಾದರೂ ಕೃಷಿ ಕೆಲಸ ಮಾಡುತ್ತಲೇ ಇದ್ದನು. ಇದನ್ನು ಗಮನಿಸಿದ ಮೋಡಗಳು ರೈತನ ಬಳಿ ಬಂದು ಕೇಳಿದವು. 'ನಾವು ಮಳೆ ಸುರಿಸುವುದಿಲ್ಲಾ ಎಂದು ಹೇಳಿದ್ದೇವೆ, ಇನ್ನೂ ಹೊಲಕ್ಕೆ ಏಕೆ ಬರುತ್ತಿದ್ದೀಯಾ, ಕೃಷಿ ಕೆಲಸ ಏಕೆ ಮಾಡುತ್ತಿದ್ದೀಯಾ?' ಎಂದವು. ಆಗ ರೈತ, 'ಆಯ್ತು, ನೀವು ಹತ್ತು ವರ್ಷದ ನಂತರವೇ ಮಳೆ ಸುರಿಸುವಿರಂತೆ, ಆದರೆ ನೀವು ಹತ್ತು ವರ್ಷದ ತನಕ ಮಳೆ ಸುರಿಸುವುದಿಲ್ಲವೆಂದು ನಾನು ಕೃಷಿ ಕೆಲಸ ಮಾಡುವುದನ್ನೇ ಬಿಟ್ಟರೆ, ನನಗೆ ಕೃಷಿ ಮಾಡುವುದೇ ಮರೆತು ಹೊಗಬಹುದು, ನಂತರ ನೀವು ಮಳೆ ಸುರಿಸಿದಾಗ ಅದರ ಲಾಭ ಪಡೆಯಲು ನನಗೆ ಆಗದೆ ಇರಬಹುದು, ಆದ್ದರಿಂದ ನಾನು ಕೃಷಿ ಕೆಲಸ ಮಾಡುವುದನ್ನು ನಿಲ್ಲಿಸುವುದೇ ಇಲ್ಲ' ಎಂದನು. ಆಗ ಮೋಡಗಳಿಗೂ ಯೋಚನೆ ಬಂತಂತೆ 'ಓ.. ನಾವು ಹತ್ತು ವರ್ಷ ಮಳೆ ಸುರಿಸದೇ ಇದ್ದರೆ ನಮಗೂ ನಮ್ಮ ಕಾರ್ಯ ಮರೆತೇ ಹೊಗಬಹುದು, ಅದಕ್ಕೆ ಮಳೆ ಸುರಿಸಿ ಬಿಡೋಣ' ಎಂದು ಮಳೆ ಸುರಿಸಿದವು. ರೈತನ ದೂರದೃಷ್ಟಿಯ ಚಿಂತನೆ, ಆ ನಿಟ್ಟಿನಲ್ಲಿ ಮಾಡಿದ ಪ್ರಯತ್ನ, ಭವಿಷ್ಯದ ಬಗ್ಗೆ ಇಟ್ಟ ಭರವಸೆ ಮತ್ತು ನಂಬಿಕೆ ಫಲವಾಗಿ ಆತನಿಗೆ ಒಳ್ಳೆಯ ಫಲಿತಾಂಶವೇ ಸಿಕ್ಕಿತು.

ಹಾಗೆಯೇ ವೈಚಾರಿಕ ಸಂಘಟನೆಯೊಳಗಾಗಲೀ, ಸಾರ್ವಜನಿಕ ಜೀವನದಲ್ಲಾಗಲೀ ಅಥವಾ ರಾಜಕೀಯ ಪಕ್ಷದಲ್ಲಾಗಲೀ ರೈತನ ರೀತಿಯಲ್ಲಿ ದೂರದೃಷ್ಟಿಯ ಚಿಂತನೆ, ನಿರಂತರ ಪ್ರಯತ್ನ, ಭವಿಷ್ಯದ ಬಗ್ಗೆ ಭರವಸೆ, ವಿಚಾರ ಮತ್ತು ನಾಯಕತ್ವದಲ್ಲಿ ನಂಬಿಕೆ ಇರಲೇ ಬೇಕು. ಸಕಾರಾತ್ಮಕ ವಾತಾವರಣದಲ್ಲಿ ನಾವು ಎಷ್ಟರಮಟ್ಟಿಗೆ ಕ್ರಿಯಾಶೀಲರಾಗಿರುತ್ತೇವೆಯೋ, ಹಾಗೆಯೇ ಪ್ರತಿಕೂಲ ಪರಿಸ್ಥಿತಿಯಲ್ಲೂ ವಿಚಾರದಿಂದ ಮತ್ತು ಕರ್ತವ್ಯದಿಂದ ವಿಮುಖರಾಗದೆ ನಮಗಿರುವ ಇತಿಮಿತಿಗಳಲ್ಲಿ ನಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿರಬೇಕು. ಅವಶ್ಯಕವಾದಾಗ ಮಾತ್ರ ಕಾರ್ಯಕರ್ತರ ಕಡೆ ಗಮನಹರಿಸುವ ನಾಯಕತ್ವ, ಅನಿವಾರ್ಯವಾದಾಗ ಮಾತ್ರ ಕ್ರಿಯಾಶೀಲನಾಗುವ ಕಾರ್ಯಕರ್ತನೆಂದೂ ಪೂರ್ಣಪ್ರಮಾಣದ ಶಾಶ್ವತವಾದ ಫಲವನ್ನು ಪಡೆಯಲು ಸಾಧ್ಯವಿಲ್ಲ.

ಕೆಲವು ಕಾರಣಗಳಿಂದಾಗಿ ಸಂಘಟನೆಯಿಂದ ದೂರ ಉಳಿಯದೆ, ವಿಚಾರದಿಂದ ವಿಮುಖವಾದರೆ, ಮುಂದೊಂದು ದಿನ ಎಲ್ಲಾ ಪರಿಸ್ಥಿತಿಯೂ ನಮ್ಮ ಪರವಾಗಿದ್ದರೂ ನಮಗೆ ನಮ್ಮ ಕರ್ತವ್ಯವೇ ಮರೆತು ಹೋಗಿರುತ್ತದೆ. ಅದಕ್ಕಾಗಿಯೇ ಬಿಜೆಪಿ, ರಾಜಕಾರಣದ ಜೊತೆಗೆ ವರ್ಷವಿಡೀ ಒಂದಲ್ಲಾ ಒಂದು ಸಾಮಾಜಿಕ ಮತ್ತು ಸೇವಾ ಕಾರ್ಯಗಳ ಮೂಲಕ ಸಮಾಜದ ಮಧ್ಯೆ ಮತ್ತು ಕಾರ್ಯಕರ್ತರೊಂದಿಗೆ ಸಂಬಂಧವನ್ನು ಇಟ್ಟುಕೊಂಡಿರುತ್ತದೆ. ಅವಮಾನ, ತೆಗಳಿಕೆ, ನಿರ್ಲ್ಯಕ್ಷ್ಯ ಕುತಂತ್ರಗಳಿಗೆ ಕುಗ್ಗದೆ ತನ್ನ ಕಾರ್ಯವನ್ನು ನಿರಂತರವಾಗಿ ಮಾಡುತ್ತಾ ಬಂದ ಅನೇಕ ಕಾರ್ಯಕರ್ತರ ಪರಿಶ್ರಮವೇ ಇಂದು ಬಿಜೆಪಿಯನ್ನು ವಿಶ್ವದ ಅತೀ ದೊಡ್ಡ ರಾಜಕೀಯ ಪಕ್ಷವನ್ನಾಗಿಸಿದೆ. ಕೇವಲ ಎರಡು ಸ್ಥಾನದಿಂದ ಸಂಪೂರ್ಣ ಬಹುಮತದೊಂದಿಗೆ ಸರ್ಕಾರ ಮಾಡುವ ಹಂತಕ್ಕೆ ತಲುಪಿಸಿದೆ. ಆಗಾಗ್ಗೆ ಏನೇ ಸ್ಥಾನಾಂತರಗಳು, ಸ್ಥಾನ ಪಲ್ಲಟಗಳು ಆದರೂ, ದೇಶದ ಹಿತ ಚಿಂತನೆಯೇ ಬಿಜೆಪಿಯ ಮುಖ್ಯ ಉದ್ದೇಶ.

ಇದಕ್ಕಾಗಿಯೇ ಅನೇಕ ಕಾರ್ಯಕರ್ತರು ಗಟ್ಟಿಯಾಗಿ ಪಕ್ಷದೊಂದಿಗೆ ನಿಂತಿದ್ದಾರೆ, ಮುಂದೆಯೂ ನಿಲ್ಲುತ್ತಾರೆ. ಆದರೆ ಅದು ಅವರ ದೌರ್ಬಲ್ಯವಲ್ಲ, ಮತ್ತೆ ಮಳೆ ಸುರಿದಾಗ ತಾನು ಮಾಡುತ್ತಿದ್ದ ಕೃಷಿಯ ಕಾಯಕ ಮರೆಯಬಾರದು ಎನ್ನುವ ಆ ರೈತನ ರೀತಿಯ ಕಳಕಳಿ ಮತ್ತು ಭವಿಷ್ಯದ ಬಗೆಗಿನ ಭರವಸೆ ಮತ್ತು ವಿಚಾರದೊಂದಿಗೆ ಇರುವ ಬದ್ಧತೆ.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**